ಬದಲಾಯಿಸಿದ್ದೇವೆ. ಅದೂ ಕೂಡ 73ನೇ ಅಮೆಂಡ್‌ಮೆಂಟ್ ಪ್ರಕಾರ ಇದೆ. ಹಳ್ಳಿ ಮಟ್ಟದಲ್ಲಿ ನಾವು ಗ್ರಾಮ ಪಂಚಾಯತಿ ಎಂದು ಕರೆಯುತ್ತೇವೆ. ಮೊದಲು ಏನು ಮಂಡಲ್ ಪಂಚಾಯತಿ ಎಂದು ಇತ್ತು, ಅದರ ಬದಲು ಗ್ರಾಮ ಪಂಚಾಯತಿ ಎಂದು ಕರೆಯುತ್ತಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಎಂದು ಕರೆಯುತ್ತಿದ್ದೇವೆ. ಈ ಎಲೆಕ್ಷನ್ಸ್ 1991 ಸೆನ್ಸಸ್ ಪ್ರಕಾರ ನಾವು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಲೇಟೆಸ್ಟ್ ಸೆನ್ಸಸ್ ಏನು ಇದೆ, ಆ ಆಧಾರದ ಮೇಲೆ ನಾವು ಚುನಾವಣೆಗಳನ್ನು ಮಾಡಬೇಕಾಗುತ್ತದೆ. ಸುದೈವದಿಂದ 1991 ಸೆನ್ಸಸ್ ನಮ್ಮ ಕೈ ಸೇರಿರುವುದರಿಂದ ಆ ಆಧಾರದ ಮೇಲೆ ನಾವು ಎಲೆಕ್ಷನ್ಸ್ ಮಾಡಬೇಕಾಗುತ್ತದೆ. ಹಳೆಯ ಡೀಲಿಮಿಟೇಷನ್ ಏನು ಇದೆ, ಅದನ್ನು 1971 ಸೆನ್ಸಸ್ ಪ್ರಕಾರ ಮಾಡಿದ್ದರು. ಅದರ ಪ್ರಕಾರ ನಾವು ಖಂಡಿತವಾಗಿ ಮಾಡುವುದಕ್ಕೆ ಆಗುವುದಿಲ್ಲ. ಇತ್ತೀಚಿನ ಲೇಟೆಸ್ಟ್ ಸೆನ್ಸಸ್ ಏನು ಇದೆ, ಆ ಆಧಾರದ ಮೇಲೆಯೇ ನಾವು ಡೀಲಿಮಿಟೇಷನ್ ಮತ್ತು ಎಲೆಕ್ಷನ್ಸ್ ಮಾಡಬೇಕಾಗುತ್ತದೆ. ಈ ಗ್ರಾಮ ಪಂಚಾಯತಿಯಲ್ಲಿ ಅದರ ಜನಸಂಖ್ಯೆಯ ಮಿತಿಯನ್ನು ಇಳಿಸಿದ್ದೇವೆ. ಐದು ಸಾವಿರದಿಂದ ಏಳು ಸಾವಿರಕ್ಕೆ ಇಳಿಸಿದ್ದೇವೆ. ಈಗ ಇರತಕ್ಕ ಕಾನೂನಿನಲ್ಲಿ 1971ನೇ ಸೆನ್ಸಸ್ ಪ್ರಕಾರ 8 ಸಾವಿರದಿಂದ 12 ಸಾವಿರ ಇತ್ತು. ಆದರೆ ಈಗ ನಾವು 1991ನೇ ಸೆನ್ಸಸ್ ಪ್ರಕಾರ 5 ಸಾವಿರದಿಂದ 7 ಸಾವಿರ ಎಂದು ಮಾಡಿದ್ದೇವೆ. ಮಲೆನಾಡು ಭಾಗದಲ್ಲಿ 2500 ಜನಸಂಖ್ಯೆ ಇರಬಹುದು ಎಂದು ಮಾಡಿದ್ದೇವೆ. ಮತ್ತೆ ಇದರಲ್ಲಿ ಕೂಡ ಸ್ವಲ್ಪ ವ್ಯತ್ಯಾಸ ಮಾಡುವ ಅಧಿಕಾರವನ್ನು ಈ ಬಿಲ್‌ನಲ್ಲಿ ಇಟ್ಟುಕೊಂಡಿದ್ದೇವೆ. ಏಕೆಂದರೆ, ಕೆಲವು ಕಡೆ ನಾಲ್ಕು ಸಾವಿರ ಮಾಡಬಹುದು ಎಂದು ಬರಬಹುದು ಅಥವಾ ಎಂಟು ಸಾವಿರ ಮಾಡಬಹುದು ಎಂದು ಬರಬಹುದು. ಆ ಅಧಿಕಾರ ಕೂಡ ಇದರಲ್ಲಿ ಇದೆ. ಇದರ ಪರಿಣಾಮವಾಗಿ ಏನು ಆಗುತ್ತದೆ ಎಂದರೆ, ಈಗ 2534 ಮಂಡಲ್ ಪಂಚಾಯತಿಗಳು ಕರ್ನಾಟಕದಲ್ಲಿ ಏನಿವೆ, ಅವು ಹೆಚ್ಚು ಕಡಿಮೆ ಐದು ಸಾವಿರ ಆಗುತ್ತವೆ. ಅಂದರೆ ಈಗ ಇರುವ 2534 ಮಂಡಲ್ ಪಂಚಾಯತಿಗಳು ಹೋಗಿ ಅದರ ಜಾಗದಲ್ಲಿ ಹೆಚ್ಚು ಕಡಿಮೆ ಐದು ಸಾವಿರ ಗ್ರಾಮ ಪಂಚಾಯತಿಗಳು ಸ್ಥಾಪನೆ ಆಗುತ್ತವೆ. ಆದರೆ ಮೂಲಭೂತವಾದ ತತ್ವ ಏನು ಇದೆ, ಅಂದರೆ ನಾಲ್ಕು ನೂರು ಜನಸಂಖ್ಯೆಯಿಂದ ಒಬ್ಬರನ್ನು ಆರಿಸಬೇಕು, 400 ಪಾಪ್ಯುಲೇಷನ್‌ಗೆ ಒಬ್ಬ ಎಲೆಕ್ಟೆಡ್ ಮೆಂಬರ್ ಎಂದು ಏನಿದೆ ಅದು ಅದೇ ರೀತಿ ಇದೆ. ಅದನ್ನು ನಾವು ಬದಲಾಯಿಸುವುದಿಲ್ಲ. ಏಕೆಂದರೆ ಅದು ಪ್ರಗತಿಪರವಾದ ಅಂಶ. ಕಾನ್ಸ್‌ಟಿಟ್ಯೂಷನ್‌ನಲ್ಲೂ ಕೂಡ ಅದೇ ರೀತಿ ಇದೆ. ಆದಕಾರಣ 400 ಪಾಪ್ಯುಲೇಷನ್‌ಗೆ ಒಬ್ಬರು ಮೆಂಬರ್ ಆಗುತ್ತಾರೆ. ಈಗ ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ 10 ಸಾವಿರ ಜನಸಂಖ್ಯೆಗೆ ಒಬ್ಬರು ಮೆಂಬರ್ ಎಂದು ನಾವು ಆರಿಸುತ್ತೇವೆ. ಈಗ ಅದಕ್ಕೆ ಬರುವುದಕ್ಕಿಂತ ಮುಂಚೆ ಈ ಗ್ರಾಮ ಪಂಚಾಯತಿ ಮಟ್ಟಕ್ಕೆ ಹೇಳಬೇಕಾದರೆ ಛೇರ್ಮನ್ ಅವರನ್ನು ನೇರವಾಗಿ ಆರಿಸಬೇಕೇ? ಮೆಂಬರ್ಸ್‌ನಿಂದ ನೇರವಾಗಿ ಆರಿಸಬೇಕೇ? ಅಥವಾ ಡೈರೆಕ್ಟ್ ಎಲೆಕ್ಷನ್ ಏಕೆ ಮಾಡಬಾರದು ಎಂಬ ವಿಚಾರ ನಮ್ಮ ಪಕ್ಷದಲ್ಲಿ ಕೂಡ ಇದೆ, ಹಾಗೂ ಎಲ್ಲಾ ಕಡೆ ಇದೆ. ಇದರ ಬಗ್ಗೆ ಎರಡು ಅಭಿಪ್ರಾಯಗಳಿವೆ. ನಾವು ಈಗ ಮಂಡಿಸಿದ ಮಸೂದೆಯಲ್ಲಿ ಇಂಡೈರೆಕ್ಟಾಗಿ ಇಟ್ಟಿದ್ದೇವೆ. ಆದರೆ ಆ ಛೇರ್ಮನ್ ಡೈರೆಕ್ಟಾಗಿ ಆರಿಸಬೇಕು ಎಂಬ ಒಂದು ಅಭಿಪ್ರಾಯಕ್ಕೆ ತಾವು ಬರುವುದಾದರೆ ಅದರ ಬಗ್ಗೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ ಅದರ ಬಗ್ಗೆ ಚರ್ಚೆ ಆಗಲಿ. ಚರ್ಚೆ ಆದ ನಂತರ ನಾವು ಒಂದು ತೀರ್ಮಾನಕ್ಕೆ ಬರಲಿಕ್ಕೆ ಸಾಧ್ಯ ಆಗುತ್ತದೆ. ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ಹತ್ತು ಸಾವಿರಕ್ಕೆ ಒಬ್ಬ ಮೆಂಬರ್ ಎಂದರೆ ಹೆಚ್ಚು ಕಡಿಮೆ ಎರಡು ಲಕ್ಷ ಜನಸಂಖ್ಯೆ ಇದ್ದರೆ 15-20 ಜನ ಮೆಂಬರ್ಸ್ ಆಗುತ್ತಾರೆ. ಮತ್ತೆ ಕೆಲವು ಕಡೆ ಒಂದು ಲಕ್ಷಕ್ಕೂ ಕಡಿಮೆ ಜನಸಂಖ್ಯೆ ಇದ್ದರೆ ಆಗ ಮೆಂಬರ್ಸ್ ಬಹಳ ಕಡಿಮೆ ಆಗಬಹುದು ಎಂದು ಹೇಳಿ ಅಂತಹ ಕಡೆ ಕನಿಷ್ಟ 11 ಮೆಂಬರ್ಸ್ ಆದರೂ ಇರಬೇಕು ಎಂದು 5TH

ಮಾಡಿದ್ದೇವೆ, in such areas where the population is less than 1 lakh, ಜಿಲ್ಲಾ ಪಂಚಾಯತಿ ಏನು ಇದೆ, ಇಲ್ಲಿ 50 ಸಾವಿರ ಜನಸಂಖ್ಯೆಗೆ ಒಬ್ಬರು ಮೆಂಬರ್ ಇರಬೇಕು ಎಂದು ಮಾಡಿದ್ದೇವೆ. ಇದರ ಬಗ್ಗೆಯೂ ಚರ್ಚೆ ಮಾಡಬಹುದು. 50 ಸಾವಿರ ಅಥವಾ 40 ಸಾವಿರ ಎಂದು ಮಾಡುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ ಮುಖ್ಯವಾದ ವಿಚಾರವೇನೆಂದರೆ, ಈಗ ಇರತಕ್ಕ ಆಕ್ಟ್‌ನಲ್ಲಿ 28 ಸಾವಿರಕ್ಕೆ ಒಬ್ಬ ಮೆಂಬರ್ ಇದ್ದಾರೆ. ಅದು 1971ರ ಸೆನ್ಸಸ್ ಪ್ರಕಾರ. 10 ವರ್ಷಕ್ಕೆ 15 ಪರ್ಸೆಂಟ್ ಎಂದರೆ 25 ಪರ್ಸೆಂಟ್ ಜನಸಂಖ್ಯೆ ಜಾಸ್ತಿ ಆಗುತ್ತದೆ. ಅಂದರೆ 25 ವರ್ಷದ ಹಿಂದೆ ಮಾಡಿರತಕ್ಕದ್ದು ಅದು. ಆದ್ದರಿಂದ 50 ಪರ್ಸೆಂಟ್ ನಾವು ಜನಸಂಖ್ಯೆ ಜಾಸ್ತಿ ಮಾಡಿದರೆ ಇದು 40 ಅಥವಾ 50 ಸಾವಿರಕ್ಕೆ ಒಬ್ಬ ಮೆಂಬರ್ ಎಂದು ಮಾಡುವುದರಲ್ಲಿ ಏನೂ ತೊಂದರೆ ಇಲ್ಲ. ಈಗ ನಾವು ಗ್ರಾಮ ಪಂಚಾಯತಿಯನ್ನು ಪಕ್ಷರಹಿತವಾಗಿ ನಡೆಸಬೇಕು. ಇದನ್ನು ನಾವು ನಮ್ಮ ಕಾನೂನಿನಲ್ಲಿ ಸೇರಿಸಿಬಿಟ್ಟಿದ್ದೇವೆ. That Grama Panchayath elections will be on non party basis. ಇದು ಬಹಳ ಮುಖ್ಯವಾದ ಅಂಶವಾಗಿದೆ. ಏಕೆಂದರೆ, ಇದೊಂದು ಪ್ರಯೋಗ ಕೂಡ. ಈ ಪ್ರಯೋಗ ಯಶಸ್ವಿಯಾದರೆ ಇಡೀ ಪಂಚಾಯತ್ ರಾಜ್ ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆ ಮೇಲೆ ಒಂದು ರೀತಿಯಾದ ಪರಿಣಾಮವನ್ನು ಉಂಟು ಮಾಡಬಹುದೆಂದು ನಮ್ಮ ಆಶಯವಿದೆ. ಇವೊತ್ತು ಗ್ರಾಮ ಮಟ್ಟದಲ್ಲಿ ಪಕ್ಷಗಳ ಘರ್ಷಣೆಯಿಂದ ಯಾವ ಒಂದು ವಾತಾವರಣ ಉಂಟಾಗಿದೆಯೆಂಬುದು ಸರ್ವರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಆ ಕಾರಣ ಪಕ್ಷರಹಿತವಾಗಿ ಗ್ರಾಮಮಟ್ಟದಲ್ಲಿ ಚುನಾವಣೆ ನಡೆಸಬೇಕು. ಅಷ್ಟೇ ಅಲ್ಲ, ಪ್ರತಿಯೊಂದು ಗ್ರಾಮಕ್ಕೂ ಒಂದು ಲಕ್ಷ ರೂಪಾಯಿ ಅನುದಾನ ಕೊಡಬೇಕೆಂದು ಈ ವಿಧೇಯಕದಲ್ಲಿ ನಾವು ಸೇರಿಸಿದ್ದೇವೆ. ಇದು ಹಣಕಾಸಿನ ದೃಷ್ಟಿಯಿಂದ ಬಹಳ ಮುಖ್ಯವಾದ ಅಂಶವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಇವೊತ್ತು ತಮಗೆ ಗೊತ್ತಿರುವಂತೆ, ರೂ.7.50 ಪೈಸೆ ಪರ್ ಕ್ಯಾಪಿಟಾ ಗ್ರಾಂಟ್ ಎಂದು ಇದೆ. ಅಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಗ್ರಾಮಾಂತರ ಜನಸಂಖ್ಯೆ 3 ಕೋಟಿ ಎಂದು ಇಟ್ಟುಕೊಂಡರೆ 20-21 ಕೋಟಿ ರೂಪಾಯಿಗಳನ್ನು ಮಾತ್ರ ನಾವು ಪರ್ ಕ್ಯಾಪಿಟಾ ಗ್ರಾಂಟ್ ಎಂದು ಕೊಡುತ್ತಿದ್ದೇವೆ. ಈಗ ಅದರ ಜಾಗದಲ್ಲಿ ಪ್ರತಿಯೊಂದು ಪಂಚಾಯಿತಿಗೂ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ವಿಧೇಯಕದಲ್ಲಿ ನಾವು ಸ್ಪಷ್ಟವಾಗಿ ಬರೆದಿದ್ದೇವೆ. 5 ಸಾವಿರ ಪಂಚಾಯಿತಿಗಳಿಗೆ ಒಂದು ಲಕ್ಷ ರೂಪಾಯಿ ಎಂದರೆ ಒಟ್ಟು 50 ಕೋಟಿ ರೂಪಾಯಿಗಳಾಯಿತು. ಎಲ್ಲಿ 20 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೆವು, ಅಲ್ಲಿ ಇವೊತ್ತು ನಾವು 50 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈ ವಿದೇಯಕದಲ್ಲಿ recurring will be more by Rs. 38 crores ಎಂದು ಏನು ನಾವು ಫೈನಾನ್ಸಿಯಲ್ ಇಂಪ್ಲಿಕೇಷನ್ಸ್ ಬರೆದಿದ್ದೇವೆ, ಅದರಲ್ಲಿ ಈ ಅಂಶ ಬಹಳ ಮುಖ್ಯವಾದುದು. ಇದು ಬರಿ ಟಿ.ಎ, ಡಿ.ಎ ಕೊಡುವುದಕ್ಕಲ್ಲ. ಆ ಒಂದು ಭಾವನೆ ಬರಬಾರದು. ಸದಸ್ಯರುಗಳ ಸಂಖ್ಯೆ ಜಾಸ್ತಿ ಮಾಡಿ ಟಿ.ಎ, ಡಿ.ಎ. ಕೊಡುವುದಕ್ಕೆ ಕೋಟಿಗಟ್ಟಳೆ ಹಣ ಖರ್ಚು ಮಾಡುತ್ತಿದ್ದಾರೆ ಎಂಬ ಅಭಿಪ್ರಾಯ ಜನರಲ್ಲಿ ಬರುವುದಕ್ಕೆ ಇದರಲ್ಲಿ ಜಾಗ ಇಲ್ಲ. ಏಕೆಂದರೆ,Rs. 30 crores is the increase in the grant to Grama Panchayath. I think, financially it is an extremely progressive step. ನಾಳೆ ದಿವಸ ನೀವು ಯಾವುದೇ ವಿತ್ತೀಯ ಆಯೋಗವನ್ನು ನೇಮಿಸಿದರೂ ಕೂಡ ಇದನ್ನು ಮೆಚ್ಚುವಂಥ ರೀತಿಯಲ್ಲಿ ಈ ಕಾರ್ಯಕ್ರಮವನ್ನು ಆಗಲೇ ತೆಗೆದುಕೊಂಡಿದ್ದೇವೆ. ಕಾರಣವೇನೆಂದರೆ, ಗ್ರಾಮ ಪಂಚಾಯಿತಿಯನ್ನು ಸ್ಥಾಪಿಸಿದ ನಂತರ ಅವರಿಗೆ ಎಲೆಕ್ಟ್ರಿಸಿಟಿ ಬಿಲ್ ಕೊಡುವುದಕ್ಕಾಗಬೇಕು, ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು, ಸ್ಯಾನಿಟೇಷನ್ ವ್ಯವಸ್ಥೆ ಮಾಡುವುದಕ್ಕಾಗ ಬೇಕು, ಈ ಮೂರು ಬಹಳ ಮುಖ್ಯವಾದಂಥ ಅಂಶಗಳಾಗಿವೆ. ಇವುಗಳನ್ನು ಮಾಡದೆ ಹೋದರೆ, ಸುಮ್ಮನೆ ನಾವು ಬೋರ್ಡ್ ಹಾಕಿದರೆ ಇದು ಪಂಚಾಯತ್ ರಾಜ್ ಆಗುವುದಿಲ್ಲ. ನನ್ನ ದೃಷ್ಟಿಯಲ್ಲಿ ಗ್ರಾಮ

ಮಟ್ಟದಲ್ಲಿರತಕ್ಕಂಥ ಒಂದು ಸಂಸ್ಥೆ ಏನಿದೆ, ಅದಕ್ಕೆ ತನ್ನ ಮೂಲ ಕರ್ತವ್ಯ ಮಾಡುವುದಕ್ಕೆ ಸಾಕಷ್ಟು ಹಣ ಕೊಡಬೇಕು, ಮತ್ತು ಗ್ರಾಮ ಸಭೆ ಬಗ್ಗೆ ನಾನು ನಂತರ ಹೇಳುತ್ತೇನೆ. ಗ್ರಾಮ ಸಭೆಯನ್ನು ಪರಿಣಾಮಕಾರಿಯಾಗಿ ನಡೆಸಬೇಕು. ಆದಕಾರಣ Rs. 1 lakh per grama panchayath. Even though number is increased to 5,000 grama panchayaths, 5000 x 1 lakh = Rs.50 crores. This is a major financial measure in this Bill. ಮತ್ತೆ ಈ ಹಣ ಉಪಯೋಗಿಸಿ, ಎಲೆಕ್ಟ್ರಿಸಿಟಿ, ಕುಡಿಯುವ ನೀರು ಹಾಗೂ ಸ್ಯಾನಿಟೇಷನ್ ಸೌಲಭ್ಯಗಳು ಚೆನ್ನಾಗಿ ನಡೆಯಲೆಂದು ನಾನು ಹಾರೈಸುತ್ತೇನೆ. ಇನ್ನು ಎಕ್ಸ್-ಆಫಿಷಿಯೋ ಮೆಂಬರ್ಸ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ತಾಲ್ಲೂಕು ಮಟ್ಟದಲ್ಲಿ ಅಧ್ಯಕ್ಷರೇನಿದ್ದಾರೆ, ಅವರು ಜಿಲ್ಲಾ ಮಟ್ಟದಲ್ಲಿ ಎಕ್ಸ್-ಅಫಿಷಿಯೋ ಮೆಂಬರ್ ಆಗುತ್ತಾರೆ. ಅದೇ ರೀತಿ ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಯಾರು ಆರಿಸಿ ಬರುತ್ತಾರೋ, ಅವರೆಲ್ಲರನ್ನೂ ತಾಲ್ಲೂಕು ಮಟ್ಟದಲ್ಲಿ ಎಕ್ಸ್-ಅಫಿಷಿಯೋ ಮೆಂಬರುಗಳನ್ನಾಗಿ ನಮಗೆ ಇಚ್ಛೆ ಇದ್ದರೂ ಕೂಡ ನೇಮಕ ಮಾಡುವುದಕ್ಕಾಗಲಿಲ್ಲ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕಾರಣವೇನೆಂದರೆ, ಸಾಮಾನ್ಯವಾಗಿ ಎಕ್ಸ್ ಆಫೀಷಿಯೋ ಮೆಂಬರ್ಸ್ ಸಂಖ್ಯೆ ಎಲೆಕ್ಟೆಡ್ ಮೆಂಡರ್ಸ್‌ಗಿಂತ ಆದಷ್ಟು ಮಟ್ಟಿಗೆ ಜಾಸ್ತಿ ಇರಬೇಕು. ಆ ಕಾರಣ ನಾವು ತಾಲ್ಲೂಕು ಮಟ್ಟದಲ್ಲಿ 20 ಪರ್‌ಸೆಂಟ್ ಬೈ ರೊಟೇಷನ್ ಅಧ್ಯಕ್ಷರನ್ನು ಎಕ್ಸ್-ಆಫೀಷಿಯೋ ಮೆಂಬರ್ಸ್ ಎಂದು ಮಾಡಿದ್ದೇವೆ. ಮತ್ತು ಆಯಾಯ ಗ್ರಾಮದ ವಿಷಯ ಬಂದಾಗ ಅವರನ್ನು ವಿಶೇಷ ಆಹ್ವಾನಿತರಾಗಿ ಕರೆಯಲಿಕ್ಕೆ ತೊಂದರೆ ಏನೂ ಇಲ್ಲ. ಏಕೆಂದರೆ ಹಳ್ಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ಏನು ವ್ಯವಸ್ಥೆ ಇದೆ ಅದಕ್ಕೆ ನೇರವಾಗಿ ಸಂಬಂಧಪಟ್ಟಿರ ಬೇಕೆಂದು ಮಾಡಿದೆ. ಎಂ.ಪಿ., ಎಂ.ಎಲ್.ಎ., ಮತ್ತು ಎಂ.ಎಲ್.ಸಿ ಇವರುಗಳು ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಹೀಗೆ ಎರಡೂ ಕಡೆಗಳಲ್ಲಿ ex-officio members ಆಗಿರುತ್ತಾರೆ. MLAs, MLCs, they will be ex-officio members in the taluk level and district level also. ಏಕೆಂದರೆ ಅವರ ಅನುಭವಗಳು ನಮಗೆ ಬೇಕು, Ex-officio members ಆಗಿ ಇದ್ದರೂ ಕೂಡ ಅವರಿಗೆ ಅಧ್ಯಕ್ಷರ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕಿಲ್ಲ. ಆದರೆ ಬಾಕಿ ಎಲ್ಲಾ ಕೆಲಸಗಳಲ್ಲಿ ಸಹ ಅವರಿಗೆ ಮತದಾನ ಮಾಡುವ ಹಕ್ಕು ಇರುತ್ತದೆ. ಅಂದರೆ ಅಧ್ಯಕ್ಷರ ಚುನಾವಣೆ ಒಂದನ್ನು ಬಿಟ್ಟು ಉಳಿದ ಎಲ್ಲಾ ಕೆಲಸಗಳಲ್ಲಿ ಎಂ.ಪಿ, ಎಂ.ಎಲ್.ಎ, ಎಂ.ಎಲ್.ಸಿಗಳಿಗೆ ಅಥವಾ ಯಾರನ್ನು ನಾವು ex-officio members ಆಗಿ ನೇಮಕ ಮಾಡುತ್ತೇವೆ. ಅವರಿಗೆ ಮತದಾನದ ಹಕ್ಕು ಇರುತ್ತದೆ. ಇನ್ನು ರಿಮೂವರ್ ಬಗ್ಗೆ ಒಂದು ಮಾತನ್ನು ಹೇಳ ಬಯಸುತ್ತೇನೆ. ಅದೇನೆಂದರೆ; ಅಧ್ಯಕ್ಷರನ್ನು ತೆಗೆಯಬೇಕಾದರೆ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಮೆಜಾರಿಟಿಯಿಂದ ತೆಗೆಯಬಹುದು ಎಂದು ಇದೆ. ನಾನು ವೀರೇಂದ್ರಪಾಟೀಲರ ಮಂತ್ರಿಮಂಡಳದಲ್ಲಿ ಮಂತ್ರಿಯಾಗಿದ್ದಾಗ ಇದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಆ ಕಡೆಯ ಮತ್ತು ಈ ಕಡೆಯ ಎರಡೂ ಕಡೆಯ ಸದಸ್ಯರುಗಳು ಇದರ ಬಗ್ಗೆ ಹೇಳಿದ್ದಾರೆ . Simple majority removal at district level, taluk level, but not at the grama level. ಗ್ರಾಮಮಟ್ಟದಲ್ಲಿ ಮೂರನೇ ಎರಡು ಭಾಗದಷ್ಟು ಉಳಿಸಿ ಕೊಂಡಿದ್ದೇವೆ. ಈಗ ಗ್ರಾಮಮಟ್ಟದಲ್ಲಿ ಅಧ್ಯಕ್ಷರ ಚುನಾವಣೆ ನೇರವಾಗಿ ಇರಬೇಕೇ ಸದಸ್ಯರಿಂದ ಆಗಬೇಕೇ ಎನ್ನತಕ್ಕ ಪ್ರಶ್ನೆ ಇನ್ನೂ ಮುಕ್ತವಾಗಿದೆ. ಇದರ ಬಗ್ಗೆ ನಾವು ಇನ್ನೂ ತೀರ್ಮಾನ ಮಾಡಬೇಕಾಗಿದೆ. ಈಗ ಒಂದು ವೇಳೆ ನೇರವಾಗಿ ಅಧ್ಯಕ್ಷರ ಚುನಾವಣೆಯನ್ನು ಮಾಡಬೇಕೆಂದರೆ ಅವರನ್ನು ತೆಗೆಯುವುದು ಹೇಗೆ ಎಂಬುದನ್ನೂ ಸಹ ಗಮನಿಸಬೇಕು.

ಗ್ರಾಮಮಟ್ಟದಲ್ಲಿ ನೇರವಾಗಿ ಚುನಾವಣೆಯಾದರೆ ಅವರನ್ನು ತೆಗೆಯಲು ಎರಡು ಮಾರ್ಗಗಳಿವೆ. ಒಂದನೆಯದಾಗಿ ಗ್ರಾಮ ಸಭೆಯನ್ನು ಕರೆದು majority of the grama sabha ಎನ್ನುವುದು ಒಂದು. ಅದು ಬಹಳ ಕಷ್ಟವಾಗುತ್ತದೆಂದರೆ 2/3 of the elected members ಎಂದು ಮಾಡಬಹುದು. Chairman, can be removed by the 2/3 of the elected members. I have an open mind on that. They are the alternatives. And if you opt in this House for direct election at the grama level, you must also give thought as to how to remove him - he can be removed either by a majority of the grama sabha or whether he can be removed by 2/3 of the elected members. ಇದರ ಬಗ್ಗೆ ನಾನು ಆ ವಿಷಯ ಬಂದಾಗ ಏನನ್ನು ಹೇಳಬೇಕೋ ಅದನ್ನು ಹೇಳುತ್ತೇನೆ. ಆದ್ದರಿಂದ ಈ ಸಂದರ್ಭದಲ್ಲಿ ಇಷ್ಟನ್ನು ಮಾತ್ರ ಹೇಳಿ ಬೇರೆ ವಿಷಯಕ್ಕೆ ಹೋಗುತ್ತೇನೆ. ಇನ್ನು ಮೀಸಲಾತಿಯ ಬಗ್ಗೆ ಹೇಳುವುದಾದರೆ; ಕಾನೂನಿನ ಪ್ರಕಾರ ಎಸ್.ಸಿ, ಎಸ್.ಟಿ ಜನಾಂಗದವರಿಗೆ ಏನು ಪ್ರಪೋರ್ಷನ್ ಇದೆ, ಅದರ ಪ್ರಕಾರ ರಿಸರ್ವೇಷನ್ ಮಾಡಬೇಕೆಂದು ಕಾನ್ಸ್‌ಟಿಟ್ಯೂಶನಲ್ ಅಮೆಂಡ್‌ಮೆಂಟ್‌ನಲ್ಲಿ ಇದೆ. ಈಗ ಕರ್ನಾಟಕದಲ್ಲಿ 18 ಪರ್‌ಸೆಂಟ್ ಇದಕ್ಕೆ ಮೀಸಲು ಇಡಬೇಕಾಗಿದೆ. ಅದರಲ್ಲಿ ಎಸ್.ಸಿಯವರಿಗೆ 15 ಪರ್‌ಸೆಂಟ್ ಎಸ್.ಟಿಯವರಿಗೆ 3 ಪರ್‌ಸೆಂಟ್ ಇಲ್ಲಿಯವರೆಗೆ ಇದ್ದದ್ದು. ಈಗ 1991ರ ಸೆನ್ಸ್‌ಸ್‌ನ ಪ್ರಕಾರ ಇವರ ಜನಸಂಖ್ಯೆ:23 ಪರ್‌ಸೆಂಟ್ ಆಗಿದೆ, ಆ ಕಾರಣ 23 ಪರ್‌ಸೆಂಟ್ ರಿಸರ್ವೇಷನ್ ಮಾಡುವುದು ಅನಿವಾರ್ಯವಾಗಿದೆ, ಅದನ್ನು ಮಾಡಲೇ ಬೇಕು. ಅದರಲ್ಲಿ ಇನ್ನೊಂದು ಏನಾಗಿದೆ ಎಂದರೆ Inthat area ಎಂಬ ಪದವನ್ನು ಉಪಯೋಗ ಮಾಡಿದ್ದಾರೆ. ಅಂದರೆ ಯಾವ ಯಾವ ಏರಿಯಾದಲ್ಲಿ ಅವರ ಪ್ರಪೋರ್ಷನ್ ಇರುತ್ತದೋ ಆ ಪ್ರಪೋರ್ಷನ್ ಪ್ರಕಾರ ಮೀಸಲಾತಿಯನ್ನು ಮಾಡಬೇಕೆಂದು ಇದೆ.

1.15 ಪಿ.ಎಂ.

ಅಂದರೆ ಕೆಲವು ಕಡೆ 23 ಪರ್ಸೆಂಟ್‌ಗಿಂತ ಜಾಸ್ತಿ ಪ್ರಪೋರ್ಷನ್ ಇದ್ದರೆ ಅಲ್ಲಿ ಹೆಚ್ಚಿನ ರಿಸರ್ವೇಷನ್ ಮಾಡಬೇಕಾಗುತ್ತದೆಂಬುದು ಇದರ ಅರ್ಥ. ಕಡಿಮೆ ಇದ್ದಾಗ ಏನು ಮಾಡಬೇಕೆಂಬ ಪ್ರಶ್ನೆ ಬರುತ್ತದೆ. ನಾವು ಇಲ್ಲಿ ನಾನ್ ಪೋಲಿಟಿಕಲ್ ಆಗಿ ಚರ್ಚೆ ಮಾಡೋಣ. ನಮ್ಮ ಕರ್ನಾಟಕದಲ್ಲಿ 18 ಪರ್ಸೆಂಟ್ ರಿಸರ್ವೇಷನ್‌ನ್ನು ನಾವು ಮಾಡುತ್ತಲೇ ಬಂದಿದ್ದೇವೆ. ನಮಗೆ ಆ ಅನುಭವ ಇರುವುದರಿಂದ ನಾವು ಈ ಬಿಲ್‌ನಲ್ಲಿ ಏನು ಹೇಳಿದ್ದೇವೆ ಎಂದರೆ, ಕನಿಷ್ಠ 18 ಪರ್ಸೆಂಟ್ ಎಂದು ಹೇಳಿದ್ದೇವೆ. ಅಂದರೆ ಈಗಿರತಕ್ಕ ವ್ಯವಸ್ಥೆ ಹಾಗೇ ಇರಲಿ, ಇದಕ್ಕಿಂತ ಹೆಚ್ಚಿನ ಪ್ರಪೋರ್ಷನ್ ಯಾವ ಭಾಗದಲ್ಲಿದೆ ಅಲ್ಲಿ ಜಾಸ್ತಿ ಪ್ರಪೋರ್ಷನ್ ಕೊಡಬೇಕಾಗುತ್ತದೆ. ಕೆಲವು ಕಡೆ ಷೆಡ್ಯೂಲ್ಡ್ ಕ್ಯಾಸ್ಟ್ ಪಾಪ್ಯುಲೇಷನ್ ಇಲ್ಲವೇ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಸ್ವಲ್ಪ ಹೆಚ್ಚೂ ಕಡಿಮೆ ಇರಬಹುದು. ಆದ್ದರಿಂದ ಆಯಾಯಾ ತಾಲ್ಲೂಕಿನಲ್ಲಿ ಅವರವರ ಪ್ರಪೋರ್ಷನ್ ಪ್ರಕಾರ......

ಶ್ರೀ ವೈ. ಕೆ. ರಾಮಯ್ಯ : ಸುಪ್ರೀಂಕೋರ್ಟ್‌ನವರು 50 ಪರ್ಸೆಂಟ್‌ಗಿಂತ ಜಾಸ್ತಿ ರಿಸರ್ವೇಷನ್‌ನ್ನು ಹಾಕಕೂಡದೆಂದು ಹೇಳಿದ್ದಾರೆ. ಅದನ್ನೂ ತಾವು ಗಣನೆಗೆ ತೆಗೆದು ಕೊಂಡಿದ್ದೀರಾ? ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟನ್ನೂ ತಾವು ಗಣನೆಗೆ ತೆಗೆದು ಕೊಂಡಿದ್ದೀರಾ?

ಶ್ರೀ ಎಂ. ವೈ. ಘೋರ್ಪಡೆ : ಈ ಕ್ಲಾಸನ್ನು ಡಿಸ್ಕಸ್ ಮಾಡುವಾಗ ಬಹಳ ಡೀಟೇಲ್ ಆಗಿ ಡಿಸ್ಕಸ್ ಮಾಡೋಣ. ಚರ್ಚೆಯನ್ನು ಪ್ರಾರಂಭ ಮಾಡಲು ಕ್ಲಾಸ್‌ನ ಮುಖ್ಯಾಂಶಗಳನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಆ ಕ್ಲಾಸ್ ಬಂದಾಗ ಚರ್ಚೆಮಾಡೋಣ. We will

discuss. But, our thinking is, our understanding of the Constitutional amendment is 23% is the State average. ಆದರೆ 'in that area' ಎಂದು ಹೇಳಿರುವುದರಿಂದ ಕೆಲವು ಏರಿಯಾಗಳಲ್ಲಿ ಜಾಸ್ತಿ ಇದ್ದರೆ ಜಾಸ್ತಿ ಕೊಡಬೇಕಾಗುತ್ತದೆ. ಇನ್ನು ಕೆಲವು ಕಡೆ ಕಡಿಮೆ ಕೊಡಬೇಕಾಗಬಹುದು. ಆದರೇ ಸ್ಟೇಟ್ ಆವರೇಜ್ 23 ಪರ್ಸೆಂಟ್. ಈಗಾಗಲೇ 18 ಪರ್ಸೆಂಟ್ ಎಂಬುದು ಜನರಿಗೆ ಚೆನ್ನಾಗಿ ಅಭ್ಯಾಸವಾಗಿ ಹೋಗಿದೆ. ಎಷ್ಟೇ ಜನಸಂಖ್ಯೆ ಇದ್ದರೂ ಕೂಡ ನಾವು 18 ಪರ್ಸೆಂಟ್ ರಿಸರ್ವೇಷನನ್ನು ಮಾಡುತ್ತಲೇ ಬಂದಿದ್ದೇವೆ. ನಾವು ಇದನ್ನು ಕೈ ಬಿಟ್ಟರೆ ಆ ಜನಕ್ಕೆ ಏತಕ್ಕೆ ಕೈ ಬಿಟ್ಟರು ಎಂದು ಅರ್ಥವಾಗುವುದಿಲ್ಲ. It is wiser to keep minimum 18%. ಆ ಕ್ಲಾಸ್ ಬಂದಾಗ ಚರ್ಚೆ ಮಾಡೋಣ. ಈಗ ಸುಪ್ರೀಂ ಕೋರ್ಟ್‌ನವರು ಜನರಲಿ ಇನ್ ಪ್ರಪೋರ್ಷನ್ ಟು ದಿ ಪಾಪ್ಯುಲೇಷನ್ ಎಂದು ಹೇಳಿದ್ದಾರೆ. ಹಾಗೆಂದ ತಕ್ಷಣ ಮಿನಿಮಂ ರಿಸರ್ವೇಷನ್ ನಾವು ಮಾಡಲೇಬೇಕೆಂದು ಎಲ್ಲೂ ಹೇಳಿಲ್ಲ. ಆದ್ದರಿಂದ ಇದರ ಬಗ್ಗೆ ನಾವು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಬ್ಯಾಕ್‌ವರ್ಡ್ ಕ್ಲಾಸ್ ರಿಸರ್ವೇಷನ್ ಏನಿದೆ, ಅದು ಎನೇಬ್ಲಿಂಗ್ ಮೇ ರಿಸರ್ವ್ ಎಂದು ಇದೆ. ಎಸ್. ಸಿ.; ಎಸ್.ಟಿ; ಶಲ್ ಎಂದು ಇದೆ. ಬ್ಯಾಕ್‌ವರ್ಡ್‌ಕ್ಲಾಸ್ ರಿಸರ್ವೇಷನ್ ಮಾಡುವಾಗ ಎಷ್ಟು ಮಾಡಬೇಕೆಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಇದರಲ್ಲಿ ಮೂರನೇ ಒಂದು ಭಾಗ ಮಾಡಬೇಕೆಂದು ಈ ಬಿಲ್‌ನಲ್ಲಿ ನಾವು ಸೇರಿಸಿದ್ದೇವೆ. ಯೂನಿಫಾರಂ ಆಗಿ ಮೂರನೆ ಒಂದು ಭಾಗ ಎಂದು ಮಾಡಿದ್ದೇವೆ. ಇದು ಪ್ರಪೋರ್ಷನೇಟ್ ಆಗಿ ಅಲ್ಲ. ಪ್ರಪೋರ್ಷನೇಟ್ ಆಗಿ ಮಾಡಬೇಕೆಂದು ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್‌ನಲ್ಲೂ ಕೂಡ ಇಲ್ಲ. ಬ್ಯಾಕ್‌ವರ್ಡ್‌ಕ್ಲಾಸನ್ನು ಬಿಟ್ಟು ಬೇರೆಯದನ್ನು ರಿಸರ್ವೇಷನ್ ಮಾಡತಕ್ಕದ್ದು ರಾಜ್ಯ ಸರ್ಕಾರಕ್ಕೆ ಬಿಟ್ಟಿದ್ದು ಎಂತಲೇ ಇದೆ. ನಾವು ಅದರ ಪ್ರಕಾರ ಮೂರನೇ ಒಂದು ಭಾಗ ಎಂದು ಇಟ್ಟಿದ್ದೇವೆ. ಐಡೆಂಟಿಫಿಕೇಷನ್, ಡೆಫಿನಿಷನ್, ಎಷ್ಟು ಜನ ಬ್ಯಾಕ್‌ವರ್ಡ್ ಆಗಿರಬೇಕು, 90 ಪರ್ಸೆಂಟ್ ಇರಬೇಕೆ, 80 ಪರ್ಸೆಂಟ್ ಇರಬೇಕೇ ಎಂಬ ವಾದಕ್ಕೆ ನಾನು ಹೋಗುತ್ತಿಲ್ಲ. ಇವತ್ತು ನಿಮ್ಮ ಡೆಫಿನಿಷನ್ ಪ್ರಕಾರ 92 ಪರ್ಸೆಂಟ್ ಬ್ಯಾಕ್‌ವರ್ಡ್ ಎಂದು ಕರೆದಿದ್ದೀರಿ. ಆ ಡೆಫಿನಿಷನ್‌ನ್ನು ಆರ್ಟಿಕಲ್ 15(4) ಪ್ರಕಾರ ಮಾಡಿರತಕ್ಕದ್ದು. ಈ ಡೆಫಿನಿಷನ್ ಏನಿದೆ ಇದನ್ನು ನಮ್ಮ ಕಾನೂನಿನ ಪ್ರಕಾರ ಮತ್ತು 73ನೇ ರಾಜ್ಯಾಂಗ ತಿದ್ದುಪಡಿಯನ್ನು ಗಮನದಲ್ಲಿಟ್ಟುಕೊಂಡು ಮಾಡಿರತಕ್ಕದ್ದು. ಆ ಕಾರಣ ಎಲ್ಲ ಕಡೆ ಮೂರನೆ ಒಂದು ಭಾಗ ಬ್ಯಾಕ್‌ವರ್ಡ್‌ಕ್ಲಾಸ್ ಹೆಸರಿನಲ್ಲಿ ರಿಸರ್ವೇಷನ್ ಮಾಡಿದರೆ ತಪ್ಪಾಗಲಿಕ್ಕಿಲ್ಲವೆಂದು ನಮ್ಮ ಭಾವನೆ. ಏತಕ್ಕೆಂದರೆ, ಅದು 33 ಪರ್ಸೆಂಟ್ ಮತ್ತು ಇದು 23 ಪರ್ಸೆಂಟ್ - 55 ಪರ್ಸೆಂಟ್ ಆಗುತ್ತದೆ. ಈಗ ಇರುವ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ಈ 68 ಪರ್ಸೆಂಟ್ ಎಂದು ನೀವು ಮಾಡಿದ್ದೀರಲ್ಲ, ನಾವೇ ಮಾಡಿದ್ದೇವೆ. Backward classes 50% and SC/ST 18%. Total 68 percent ಅದಕ್ಕೆ ಇನ್ನೂ ಬೇರೆ ರಿಸರ್ವೇಷನ್ ಸೇರಿಸಿದರೆ 72 ಪರ್ಸೆಂಟ್ ಆಗುತ್ತದೆ. ಅದನ್ನು ಕೂಡ ಈ ಕ್ಲಾಸ್ ಬಂದಾಗ ಚರ್ಚೆ ಮಾಡೋಣ. ಏತಕ್ಕೆಂದರೆ ಇವತ್ತು 68 ಪರ್ಸೆಂಟ್ ಏನಿದೆ ಅದನ್ನು ಕಾನೂನು ಬಾಹಿರವಿದೆ ಎಂದು ಯಾವ ಕೋರ್ಟ್ ಕೂಡ ಇನ್ನೂ ಹೇಳಿಲ್ಲ. ಆದ ಕಾರಣ ನಾವು ಇಲ್ಲಿ 55 ಪರ್ಸೆಂಟ್ ಎಂದು ಮಾಡಿದರೆ ಅದು ಕಾನೂನಿಗೆ ವ್ಯತಿರಿಕ್ತವಾಗಿ ಆಗಲಿಕ್ಕೆ ಇಲ್ಲವೆಂದು ನಮ್ಮ ಆಶಯ. ಆದರೆ ಈ ಕ್ಲಾಸ್ ಬಂದಾಗ ನಿಮ್ಮ ಅಭಿಪ್ರಾಯಗಳೇನೆಂಬುದನ್ನು ನಾನು ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಮಹಿಳೆಯರಿಗೆ ರಿಸರ್ವೇಷನ್ ಇದೆಯಲ್ಲ, ಇದು ಅಡಿಷನಲ್ ಅಲ್ಲ. ಇದು ರಿಸರ್ವ್ ಕ್ಯಾಟಗರಿ ಇರಲಿ, ಅನ್‌ರಿಸರ್ವ್ ಕ್ಯಾಟಗರಿ ಇರಲಿ, ಅದರಲ್ಲಿ ಮೂರರಲ್ಲಿ ಒಂದು ಭಾಗ ಹೆಣ್ಣುಮಕ್ಕಳು ಇರಬೇಕೆಂದು ರೆಸಲ್ಯೂಷನ್ ಇದೆ. It is not additional to this. Real reservation 22% + 33% ಅಂದರೆ 55 ಪರ್ಸೆಂಟ್. ಈ ಹೆಣ್ಣು ಮಕ್ಕಳ ರಿಸರ್ವೇಷನ್ ಏನಿದೆ. it is 1/3rd - both the reserved category and the unreserved category.

ಈಗ ಇರುವ ಕಾನೂನಿನಲ್ಲಿ ಚೀಫ್ ಸೆಕ್ರೆಟರಿ ಎಂದು ಏನು ಕರೆಯುತ್ತಿದ್ದರು, ಅವರನ್ನು ಈಗ ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಎಂದು ಏನು ಕರೆಯುತ್ತಿದ್ದರು, ಅವರನ್ನು ಈಗ ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಎಂದು ಕರೆಯುತ್ತಿದ್ದೇವೆ. ಈಗ ಪವರ್ಸ್ ಅಂಡ್ ಫಂಕ್ಷನ್ಸ್ ಬಗ್ಗೆ ಹೇಳುವುದಾದರೆ ಇದು ಬಹಳ ವ್ಯಾಪಕವಾಗಿ ಎಷ್ಟು ಪವರ್ಸ್ ಅಂಡ್ ಫಂಕ್ಷನ್ಸ್ ನಾವು ಡಿಸೆಂಟ್ರಲೈಸ್ ಮಾಡಲಿಕ್ಕೆ ಸಾಧ್ಯ ಆ ಪ್ರಯತ್ನವನ್ನು ನಾವು ಇಲ್ಲಿ ಮಾಡಿದ್ದೇವೆ. ರಾಜ್ಯಾಂಗದ 11ನೇ ಷೆಡ್ಯೂಲ್ ಏನಿದೆ ಆ 11ನೇ ಷೆಡ್ಯೂಲ್ ಆಧಾರದ ಮೇಲೆ ನಾವು ಈ ಕೆಲಸ ಮಾಡಿದ್ದೇವೆ. ಆ 11ನೇ ಷೆಡ್ಯೂಲ್‌ನಲ್ಲಿರತಕ್ಕಂಥ ಹೆಡ್ಡಿಂಗ್ಸನ್ನು ಉಪಯೋಗಿಸಿ ಹಳ್ಳಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಯಾವ ಯಾವ ಕಾರ್ಯಕ್ರಮಗಳು ಅವರಿಗೆ ಅನ್ವಯಿಸುತ್ತದೆ, ಅದನ್ನು ನಾವು ಪಟ್ಟಿ ಮಾಡಿ ಆ ಮೂರು ಷೆಡ್ಯೂಲ್ಸ್‌ನಲ್ಲಿ ನಾವು ಸೇರಿಸಿದ್ದೇವೆ. ಇದರ ಕಾರ್ಡಿನಲ್ ಪ್ರಿನ್ಸಿಪಲ್ಸ್ ಏನೆಂದರೆ, ಯಾವ ಮಟ್ಟದಲ್ಲಿ ಯಾವ ಕೆಲಸ ಸೂಕ್ತವಾಗಿ ಮಾಡಲಿಕ್ಕೆ ಸಾಧ್ಯ ಅದು ಆ ಮಟ್ಟದಲ್ಲಿ ನಡೆಯಬೇಕೆಂದು. ಅಂದರೆ ಯಾವುದು ತಾಲ್ಲೂಕು ಮಟ್ಟದಲ್ಲಿ ಮಾಡಲಿಕ್ಕೆ ಸಾಧ್ಯ ಅದು ಜಿಲ್ಲಾಮಟ್ಟದಲ್ಲಿ ನಡೆಯಬೇಕಾದ್ದಿಲ್ಲ. ಯಾವುದು ಹಳ್ಳಿಮಟ್ಟದಲ್ಲಿ ಮಾಡಲಿಕ್ಕೆ ಸಾಧ್ಯ ಅದನ್ನು ತಾಲ್ಲೂಕು ಮಟ್ಟದಲ್ಲಿ ನಾವು ಮಾಡಬೇಕಾದ್ದಿಲ್ಲ. This is the principle of maximum decentralisation. What can be done at the taluk level should not and need not be done at the district level, and what can be done at the village level should not and need not be done at the taluk level. ಅದೇ ನಮ್ಮ ದೃಷ್ಟಿಯಲ್ಲಿ ನೀವು ತಾಲ್ಲೂಕು ಲೆವಲ್‌ನ್ನು ಹಿಂದೆ ಅಬಾಲಿಷ್ ಮಾಡಿ ಎಲ್ಲ ಜಿಲ್ಲಾಮಟ್ಟಕ್ಕೆ ಕೊಟ್ಟಿದ್ದು ಏನಿದೆ ಇದು ವಿಕೇಂದ್ರೀಕರಣ ತತ್ವಕ್ಕೆ ಸ್ವಲ್ಪಮಟ್ಟಿಗೆ ವಿರೋಧವಾಯಿತು ಎಂದು ನನ್ನ ಅಭಿಪ್ರಾಯ. ಏತಕ್ಕೆಂದರೆ instead of decentralising the powers you took away the powers. What could be done at the taluk level was concerntrated at the Zilla level. ಈಗ ಪಂಪ್ ರಿಪೇರಿ ಕೆಲಸ ಹಳ್ಳಿಮಟ್ಟದಲ್ಲಿ ಅಥವಾ ತಾಲ್ಲೂಕ್ ಮಟ್ಟದಲ್ಲಿ ನಡೆಯುವುದನ್ನು ಜಿಲ್ಲಾಮಟ್ಟಕ್ಕೆ ಕೊಟ್ಟರೆ ಗ್ರಾಮದಿಂದ ಜಿಲ್ಲಾಮಟ್ಟಕ್ಕೆ ಹೋಗಿ ರಿಪೇರಿ ಮುಂತಾದವನ್ನು ಮಾಡಿಸುವುದು ಬಹಳ ಕಷ್ಟವಾಗುತ್ತದೆನ್ನುವುದಕ್ಕೆ ಉದಾಹರಣೆ ಕೊಟ್ಟೆ. ಆದಕಾರಣ We have to correct these things and we have tried to maximise the decentralisation. ನಾವು ಅಧಿಕಾರವನ್ನು ಕೊಡುವಾಗ ಎಲೆಕ್ಟೆಡ್ ಬಾಡಿಗೆ ಅಧಿಕಾರವನ್ನು ಕೊಟ್ಟಿದ್ದೇವೆ; ಒಬ್ಬ ವ್ಯಕ್ತಿಗಲ್ಲ; The elected body will exercise the power. Whatever power we give will be exercised by the elected body, not any individual. Officers will be supporting the elected body and are responsible to implement the decisions of the elected body. ಇದು ಬಹಳ ಮುಖ್ಯ. ಏತಕ್ಕೆಂದರೆ ಹಿಂದೆ ನಡೆದದ್ದು ತಮಗೆ ಗೊತ್ತಿದೆ. ಏನು ತಪ್ಪಾದರೂ ಕೂಡ ಅಧಿಕಾರಸ್ಥರು ಎಲೆಕ್ಟೆಡ್ ಜನರ ಮೇಲೆ ಹಾಕಿಬಿಡುತ್ತಿದ್ದರು. ಅವರ ಆದೇಶದ ಪ್ರಕಾರ ನಡೆಯುತ್ತಿತ್ತು ಎಂದು ಹೇಳುತ್ತಿದ್ದರು. ಉದಾಹರಣೆಗಾಗಿ ಗುಲ್ಬರ್ಗಾದಲ್ಲಿ ಏನು ನಡೆಯಿತು, ಇವತ್ತಿಗೂ ಆ ಅಧಿಕಾರಸ್ಥರನ್ನು ಐಡೆಂಟಿಫೈಡ್ ಮಾಡಿ ಅವರಿಗೆ ಶಿಕ್ಷೆ ಕೊಡಲಿಕ್ಕೆ ಆಗಲಿಲ್ಲ. ಆದ ಕಾರಣಕ್ಕಾಗಿ ಈ ಗೊಂದಲ ಬೇಡ. Power is given to the elected body and the officers will implement the decisions of the elected body. ಮತ್ತೆ ಈ ಫಂಕ್ಷನ್ಸ್ ಮತ್ತು ಪ್ರೋಗ್ರಾಮ್ಸ್ ಏನು ನಾವು ಹಂಚಿಕೊಟ್ಟಿದ್ದೇವೆ ಅದು ಯಾರ ಜವಾಬ್ದಾರಿ ಯಾವ ಮಟ್ಟದಲ್ಲಿ ಏನು ಇದೆ ಎಂಬುದರ ಬಗ್ಗೆ ರೂಲ್ಸ್ ಮಾಡುವ ಅಧಿಕಾರವನ್ನು ನಾವು ಇಟ್ಟುಕೊಂಡಿದ್ದೇವೆ. ಯಾವ ಕಾರ್ಯಕ್ರಮ ತೆಗೆದುಕೊಂಡರೂ ಕೂಡ ಸಂಪೂರ್ಣವಾಗಿ ಹಳ್ಳಿಗೆ ಕೊಟ್ಟಿದ್ದೇವೆ, ತಾಲ್ಲೂಕಿಗೆ ಕೊಟ್ಟಿದ್ದೇವೆ, ಜಿಲ್ಲೆಗೆ ಕೊಟ್ಟಿದ್ದೇವೆಂದು ಹೇಳುವುದು ಕಷ್ಟವಾಗುತ್ತದೆ. ಯಾವ ಕಾರ್ಯಕ್ರಮ ತೆಗೆದುಕೊಂಡರೂ ಕೂಡ

ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಹಳ್ಳಿ ಮಟ್ಟದಲ್ಲಿ ಮಾಡುವ ಕೆಲಸ ಇರುತ್ತದೆ; ರಾಜ್ಯಮಟ್ಟದಲ್ಲಿ ಮಾಡುವಂಥ ಕೆಲಸವೂ ಇರಬಹುದು. ಆದಕಾರಣ programmewise, economic-activitywise what is the responsibility of the elected body at each level; ಇದರ ಬಗ್ಗೆ ಸ್ಪಷ್ಟವಾಗಿ ರೂಲ್ಸ್ ಮಾಡುವಂತ ಜವಾಬ್ದಾರಿ ಸರ್ಕಾರಕ್ಕೆ ತಪ್ಪಿದ್ದಲ್ಲ. ಏಕೆಂದರೆ, ತಾವು ಒಂದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗುತ್ತದೆ ; ಇವತ್ತು ನಾವು ರಾಜ್ಯದ ಅಧಿಕಾರವನ್ನು ಹಂಚುತ್ತಿದ್ದೇವೆ. We are not obliged to do it. But out of our own faith in decentralisation, our powers and our officers are being decentralised and put at the disposal of the elected body, and therefore, the government has every right to specify how these programmes should be implemented. ಆನಂತರ ಎಲೆಕ್ಷನ್ ನೇಮಕ ಮಾಡಬೇಕಾಗುತ್ತದೆ. ಏಕೆಂದರೆ, 5 ವರ್ಷಗಳಿಗೊಮ್ಮೆ ಎಲೆಕ್ಷನ್ ನಡೆಯಲೇಬೇಕು. ಅದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಆ ದೃಷ್ಟಿಯಿಂದ ಎಲೆಕ್ಷನ್ ಕಮಿಷನ್ ಮಾಡುತ್ತೇವೆ, ಫೈನಾನ್ಸ್ ಕಮಿಷನ್ ಕೂಡ ಮಾಡುತ್ತೇವೆ. ಅದೇ ರೀತಿ ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿಯನ್ನು ನಾವು ಮಾಡುತ್ತೇವೆ. ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿ ಅಂದರೆ ಇದು ಬರೀ ದುಡ್ಡು ಹಂಚುವಂತ ಸಂಸ್ಥೆ ಅಲ್ಲ. It is not a sanctioning body . It is a planning and co-ordinating body at the district level. ಕೆಳಗಿನಿಂದ ಏನು ಪ್ಲಾನ್ ಮಾಡುತ್ತಾರೆ ಅದು ತಾಲ್ಲೂಕು ಮಟ್ಟಕ್ಕೆ ಬಂದು, ಜಿಲ್ಲಾ ಮಟ್ಟಕ್ಕೆ ಏನು ಬರುತ್ತದೆ, ಅದನ್ನೆಲ್ಲ ಕೋ-ಆರ್ಡಿನೇಟ್ ಮಾಡಿ ರಾಜ್ಯಮಟ್ಟಕ್ಕೆ ಕಳುಹಿಸಿ ಕೊಡುತ್ತಾರೆ. ಇದು ಸ್ಯಾಂಕ್ಷನ್ ಮಾಡುವುದು ಅಲ್ಲ. ಈ ಸಂಸ್ಥೆ ಏನಿದೆ ಇದರಲ್ಲಿ ರೂರಲ್ ಜನ ಮತ್ತು ಅರ್ಬನ್ ಜನ ಸೇರಿರುತ್ತಾರೆ. ಸಂವಿಧಾನದ ತಿದ್ದುಪಡಿಯ ಪ್ರಕಾರ ಅವರವರ ಪ್ರೊಪೋರ್ಷನ್‌ನಲ್ಲಿ ಮೆಂಬರ್ಸ್ ಇರಬೇಕು. 2 / 3 ಭಾಗ ರೂರಲ್ ಪಾಪ್ಯುಲೇಷನ್ ಇದೆ ಎಂದು ನಾವು ಅಂದಾಜು ಇಟ್ಟುಕೊಂಡರೆ 2 / 3rd elected members will be from rural, elected by the Zillz Parishat. 1 /3 ಭಾಗ ಅರ್ಬನ್ ಪಾಪ್ಯುಲೇಷನ್ ಇದ್ದರೆ, 1 /3rd of the members will be elected by the municipalities. ಇದ್ದರಲ್ಲಿ ಇನ್ನೊಂದು ಮಾತು ಹೇಳಿದ್ದಾರೆ. Ex-officio members should not exceed 20% ಎಂದು. ಆದಕಾರಣ ಎಕ್ಸ್-ಅಫಿಷಿಯೋ ಮೆಂಬರ್ಸ್ ಸಂಖ್ಯೆಯನ್ನು ಇಲ್ಲಿ ಜಾಸ್ತಿ ಮಾಡುವುದಕ್ಕೆ ಅವಕಾಶ ಇಲ್ಲ. ನಾವು ಏನು ಮಾಡಿದ್ದೇವೆಂದರೆ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಇದರಲ್ಲಿ ಎಕ್ಸ್ ಅಫಿಷಿಯೋ ಮೆಂಬರ್ ಆಗಿರಬೇಕು ಎಂದು. ನನ್ನ ವಿಚಾರದಲ್ಲಿ ಅವರು ಛೇರ್ಮನ್ ಆಗಿ ಇರಬೇಕು. ಅದನ್ನು ಬಿಲ್‌ನಲ್ಲಿ ಸೇರಿಸುವುದು ಉತ್ತಮ. ಹಾಗೇ ಬಿಡುವುದು ಸರಿಯಲ್ಲ. ಅಧ್ಯಕ್ಷರೇ ಅದಕ್ಕೂ ಅಧ್ಯಕ್ಷರಾಗಿರಬೇಕೆಂದು ಆ್ಯಕ್ಟ್‌ನಲ್ಲಿ ಸೇರಿಸುವುದು ಸರಿಯಾದ ಕ್ರಮ. We will bring a suitable amendment to clarify that position. ಆಮೇಲೆ ಎಂ.ಪಿ. ಮತ್ತು ಮುನಿಸಿಪಲ್ ಪ್ರೆಸಿಡೆಂಟ್; ಅಂದರೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್ ಪ್ರೆಸಿಡೆಂಟ್ ಏನಿರುತ್ತಾರೆ ಅವರು ಎಕ್ಸ್ ಅಫಿಷಿಯೋ ಮೆಂಬರ್ ಆಗಿರಲಿ ಎಂದು ಮಾಡಿದ್ದೇವೆ. ಪಾರ್ಲಿಮೆಂಟ್ ಮೆಂಬರ್ ಇಡೀ ಜಿಲ್ಲೆಗೆ ಸಂಬಂಧಪಟ್ಟವರು ಇರುತ್ತಾರೆ. President of the most important municipality in the district, ಎಂ.ಎಲ್.ಎ, ಎಂ.ಎಲ್.ಸಿ.ಗಳನ್ನು ಪರ್ಮನೆಂಟ್ ಇನ್‌ವೈಟೀಸ್ ಎಂದು ಮಾಡಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ : ಮುನಿಸಿಪಾಲಿಟಿಗೆ ಏನು ಸಂಬಂಧ ಇದೆ?

ಶ್ರೀ ಎಂ. ವೈ. ಘೋರ್ಪಡೆ : 74ನೇ ತಿದ್ದುಪಡಿ ಕೂಡ ಇದೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ಪ್ರಕಾರ ಇಡೀ ವ್ಯವಸ್ಥೆಯನ್ನು ರೂರಲ್-ಅರ್ಬನ್ ಎಂದು ಡಿಸ್ಟಿಂಕ್ಷನ್ ಮಾಡದೆ ಸಮಗ್ರವಾಗಿ ಪ್ಲಾನಿಂಗ್ ಬಾಡಿ ಮಾಡಬೇಕೆಂಬ ವಿಚಾರ ಏನು ಇದೆ, ಅದರ ಪ್ರಕಾರ ಹೋಗುವುದಾದರೆ ಈ ರೀತಿ ಮಾಡಬೇಕಾಗುತ್ತದೆ. ಎಕ್ಸ್ ಅಫಿಶಿಯೋ ಮೆಂಬರ್ಸ್ ಕಡಿಮೆ ಇಟ್ಟು ಎಂಎಲ್ಎ, ಎಂಎಲ್‌ಸಿಗಳನ್ನು ಪರ್ಮನೆಂಟ್ ಇನ್‌ವೈಟೀಸ್ ಎಂದು ಕರೆಯಬಹುದು. ಏಕೆಂದರೆ ಪ್ಲಾನಿಂಗ್ ಮಟ್ಟದಲ್ಲಿ ಅವರ ಅನುಭವ ಕೊಡಲಿ. ಎಕ್ಸ್ ಆಫಿಶಿಯೋ ಮೆಂಬರ್ಸ್ ಕಡಿಮೆ ಇದ್ದರೂ ನಾಮನ್‌ಕ್ಲೇಚರ್‌ನಲ್ಲಿ ನಾವು ಅಷ್ಟು ಮಹತ್ವ ಕೊಡಬೇಕಾಗಿಲ್ಲ. ಶಾಸಕರು ಜಿಲ್ಲಾ ಪ್ಲಾನಿಂಗ್ ಬಾಡಿಯಲ್ಲಿ ಪಾಲ್ಗೊಳ್ಳಬೇಕೆನ್ನುವುದೇ ನಮ್ಮ ಉದ್ದೇಶ. ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಇದು ಏಕಾಏಕಿ ಮಾಡಿರತಕ್ಕ ಕಾನೂನು ಅಲ್ಲ. ನಾನು ವೀರೇಂದ್ರಪಾಟೀಲರ ಮಂತ್ರಿಮಂಡಲದಲ್ಲಿ ಪಂಚಾಯಿತಿ ರಾಜ್ ಮಂತ್ರಿ ಆಗಿದ್ದಾಗ ತಮಗೆ ಗೊತ್ತಿರುವಹಾಗೆ ಡಿವಿಜನಲ್ ಲೆವೆಲ್ ಮೀಟಿಂಗ್ಸ್ ಕರೆದು ಎಲ್ಲರಿಗೂ ಸಾಕಷ್ಟು ಅವಕಾಶ ಕೊಟ್ಟು ಇದೇ ವಿಚಾರದ ಮೇಲೆ, ಆಗ ಈ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಆಗಿರಲಿಲ್ಲ. ಆದರೆ ಯಾವ ರೀತಿಯ ಕಾನ್‌ಸ್ಟಿಟ್ಯೂಷನಲ್ ಅಮೆಂಡ್ ಆಗಬಹುದು ಎಂದು ನಮಗೆ ಗೊತ್ತಿತ್ತು. ಇದೆಲ್ಲಾ ಅಂಶಗಳ ಮೇಲೆ ಎಲ್ಲಾ ಪಕ್ಷದವರೂ ತಮ್ಮ ಅಭಿಪ್ರಾಯ, ವಿಚಾರ ಏನು ವ್ಯಕ್ತಪಡಿಸಿದರು, ಅದನ್ನು ಗಮನದಲ್ಲಿ ಇಟ್ಟುಕೊಂಡೇ ಈ ಬಿಲ್ಲನ್ನು ನಾವು ತಯಾರು ಮಾಡಿದ್ದೇವೆ. ಯಾವ ಬಿಲ್ ಇಡೀ ದೇಶದಲ್ಲಿ ಮಾಡೆಲ್ ಆಗುತ್ತದೆಂದು ಕೇಂದ್ರದವರೇ ವಿಚಾರ ಏನು ವ್ಯಕ್ತ ಮಾಡಿದ್ದಾರೋ, ಇಡೀ ಕರ್ನಾಟಕದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಜನರಿಗೆ ಕನ್‌ಸಲ್ಟ್ ಮಾಡಿ ಮಾಡಿರತಕ್ಕದ್ದು. ಮತ್ತೆ ಸಜೆಷನ್ಸ್ ನಮ್ಮ ಪಕ್ಷದವರು ಕೊಟ್ಟಿದ್ದಾರೆ, ಕೊಡುತ್ತಿದ್ದಾರೆ. ಮತ್ತು ವಿರೋಧ ಪಕ್ಷಗಳಿಂದ ಕೂಡ ಈ ವಿಷಯದಲ್ಲಿ ಯಾರು ಯಾರಿಗೆ ಆಸಕ್ತಿ ಇದೆ ಅವರೂ ಎಷ್ಟೋ ಸಜೆಷನ್ಸ್ ಕೊಟ್ಟಿದ್ದಾರೆ. ಉದಾಹರಣೆಗೆ ಚಂದ್ರೇಗೌಡರ ಜೊತೆ ಇನ್‌ಫಾರ್ಮಲ್ ಡಿಸ್‌ಕಷನ್ಸ್ ಮಾಡುವಾಗ ಎಷ್ಟೋ ವಿಚಾರಗಳನ್ನು ಹೇಳಿದ್ದಾರೆ. ಬೇರೆ ಬೇರೆ ಮಿತ್ರರು ಆ ಕಡೆ, ಈ ಕಡೆಯವರು ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಇದನ್ನು ಡ್ರಾಫ್ಟ್ ಮಾಡುವಾಗ ಮೂವರು ಅಡ್ವೈಸರ್‌ಗಳನ್ನು ನೇಮಕ ಮಾಡಿದ್ದು ತಮಗೆ ಗೊತ್ತಿರಬೇಕು. ಮಿ : ಸತೀಶ್‌ಚಂದ್ರ , ಡಾ: ನಂಜುಂಡಪ್ಪ ಮತ್ತು ಮಿ. ಪಿ. ಆರ್. ನಾಯಕ್. ಈ ಹಿರಿಯ ಅಧಿಕಾರಿಗಳು ಪಂಚಾಯಿತ್ ರಾಜ್ಯ ವ್ಯವಸ್ಥೆಗೆ ನೇರ ಸಂಬಂಧ ಇರತಕ್ಕವರು. ಹಿಂದೆ ಏನು ಕಾನೂನು ಇತ್ತೋ ಅದು ಅವರಿಗೆ ಗೊತ್ತಿದೆ. ನಾನು ಹಿಂದೆ ಫೈನಾನ್ಸ್ ಮಿನಿಸ್ಟರ್ ಆಗಿದ್ದಾಗ, ಪಂಚಾಯಿತ್ ರಾಜ್ಯ ಮಂತ್ರಿ ಇದ್ದಾಗ ಇವರು ನಮಗೆ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ದೆಹಲಿ ಮಟ್ಟದಲ್ಲಿ ರಮೇಶ ಠಾಕೂರ್‌ರವರು ಬಹಳ ಇಂಟರೆಸ್ಟ್ ತೆಗೆದುಕೊಂಡಿದ್ದಾರೆ. ಅದೇ ರೀತಿ ಯುಗೀಂದರ್ ಅವರು, ಮೀನಾಕ್ಷಿ ಸುಂದರಮ್ ಅವರು. ಮತ್ತು ನಮ್ಮ ಇಲಾಖೆಯಲ್ಲಿ ಸೆಕ್ರೆಟರಿಗಳಾದ ಕೆ.ಪಿ. ಪಾಂಡೆಯವರು, ಬಸಪ್ಪನವರು ಹೀಗೆ ಎಲ್ಲರೂ ಬಹಳ ಮನಸ್ಸು ಕೊಟ್ಟು ಇದನ್ನು ಬಿಲ್ ಮಾದರಿ ಮಾಡೋಣ ಎಂದು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ದಿವಸಕ್ಕೆ 10 ರಿಂದ 12 ಗಂಟೆ ಕಾಲ ಕೆಲಸ ಮಾಡಿದ್ದಾರೆ. ಎಲ್ಲರಿಗೂ ನನ್ನ ಧನ್ಯವಾದಗಳು. ಇಷ್ಟೊಂದು ಕಷ್ಟಪಟ್ಟು ಕರ್ನಾಟಕಕ್ಕೆ ಒಂದೇ ಅಲ್ಲ, ಇಡೀ ದೇಶಕ್ಕೆ ಮಾದರಿ ಆಗಲಿ ಎಂದು ಒಂದು ವಿಚಾರವನ್ನು ಇಟ್ಟು ಹೊರಟಾಗ ಅಷ್ಟೇ ಒಂದು ಗಾಂಭೀರ್ಯದಿಂದ ಇದರ ಕಡೆ ಹೋಗಿ ಇದರಲ್ಲಿ ಏನಾದರೂ ಸರಿಪಡಿಸುವ ವಿಚಾರ ಇದ್ದರೆ ಹೇಳಿ. ಇದನ್ನು ಯುನಾನಿಮಸ್ ಆಗಿ ಪಾಸ್ ಮಾಡಿದರೆ ಕರ್ನಾಟಕಕ್ಕೆ ಒಂದು ಹೆಮ್ಮೆಯ ಹಾಗೂ ಗೌರವದ ವಿಷಯವಾಗುತ್ತದೆ. ಆ ಗೌರವದಲ್ಲಿ ನಾವು ಸರಿಸಮಾನವಾಗಿ ಭಾಗಿ ಆಗೋಣ ಎಂದು ಹೇಳಿ, ಇವತ್ತು ಈ ಡೀಸೆಂಟ್ರಲೈಸೇಷನ್‌ನ್ನು ಎಷ್ಟು ಮುಂದೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯ ಆ ಪ್ರಯತ್ನ ನಾವು ಮಾಡಿದ್ದೇವೆ.

ಮತ್ತು ನಮ್ಮ ಕಾರ್ಯಕ್ರಮಗಳನ್ನು ಪ್ರಾಮಾಣಿಕತೆಯಿಂದ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದಕ್ಕೆ ಯಾವ ಒಂದು ವ್ಯವಸ್ಥೆ ಇರಬೇಕೋ ಆ ವ್ಯವಸ್ಥೆಯನ್ನು ಸ್ಥಾಪನೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಆ ದೃಷ್ಟಿಯಿಂದ ಚರ್ಚೆಯಲ್ಲಿ ತಾವು ಭಾಗವಹಿಸಿ ಸೂಕ್ತವಾದ, ರಚನಾತ್ಮಕವಾದ ಸಲಹೆಗಳನ್ನು ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಪ್ರೊ : ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಒಂದೇ ಒಂದು ಮಾಹಿತಿಯನ್ನು ನಮಗೆ ಒದಗಿಸಿ ಕೊಟ್ಟರೆ ಒಳ್ಳೆಯದು. ಯಾವ ಮಾಹಿತಿಯೆಂದು ಮಂತ್ರಿಗಳಿಗೆ ಸೂಚನೆ ಮಾಡುತ್ತಿದ್ದೇನೆ. 1991ರ ಜನಗಣತಿಯ ಷೆಡ್ಯುಲ್ಡ್‌ಕ್ಯಾಸ್ಟ್ ಮತ್ತು ಷೆಡ್ಯುಲ್ಡ್ ಟ್ರೈಬ್ಸ್‌ಗೆ ಸಂಬಂಧಪಟ್ಟ ಹಾಗೆ ಫಿಗರ್ಸ್ ನಿಮ್ಮ ಹತ್ತಿರ ಇದೆ. You have the caste enumeration figures of SCs/STs from 1991 census. ಹಾಗೆಯೇ ಬ್ಯಾಕ್‌ವರ್ಡ್ ಕ್ಲಾಸ್‌ನದು ಇಲ್ಲ. ಷೆಡ್ಯುಲ್ಡ್ ಕಾಸ್ಟ್ ಮತ್ತು ಷೆಡ್ಯುಲ್ಡ್‌ಟ್ರೈಬ್ಸ್ ಕಾಸ್ಟ್ ಎನ್ಯುಮರೇಷನ್ ಸೆನ್ಸಸ್ 1991ರದ್ದು ಏನಿದೆ ಅದನ್ನು ಸದಸ್ಯರಿಗೆಲ್ಲಾ ಒದಗಿಸಿಕೊಟ್ಟರೆ ಡಿಫರೆನ್ಸ್ ವಿರಿಯಾಸ್, ವಿರಿಯಾವ್ಸೆಸ್ ಫಿಗರ್ಸ್ ಇದೆ. ಅದನ್ನಾ ಒದಗಿಸಿಕೊಟ್ಟರೆ ಬಹಳ ಅನುಕೂಲವಾಗುತ್ತದೆ.

Sri M.V. Ghorpade : We will do our best to make that information available.

ಪ್ರೊ : ಎಂ. ಡಿ. ನಂಜುಂಡಸ್ವಾಮಿ : ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಆಗ ನಾವು ಇಲ್ಲಿ ತೀರ್ಮಾನಮಾಡಬೇಕಾಗುತ್ತದೆ. Whether this bill you have tabled today would stand the test of adequate reservation or would be defected on the ground of excessive reservation.

* ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯಮಂತ್ರಿಗಳು ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದ ಹಾಗೆ ಇದೊಂದು ಕ್ರಾಂತಿಕಾರವಾದ ಮಸೂದೆ. ಈ ಮಸೂದೆಯ ಚರ್ಚೆ ವಿಸ್ತೃತವಾಗಿ ವಿಸ್ತಾರವಾಗಿ ಆಗಬೇಕು. ಈ ಚರ್ಚೆ ಅವರ ಆಲೋಚನೆಯಂತೆ ರಾಜ್ಯಕ್ಕೆ ಸೀಮಿತವಾಗದೆ, ರಾಷ್ಟ್ರೀಯ ಮಾದರಿಯ ಮಸೂದೆಯಾಗಬೇಕೆನ್ನುವ ಅವರ ಆಸೆಯೇನು ವ್ಯಕ್ತಪಡಿಸಿದ್ದಾರೆ ಅದಕ್ಕೆ ನಾನೂ ಸಹ ಧ್ವನಿಗೂಡಿಸುತ್ತೇನೆ. ಅದರ ಪ್ರಾರಂಭಕ್ಕೆ ನಾನೊಂದು ಮಾತು ಹೇಳಬೇಕು. ಏನೆಂದರೆ ಇವರು ಈಗ ವಿಕೇಂದ್ರಿಕೃತ ವ್ಯವಸ್ಥೆಯ ವಿಕೃತ ಮಸೂದೆಯನ್ನು ತಂದಿದ್ದಾರೆ. ಎಲ್ಲೆಲ್ಲಿ ವಿಕೃತವಾಗಿದೆ, ಎನ್ನುವುದನ್ನು ಮುಂದೆ ವಿವರವಾಗಿ ಹೇಳುತ್ತೇನೆ. ರಾಜ್ಯಾಂಗದ 40ನೆಯ ವಿಧಿಯಲ್ಲಿ ಯಾವ ನಿರ್ದೇಶನವನ್ನು ಕೊಡುತ್ತಾರೆ - Directive Priciples of a State Policy, whether the decentralised system - - - ಇದು ಅದಕ್ಕೆ ಅನುಗುಣವಾಗಿದೆಯೇ ಎನ್ನುವುದನ್ನು ನೋಡಬೇಕು. ಆದರೆ ಒಂದು ನನಗೇನು ಸಂತೋಷವೆಂದರೆ ಕೇಂದ್ರೀಕೃತ ವ್ಯವಸ್ಥೆಯ ಪ್ರತಿನಿಧಿ ಶ್ರೀಮಾನ್ ಘೋರ್ಪಡೆಯವರು. ಈಗ ವಿಕೇಂದ್ರಿಕೃತ ವ್ಯವಸ್ಥೆಯ ರುವಾರಿ. ಈ ಮಾತು ಹೇಳುವಾಗ, ಅವರು ರಾಜ ಮನೆತನಕ್ಕೆ ಸೇರಿದವರು ಅದರ ಉತ್ತರಾಧಿಕಾರಿ. ಈ ಉತ್ತರಾಧಿಕಾರಿಯಿಂದ ಜನತಂತ್ರದ ವಾರಸುದಾರರಾಗಿ ಇವತ್ತು ಈ ಮಸೂದೆಯನ್ನು ಮಂಡನೆ ಮಾಡಿಸಿದ್ದಾರೆ. ನನಗೆ ಅವರ ಬಗ್ಗೆ ವಿಶ್ವಾಸವಿದೆ. ಆದರೆ ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಅವರು ಪಕ್ಷದ ಮೇಲೆ ಇಟ್ಟಿರತಕ್ಕ ವಿಶ್ವಾಸ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೋ ನನಗೆ ಗೊತ್ತಿಲ್ಲ. ಅವರ ಮೇಲೆ ನಾನು ವಿಶ್ವಾಸ ಇಡುವುದಕ್ಕೆ

ಒಂದು ಬಹಳ ಮುಖ್ಯವಾದ ಕಾರಣವಿದೆ. ಆ ಕಾರಣ, ಇತ್ತೀಚೆಗೆ ಅವರೇ ಒಂದು ಪುಸ್ತಕ ಬರೆದು ಬಹಿರಂಗಪಡಿಸಿದ್ದಾರೆ. ಅದರ ಹೆಸರು "DEVELOPMENT ETHOS AND EXPERIENCE" ಎಂದು. ಆ ಪುಸ್ತಕವನ್ನು ಡೆಡಿಕೇಟ್ ಮಾಡುತ್ತಾರೆ. ಯಾರಿಗೆ ಡೆಡಿಕೇಟ್ ಮಾಡುತ್ತಾರೆಂದರೆ, ಸೊಂಡೂರು ಜನಕ್ಕೆ ಡೆಡಿಕೇಟ್ ಮಾಡುತ್ತಾರೆ. ಮಾಡುವಾಗ ಒಂದು ಮಾತು ಹೇಳುತ್ತಾರೆ.

".... to the people of Sandur whom I have received much love and learnt much of the grass-root realities of the country."

He is really interested in the grass-root realities of this country. How much he has gone about in this bill is to be scrutinised. That I will scrutinise later on so many different paragraphs you have referred to and put your imprint or impressions on the very decentralised question.

ಉಪಾಧ್ಯಕ್ಷರು : ಈಗ ಸದನದ ಕಲಾಪವನ್ನು ಮುಂದುವರಿಸಿ, ಮತ್ತೆ 2.30 ಗಂಟೆಗೆ ಸದನ ಸೇರುವುದು.

(ಸಭೆಯು ಮಧ್ಯಾಹ್ನ 2.45ಕ್ಕೆ ಪುನಃ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ಪಂಚಾಯತ್ ರಾಜ್ ಮತ್ತು ಜಿಲ್ಲಾ ಪರಿಷತ್ತುಗಳ ಶಾಸನದ ಹೊಸ ಶಾಸನವನ್ನು ಚರ್ಚೆ ಮಾಡುವುದಕ್ಕೆ ನಾನು ಪ್ರಾರಂಭಮಾಡಿದ್ದೇನೆ. ಪ್ರಾರಂಭದಲ್ಲಿ ಎರಡು ಮಾತುಗಳನ್ನು ನಾನು ಹೇಳಿದೆ. ಮೊದಲನೆಯದು ವಿಕೇಂದ್ರೀಕೃತ ವ್ಯವಸ್ಥೆಯ ವಿಕೃತ ಮಸೂದೆಯನ್ನು ಇಲ್ಲಿ ಮಂಡಿಸಿದ್ದೀರಿ; ಎಂದು. ಎರಡನೆಯದು ಎಂದರೆ ಮಸೂದೆಯನ್ನು ಮಂಡಿಸಿದ ಮಂತ್ರಿಗಳು ನನ್ನ ವಿಶ್ವಾಸಕ್ಕೆ ಪಾತ್ರರಾದವರು. ಕಾರಣ, ಅವರಿಗೆ ವಿಕೇಂದ್ರೀಕೃತ ವ್ಯವಸ್ಥೆಯ ಬಗ್ಗೆ ಇರುವ ನಂಬಿಕೆ. ಅದಕ್ಕಾಗಿ ಅವರೇ ಬರೆದಂಥ ಪುಸ್ತಕವನ್ನು ಮಾನ್ಯ ಸಭೆಯ ಗಮನಕ್ಕೆ ತಂದಿದ್ದೇನೆ. ಇದರ ಜೊತೆಗೆ ಶ್ರೀಮಾನ್ ಘೋರ್ಪಡೆಯವರು ರಾಜಮನೆತನದ ಉತ್ತರಾಧಿಕಾರಿ. ಈಗ ಜನತಂತ್ರದ ವಾರಸುದಾರರು. ಒಂದು ದೃಷ್ಟಿಯಿಂದ ಅವರು ಕೇಂದ್ರೀಕೃತ ವ್ಯವಸ್ಥೆಯ ಪ್ರತಿನಿಧಿ. ಆದರೆ ಈಗ ವಿಕೇಂದ್ರೀಕೃತ ವ್ಯವಸ್ಥೆಯ ರೂವಾರಿ. ಈ ಪದಬಳಕೆಗೆ ಕಾರಣಗಳಿವೆ. ವಿಕೇಂದ್ರೀಕೃತ ವ್ಯವಸ್ಥೆಯ ಪ್ರತಿನಿಧಿ ಹೇಗೆ ಆಗಿದ್ದಾರೆಂಬುದನ್ನು ಅವರೇ ಬರೆದಿರುವ ತಮ್ಮ ಪುಸ್ತಕದಲ್ಲಿ ವಿಸ್ತೃತವಾಗಿ ಪ್ರಸ್ತಾಪ ಮಾಡಿದ್ದಾರೆ. ಇತ್ತೀಚೆಗೆ ಅವರ 60ನೆಯ ಹುಟ್ಟು ಹಬ್ಬದಲ್ಲಿ ಅವರೇ ಬರೆದು ಪ್ರಸಿದ್ಧಿ ಮಾಡಿದಂಥ ಪುಸ್ತಕದ ಹೆಸರು "DEVELOPMENT ETHOS AND EXPERIENCE" ಎಂದು; ಆ ದಿವಸ ನಾನು ಅಲ್ಲಿದ್ದೆ. ಪಂಚಾಯತ್‌ರಾಜ್ಯ ವ್ಯವಸ್ಥೆಯ ಬಗ್ಗೆ ಅವರ ಆಲೋಚನೆಗಳಿಗಾಗಿ ಒಂದು ಛಾಪ್ಟರನ್ನು ನಿಗದಿ ಮಾಡಿದ್ದಾರೆ. ನಾನು ಅದಕ್ಕೆ ಬರುವುದಕ್ಕೆ ಮುನ್ನ ಆ ದಿವಸ ಮಾಡಿದ ಭಾಷಣದ ಪ್ರತಿಯೂ ನನ್ನ ಹತ್ತಿರ ಇದೆ. I have decided, I am quoting from his speech, "my book Development Ethos and Experience to the people of Sandur from whom I have received much love and learnt much of the grassroot realities of Karnataka and our country", ಈ ಮಾತನ್ನು ಹೇಳಿದರು. ಮುಂದೆ ತಮ್ಮ ಭಾಷಣದ ಮೂರನೆ ಪುಟದಲ್ಲಿ ಇನ್ನೂ ಒಂದು ಮಾತನ್ನು ಹೇಳಿರುತ್ತಾರೆ...... "If the country has to retain its self sufficiency in food by the end of the Century, then Co-operative Panchayatraj

and other Institutions must be made to work effectively." ಹಾಗೆಯೇ ಕೊನೆಯ ಪ್ಯಾರಾದ 5ನೇ ಪುಟದಲ್ಲಿ ಇನ್ನೂ ಒಂದು ಪದವನ್ನು ಬೆಳೆಸಿದ್ದಾರೆ. ಏನೆಂದರೆ, Obviously more is possible in the decentralised sector provided our priorities and the quantum and quality of attention given to it reflect our resolve to maximise employment and primary object of maximising employment and decentralisation and development" ಎಂದು ; ಈ ಕಾರಣದಿಂದ ನನಗೆ ಅವರ ಬಗ್ಗೆ ವಿಶ್ವಾಸವಿದೆ, ಒಂದು ನಿಜವಾದ ಅರ್ಥದಲ್ಲಿ ವಿಕೇಂದ್ರೀಕರಣದ ಮಸೂದೆಯನ್ನು ತರುತ್ತಾರೆ ಎನ್ನುವಂಥ ವಿಶ್ವಾಸವನ್ನು ಇಟ್ಟುಕೊಂಡಿದ್ದೆ. ನನ್ನ ಭ್ರಮೆ ಇನ್ನೂ ನಿರಸನವಾಗಿಲ್ಲ. ಇನ್ನೂ ವಿಶ್ವಾಸವಿದೆ. ಆ ವಿಶ್ವಾಸ ಈಗಿರತಕ್ಕಂಥ ಡ್ರಾಫ್ಟ್ ಬಿಲ್ ಮುಂದೆ ಮಸೂದೆಯಾದಾಗ ಯಾವ ರೀತಿ ಈ ಆಲೋಚನೆ ಪರಿವರ್ತನೆಯಾಗುತ್ತದೆ. .....How does it get translated into action, in terms of law is to be watched. ಆ ಕಾರಣ 1983ನೇ ಒಂದು ಮಸೂದೆ ಈಗ ಹಾಲಿ ಅಸ್ತಿತ್ವದಲ್ಲಿದೆ. ಅದನ್ನು ರಿಪಿಲ್ ಮಾಡುವುದಕ್ಕೂ ಕೂಡ ಹೊಸ ಸೆಕ್ಷನ್ ಇದರಲ್ಲಿ ತಂದಿದ್ದಾರೆ. ಕರ್ನಾಟಕ ಜಿಲ್ಲಾಪರಿಷತ್, ತಾಲ್ಲೂಕ್ ಪಂಚಾಯತ್ ಸಮಿತಿ, ಮಂಡಲ್ ಪಂಚಾಯತ್ ಅಂಡ್ ನ್ಯಾಯ ಪಂಚಾಯತ್ ಆಕ್ಟ್ ಆಫ್ 1983. ಈ ಮಸೂದೆಗೆ, ಮಾನ್ಯ ರಾಮಕೃಷ್ಣ ಹೆಗಡೆಯವರು ತಂದೆ, ಶ್ರೀಮಾನ್ ನಜೀರ್ ಸಾಹೇಬರು ತಾಯಿ, ನಾನು ಸೂಲಗಿತ್ತಿ. ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಥಮಭಾರಿ ರಾಜ್ಯಾಂಗದ ನಿರ್ದೇಶನ ಸೂತ್ರವನ್ನು ಜಾರಿಗೆ ಕೊಡತಕ್ಕಂಥ ಪ್ರಾಮಾಣಿಕ ಪ್ರಯತ್ನ ಕರ್ನಾಟಕದಲ್ಲಿ ಆದದ್ದು ಶ್ರೀಮಾನ್ ಹೆಗಡೆಯವರ ನಾಯಕತ್ವದಲ್ಲಿ. ಇದನ್ನು ಅಷ್ಟೇ ಪ್ರಾಮಾಣಿಕತೆಯಿಂದ, ನಿಷ್ಠೆಯಿಂದ ವಿತ್ ಕಮಿಟ್‌ಮೆಂಟ್ ಕೈಗೆ ತೆಗೆದುಕೊಂಡವರು ಶ್ರೀಮಾನ್ ನಜೀರ್ ಸಾಹೇಬರು. ಈ ಮಸೂದೆ ಹಿಂದೆ ಮಂಡನೆಯಾದಾಗ ನಾನು ವಿಧಾನ ಸಭೆಯ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೆ. ಆದ್ದರಿಂದ ಆ ಸೂಲಗಿತ್ತಿಯ ಕೆಲಸವನ್ನು ನಾನು ಮಾಡಿದೆ ಎಂದು ಹೇಳಿದೆ. ಏತಕ್ಕೆ ಸೂಲಗಿತ್ತಿಯ ಕೆಲಸವನ್ನು ಪ್ರಸ್ತಾಪ ಮಾಡಿದೆ ಎಂದರೆ, ಮೊದಲು ಹುಟ್ಟತಕ್ಕಂತ ಮಗು ಹೆಣ್ಣೋ ಗಂಡೋ ಎಂದು ಗೊತ್ತಾಗತಕ್ಕಂಥದ್ದು ಸೂಲಗಿತ್ತಿಗೆ. ಆಮೇಲೆ ತಾಯಿಗೆ, ಉಳಿದವರಿಗೆ, ಆದರೆ ಈ ಮಸೂದೆಯಲ್ಲಿ ಏನಿದೆ ಎನ್ನುವಂಥದ್ದು ನನ್ನ ಪರಿಪೂರ್ಣವಾದಂಥ ಆಲೋಚನೆಯ ವ್ಯಾಪ್ತಿಗೆ ಒಳಪಟ್ಟಿದೆ ಎಂದು ತಿಳಿದುಕೊಂಡು ನಾನು ಮುಂದೆ ಮಾತನಾಡುತ್ತೇನೆ. ಇಷ್ಟು ಕಷ್ಟದಲ್ಲಿ ಜನಿಸಿದ ಮಗುವನ್ನು 1989ರಲ್ಲಿ ವಿಧಾನಸಭೆಯ ಚುನಾವಣೆ ಆದನಂತರ ಅಧಿಕಾರಕ್ಕೆ ಬಂದಂಥ ಕಾಂಗ್ರೆಸ್ ಪಕ್ಷದ ಸರ್ಕಾರ ಕೊಲ್ಲಬೇಕೆಂದು ಬಹಳ ಪ್ರಯತ್ನ ಮಾಡಿತು. ತನ್ನ ಎಲ್ಲಾ ಪ್ರಯತ್ನಗಳನ್ನು ಮಾಡಿ 3-3 ಜನ ಮಂತ್ರಿಗಳಾದವರು. ಒಬ್ಬೊಬ್ಬರೂ ತಮ್ಮ ಆಲೋಚನೆಯನ್ನು ಅಭಿವ್ಯಕ್ತ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಅಂದರೆ ಅಧಿಕಾರವನ್ನು ಕೇಂದ್ರೀಕರಿಸುವುದಕ್ಕೆ ಪ್ರಯತ್ನ ಮಾಡಿದರು. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ನಾವು ಅದನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಿದೆವು. 72ನೇ ತಿದ್ದುಪಡಿ ವಿಧೇಯಕವನ್ನು ಇಲ್ಲಿ ತಂದರು. ಆಗಲೂ ನಾನು ವಿಧೇಯಕದ ಬಗ್ಗೆ ಸಾಕಷ್ಟು ನನ್ನ ಅನಿಸಿಕೆಗಳನ್ನು ಹೇಳಿದ್ದೇನೆ. ಆದರೆ ಸುದೈವದಿಂದ ಈ ಮಸೂದೆಯನ್ನು ಮೂರ್ಛಾವಸ್ಥೆಯಲ್ಲಿಡುವುದಕ್ಕೆ ಸಾಧ್ಯವಾಯಿತೇ ಹೊರತು ಕೊಲ್ಲುವುದಕ್ಕೆ ಸಾಧ್ಯವಾಗಲಿಲ್ಲ. ಈಗ ಶ್ರೀಮಾನ್ ಘೋರ್ಪಡೆಯವರು ಶ್ರೀ ಕೃಷ್ಣನ ಸ್ಥಾನದಲ್ಲಿದ್ದಾರೆ. ಯಾವ ಮಸೂದೆಯನ್ನು ಕೊಲೆ ಮಾಡಬೇಕೆಂದು ಆಳುವ ಪಕ್ಷ ಪ್ರಯತ್ನ ಮಾಡಿತೋ ಆ ಮಗುವನ್ನು ಸಾಕತಕ್ಕ ಜವಾಬ್ದಾರಿ, ಆ ಮಗುವನ್ನು ಕೃಷ್ಣನನ್ನಾಗಿ ಮಾಡತಕ್ಕ ಜವಾಬ್ದಾರಿ ಅದರ ಮಂತ್ರಿಮಂಡಲದ ಸದಸ್ಯರಾದ ಶ್ರೀಮಾನ್ ಘೋರ್ಪಡೆಯವರ ಹೆಗಲ ಮೇಲೂ ಇದೆ, ತೊಡೆಯ ಮೇಲೂ ಇದೆ. ಅವರು ಯಾವ ರೀತಿ ಮಾಡುತ್ತಾರೆಂದು ಮುಂದೆ ಕಾದು ನೋಡೋಣ. ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಘೋರ್ಪಡೆಯವರು ಈ ಮಸೂದೆ ಇಡೀ ರಾಷ್ಟ್ರಕ್ಕೆ ಮಾದರಿಯಾಗಬೇಕೆಂಬ ಇಚ್ಛೆಯನ್ನು

ವ್ಯಕ್ತ ಮಾಡಿದರು. ರಚನಾತ್ಮಕ ಸಲಹೆಗಳನ್ನು ಸ್ವೀಕಾರ ಮಾಡುತ್ತೇನೆಂಬ ಮಾತನ್ನು ಅವರು ಹೇಳಿದ್ದಾರೆ. ನಮ್ಮ ಕೈಯಲ್ಲಿದ್ದ ಅಧಿಕಾರವನ್ನು ವಿಕೇಂದ್ರಿಕರಣ ಮಾಡಿ ಕೆಳಗೆ ಕೊಡುತ್ತೇವೆಂದು ಹೇಳಿದ್ದಾರೆ. ಇವರ ಯಾವ ಮಾತನ್ನೂ ನಾನು ನಂಬುವುದಿಲ್ಲ. ಏಕೆಂದರೆ, ನೀವು ವಿಧಿ ಇಲ್ಲದೆ, ರಾಜ್ಯಾಂಗದ 73ನೇ ತಿದ್ದುಪಡಿಯ ಆದೇಶವನ್ನು ಪರಿಪಾಲನೆ ಮಾಡಲೇಬೇಕೆಂಬ ಕರ್ತವ್ಯ ನಿಮ್ಮ ಹೆಗಲ ಮೇಲೆ ಇದ್ದುದರಿಂದ ಈ ಮಸೂದೆಯನ್ನು ತಂದಿರಿ. ಹೀಗೆ ತರುವಾಗ ರಾಜ್ಯಾಂಗದ ನಿರ್ದೇಶನ ಏನು? 1983ರಲ್ಲಿ ತಂದೆ, ತಾಯಿ, ಸೂಲಗಿತ್ತಿ ಜೊತೆಗೆ ಈ ಮಸೂದೆಯನ್ನು ತರಬೇಕೆಂಬ ಆದೇಶ ನಮ್ಮ ಪಕ್ಷದ್ದು ಇತ್ತು. ಜೊತೆಗೆ ರಾಜ್ಯಾಂಗದ ನಿರ್ದೇಶನ ಇತ್ತು. Directive Principles in the Constitution ನಲ್ಲಿ ಇದ್ದುದನ್ನು ಸ್ವಾತಂತ್ರ್ಯಾನಂತರ ಸುಮಾರು 40 ವರ್ಷಗಳ ಕಾಲ ಜಾರಿಗೆ ಕೊಡದೆ ಯಾವುದನ್ನು ಮುಚ್ಚಿಟ್ಟಿದ್ದರು ಅದನ್ನು ಜಾರಿಗೆ ಕೊಡುವ ಪ್ರಯತ್ನ ಆಗ ಆದರೆ ಈಗ it is just not Directive Principles of the Constitution. It is a mandate of the Constitution. After 73rd amendment, which was introduced and passed, yet to be enacted, after the approval of the President of India. "Yet to be". Therefore, ಇದು ರಾಜ್ಯಾಂಗದ 73ನೇ ತಿದ್ದುಪಡಿಯ ಆದೇಶದ ಮೇಲೆ ತಂದಂಥ ಮಸೂದೆ. ಈ ಮಸೂದೆಗೆ ರಾಷ್ಟ್ರಪತಿಯವರ ಅಂಕಿತವಾಗಿ ಮುಂದೆ ಶಾಸನವಾಗುವುದಕ್ಕೆ ಮುಂಚೆ ಕರ್ನಾಟಕದಲ್ಲಿ ಈ ಮಸೂದೆಯನ್ನು ತಂದಿದ್ದೀರಿ. ಇಷ್ಟಕ್ಕೆ ಸೀಮಿತವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಹಾಗಿದ್ದರೆ ರಾಜ್ಯಾಂಗದ ತಿದ್ದುಪಡಿ ಮತ್ತು ರಾಜ್ಯಾಂಗದ ಸೂತ್ರದ ನಿರ್ದೇಶನ Let me quote Art.40 of the Constitution.

> The State shall take steps (It is mandatory)
> to organise village panchayats and endow
> them with such powers and authority as may be
> necessary to enable them to function as units
> of self- government.

ಸ್ವಯಂ ಆಡಳಿತದ ಪರಿಪೂರ್ಣತೆಯನ್ನು ಈ ಶಾಸನದಲ್ಲಿ ತಂದಿದ್ದಾರೆಯೇ ಎಂಬುದು ಮೂಲ ಪ್ರಶ್ನೆ. ಸುಮಾರು 1950ರ ದಶಕದಲ್ಲಿ ಅಥವಾ ಅದಕ್ಕಿಂತಲೂ ಪೂರ್ವ ಪಂಚಾಯತ್ ರಾಜ್ಯ ವ್ಯವಸ್ಥೆ ಸರಿ ಸುಮಾರು ಶತಮಾನದಷ್ಟು ಹಳೆಯದು. 1884ರಲ್ಲಿ ಜಿಲ್ಲಾ ಮತ್ತು ತಾಲ್ಲೂಕುಗಳ ಸಮಿತಿಗಳನ್ನು ರಚನೆ ಮಾಡಿದ್ದಾರೆ. ಜಿಲ್ಲಾ ಸಮಿತಿಗೆ ಆಗಿನ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಿದ್ದರು. ತಾಲ್ಲೂಕು ಸಮಿತಿಗೆ ಆಗಿನ ಮಾಮಲೇದಾರರು ಅಧ್ಯಕ್ಷರಾಗಿರುತ್ತಿದ್ದರು. ಈ ಮಸೂದೆಯಲ್ಲಿ ಸದಸ್ಯರುಗಳು ಆಮೇಲೆ ಚುನಾಯಿತ ಸದಸ್ಯರು ಬಂದರು. ನಾವು ಈ ಮಸೂದೆಯಲ್ಲಿ ಮೀಸಲಾತಿಯನ್ನು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಮಂತ್ರಿಗಳ ಗಮನಕ್ಕೆ ಒಂದನ್ನು ತರುತ್ತಿದ್ದೇವೆ. ಏನೆಂದರೆ 1907ರಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿಯನ್ನು ಪ್ರಯೋಗ ಮಾಡಿದ್ದರು. 1938ರಲ್ಲಿ ಮಹಿಳೆಯರಿಗೆ ಮೀಸಲಾತಿ ಪ್ರಯೋಗ ಮಾಡಿದ್ದರು. ಆದುದರಿಂದ ಇದು ಹೊಸತೇನೂ ಅಲ್ಲ. The extension of the experience.. ಸ್ವಾತಂತ್ರ್ಯಾನಂತರ ಯೋಜನಾಬದ್ಧ ಅಭಿವೃದ್ಧಿ, ಪಂಚವಾರ್ಷಿಕ ಯೋಜನೆಗಳು ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಹಸ್ರಾರು ಕೋಟಿ ರೂಪಾಯಿಗಳ ವೆಚ್ಚದ ಅನುದಾನ. ಇವೆಲ್ಲದರ ಉದ್ದೇಶ, ಯೋಜನಾ ಬದ್ಧ ಅಭಿವೃದ್ಧಿಗೆ ಉದ್ದೇಶ ಗ್ರಾಮೀಣ ಅಭಿವೃದ್ಧಿ ಒಂದು ಭಾಗ. ಸಾಮಾಜಿಕ ವಿಕಾಸ ಯೋಜನೆ ಮತ್ತೊಂದು ಭಾಗ ಮತ್ತು ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮಗಳು. ಆ ಸಮಯದಲ್ಲಿ ಅಂದಿನ ರಾಷ್ಟ್ರದ

ಅತ್ಯಂತ ಹಿರಿಯ ಶ್ರೇಷ್ಠ ಮುತ್ಸದ್ಧಿ ಜವಹರ್‌ಲಾಲ್ ನೆಹರೂರವರು ತಮ್ಮ ಅನುಭವವನ್ನು ಹೇಳುತ್ತಾರೆ. ತಮ್ಮ ಅನುಭವದ ಅಭಿಪ್ರಾಯ ವ್ಯಕ್ತ ಮಾಡುವಾಗ ಒಂದು ಮಾತನ್ನು ಹೀಗೆ ಹೇಳುತ್ತಾರೆ.

> "The five-year plan discusses about the Social Welfare Schemes, National Extensive Services, the Rural Development was a component of these steps but it was the observations of the Jawaharlal Nehru that the paid employees lack the spirit, the spirit needed to fulfill the commitments of such work. As a result schemes could not produce any tangible and visible effects. He believed that the local participation of the rural people should be obtained to produce notable change in Rural India how that it should be done."

ಹೇಗೆ ಮಾಡಬೇಕು ಎನ್ನುವ ಬಗ್ಗೆ ಅಭಿಪ್ರಾಯ ಸಂಗ್ರಹಣೆ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿದರು. ಅದು ಮುಂದೆ ಬಲವಂತರಾಯ್ ಸಮಿತಿ ಎಂದು ಪ್ರಸಿದ್ಧಿ ಆಯಿತು. ಅವರೂ ಕೂಡ ತಾವು ಈಗ ಹೇಳಿರುವ ತ್ರೀ ಟೈಯರ್ ಸಿಸ್ಟಮ್‌ನ್ನೇ ಹೇಳುತ್ತಾರೆ. ಆದರೆ ಮೂಲತಃ ನಾನು ಪ್ರಶ್ನೆ ಮಾಡಿದ್ದು ಏನೆಂದರೆ, ಈ ನಿರ್ದೇಶನ ಸೂತ್ರದಲ್ಲಿ ಹೇಳತಕ್ಕ ಮಾತು ಇತ್ತೀಚೆಗೆ ರಾಜ್ಯಾಂಗವನ್ನು ತಿದ್ದುಪಡಿ ಮಾಡುವಾಗ ಬಂದ ಮಾತು- ಅಲ್ಲೂ ಕೂಡ ಆರ್ಟಿಕಲ್ 40ರಲ್ಲಿ ಹೇಳಿದ ಮಾತನ್ನೇ ಹೇಳುತ್ತಾರೆ. - as a result of compromise or rather in effect to rectify this grave omission, the Assembly directed as enshrined in Article 40 of the Principles of the State Policy that Village Panchayats shall be established as early as possible and, that the State shall take steps to organise village panchayats endowed with such powers and authorities as may be necessary to enable them to function as a units of Self-Government ... Self-Governmentಗೆ ಒತ್ತು ಕೊಡುತ್ತಿದ್ದೇನೆ. The samething is enshrined in the Constitution - Article 40 .... ನಂತರ ನಮ್ಮ 83ರ ಮಸೂದೆಯನ್ನು ಜಂಟೀ ಸಲಹಾ ಸಮಿತಿಗೆ ಕಳುಹಿಸಲಾಯಿತು. ಜಂಟಿ ಸಲಹಾ ಸಮಿತಿ ಕೂಡ ಇಂತಹದ್ದೇ ತನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಮಸೂದೆಯ ಮೊದಲು ಕೊಟ್ಟಿತು. ಒಟ್ಟಾರೆ ಅರ್ಥ ಸೆಲ್ಫ್ ಗೌರ್ನಮೆಂಟ್. ಇದಕ್ಕೆ ಬೇಸಿಸ್ 73ನೆಯ ರಾಜ್ಯಾಂಗದ ತಿದ್ದುಪಡಿಯ ಮೂಲ ಉದ್ದೇಶ. 73ನೆಯ ತಿದ್ದುಪಡಿಯಲ್ಲಿ ಏನು ಮಾಡಿದ್ದಾರೆ. ಮುಖ್ಯವಾಗಿ ನಾಲ್ಕು ಅಂಶಗಳನ್ನು ಹೇಳಿದ್ದಾರೆ. ತಾವು ಕೊಟ್ಟಿರತಕ್ಕ ಬಿಲ್ಲಿನ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ಗೂ ರಾಜ್ಯಾಂಗದ ತಿದ್ದುಪಡಿಯಲ್ಲಿ ಕೊಟ್ಟಿರತಕ್ಕ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ಗೂ ಬಹಳ ವ್ಯತ್ಯಾಸವಿದೆ. ಅಲ್ಲಿ ಸೆಲ್ಫ್ ಗೌರ್ನಮೆಂಟ್‌ಗೆ ಒತ್ತು ಕೊಡುತ್ತಾರೆ. ನೀವು ಇಲ್ಲಿ ಒತ್ತು ಕೊಡುವುದಿಲ್ಲ. ಮುಖ್ಯವಾದ ನಾಲ್ಕು ವಿಚಾರಗಳನ್ನು ರಾಜ್ಯಾಂಗದ ತಿದ್ದುಪಡಿಯಲ್ಲಿ ಅಳವಡಿಸಲಾಗಿದೆ. ಒಂದನೆಯದು, ensure regular and fair conduct of elections ಅಂದರೆ ನಮ್ಮ ಮಸೂದೆಯಲ್ಲಿ ಐದು ವರ್ಷಗಳ ಮಿತಿಯನ್ನು ಹಾಕಿದ್ದರೂ ಕೂಡ ಎನ್‌ಸೂರ್ ಮಾಡುವಂತಹ ಸ್ಥಿತಿಯಲ್ಲಿರಲಿಲ್ಲ. ಏಕೆಂದರೆ ನಿರ್ದೇಶನ ಇರಲಿಲ್ಲ. ಬಂದ ರಾಜ್ಯಗಳು ತಮ್ಮ ಅನುಕೂಲಕ್ಕೆ ಬೇಕಾದ ಹಾಗೆ ಚುನಾವಣೆ ಮಾಡಬಹುದಿತ್ತು. ಇಲ್ಲವೇ ಮಾಡದಿರಬಹುದಿತ್ತು. ನಿಮ್ಮ ಸರ್ಕಾರ ಕಳೆದ ಒಂದು ವರ್ಷ 2 ತಿಂಗಳಿಂದ ಈ ಚುನಾವಣೆಯನ್ನು ಅದುಮಿಟ್ಟಿದೆ, ಹಾಗೆ ಅದುಮಿಡಬಹುದಾಗಿತ್ತು. ಈಗ ಈವೊಂದು

ರಾಜ್ಯಾಂಗದ ಪ್ರಕ್ರಿಯೆಯಿಂದಾಗಿ ನೀವು, ಚುನಾವಣೆಯನ್ನು ಮಾಡದಿರುವುದಕ್ಕೆ ಸಾಧ್ಯವಿಲ್ಲ. Ensure term of five years for local bodies and elections within six months in case of supersession. ನಮ್ಮ ಶಾಸನದಲ್ಲಿ ಯಾವುದೇ ಕಾರಣಕ್ಕಾಗಿ ಮಂಡಲ ಪಂಚಾಯಿತಿಗಳನ್ನು ಮತ್ತು ಜಿಲ್ಲಾ ಪರಿಷತ್ತುಗಳನ್ನು ವಿಸರ್ಜನೆ ಮಾಡಬೇಕಾದ ಸಂದರ್ಭ ಬಂದಾಗ ಆರು ತಿಂಗಳೊಳಗೆ ಮತ್ತೆ ಚುನಾವಣೆ ಮಾಡಬೇಕೆಂದು ಇದೆ. ರಾಜ್ಯಾಂಗದ ತಿದ್ದುಪಡಿ ಹೊಸದೇನನ್ನೂ ಹೇಳಲಿಲ್ಲ. This is second one. Third providing for specific representations for women and Scheduled Caste and Scheduled Tribes.. ಅದೂ ಕೂಡ ಈ ಮಸೂದೆಯಲ್ಲಿದೆ. ಒಂದು ಹೊಸದನ್ನು ಏನು ಸೇರಿಸಿದ್ದಾರೆಂದರೆ, ಆಯಾಯ ರಾಜ್ಯಗಳು ತಮ್ಮ ಅನುಭವ ಮತ್ತು ಅಗತ್ಯಗಳನ್ನು ಗಮನದಲ್ಲಿ ಇಟ್ಟುಕೊಂಡು ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಕೊಡತಕ್ಕ ಅಧಿಕಾರವನ್ನು ಆಯೊಯ ರಾಜ್ಯಗಳಿಗೆ ಬಿಟ್ಟಿದೆ. ಇದು ನಮ್ಮಲ್ಲಿ ಇರಲಿಲ್ಲ. ಆಗ ನಾವೇನು ಮಾಡಿದ್ದೇವೆ ಎಂದರೆ ಹಿಂದುಳಿದ ವರ್ಗಗಳು ಆಯ್ಕೆಯಾಗದ ಪರಿಸ್ಥಿತಿಯಲ್ಲಿದ್ದರೆ ಅಂತವಹವರನ್ನು ನಾಮಕರಣ ಮಾಡುವಂತಹ ವ್ಯವಸ್ಥೆ ಇತ್ತು ಆದ್ದರಿಂದ ರಾಜ್ಯಾಂಗ ತಿದ್ದುಪಡಿಯಲ್ಲಿಯೂ ಹೊಸದೇನು ಇಲ್ಲ. ನಾಲ್ಕನೆಯದು, Provide for Constitution of the State finance Commission. This was also there in the original Act but we could not do it. Every five year to ensure regular devolution of resources to local bodies. ಇದು ಒಂದು ಕೆಲಸ ಆಗಲಿಲ್ಲ. ಆದರೆ ಮಸೂದೆಯಲ್ಲಿದೆ. ನಾನು ಇಷ್ಟನ್ನು ಹೇಳಿದ ಉದ್ದೇಶ 73ನೆಯ ರಾಜ್ಯಾಂಗ ತಿದ್ದುಪಡಿಯನ್ನು ಆಧಾರವಾಗಿಟ್ಟುಕೊಂಡು ನೀವು ತಂದಿರತಕ್ಕ ಹೊಸ ಮಸೂದೆ ಏನಿದೆ, ಇದರ ಅಗತ್ಯವೇನಿತ್ತು? ಎಲ್ಲವೂ ಈ ಶಾಸನದಲ್ಲಿತ್ತು. ಯಾವ್ಯಾವುದನ್ನು ನೀವು ಆಲೋಚನೆ ಮಾಡಿದ್ದೀರಿ ಅವು ಪ್ರತಿಯೊಂದು ಈ ಶಾಸನದಲ್ಲಿದೆ.

ಶ್ರೀ ಎಂ. ವೈ. ಘೋರ್ಪಡೆ : ನಾನು ಒಂದೇ ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ಭಾಷಣ ಮಾಡುವಾಗ ನಾನು ಮಧ್ಯೆ ಮಾತನಾಡಿ ತೊಂದರೆ ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಅಗತ್ಯ ಏನೆಂದರೆ, ತಾವು ಇತಿಹಾಸ ಹೇಳುವಾಗ, ಹಳೆಯ ಕಾಲಕ್ಕೆ ತಾಲ್ಲೂಕು ಬೋರ್ಡ್ ಇತ್ತು ಎನ್ನುವುದನ್ನು ಸಂಪೂರ್ಣವಾಗಿ ಮರೆತುಬಿಟ್ಟಿರಿ. ನಾನು ಹಣಕಾಸಿನ ಮಂತ್ರಿ ಇದ್ದಾಗ ತಾಲ್ಲೂಕು ಬೋರ್ಡ್‌ಗಳು ಬಹಳ ಚೆನ್ನಾಗಿ ಕೆಲಸ ಮಾಡಿವೆ. ತಮ್ಮ ಮಸೂದೆ ಬಂದಾಗ ನಾವೆಲ್ಲರೂ ಸಹಕಾರವನ್ನು ಕೊಟ್ಟಿದ್ದೇವೆ. ಜಿಲ್ಲಾಮಟ್ಟದಲ್ಲಿ ಹೆಚ್ಚಿನ ಅಧಿಕಾರವನ್ನು ಕೊಟ್ಟು ತಾಲ್ಲೂಕನ್ನು ತಾವು ಸಂಪೂರ್ಣವಾಗಿ ಮರೆತುಬಿಟ್ಟಿರಿ. ಈಗ ಸಂವಿಧಾನದ ತಿದ್ದುಪಡಿ ಏನು ಬಂದಿದೆ, ಅದರ ಪ್ರಕಾರ ಮೂರು ಹಂತದಲ್ಲಿ ಚುನಾಯಿತ ಸಂಸ್ಥೆಗಳನ್ನು ಕಟ್ಟಬೇಕೆಂದು ಇದೆ. ಆದ ಕಾರಣ ಅದರ ಅಗತ್ಯವಿದೆ. ನಾವು ಬ್ಯಾಲೆನ್ಸ್ ಆಗಿ ಒಂದು ಮಸೂದೆಯನ್ನು ತಂದಿದ್ದೇವೆ. ನಿಮ್ಮ ಹಳೆಯ ಮಸೂದೆಯಲ್ಲಿರತಕ್ಕ ಪ್ರತಿಯೊಂದು ತೆಗೆದುಹಾಕಲಿಕ್ಕೆ ಅಂಶವನ್ನು ನಾವು ಪ್ರಯತ್ನ ಮಾಡಲಿಲ್ಲ. ಯಾವುದು ಸರಿಯಾಗಿದೆ ಅದನ್ನು ಇಟ್ಟುಕೊಂಡಿದ್ದೇವೆ. ಮತ್ತೆ ಯಾವುದನ್ನು ಹೊಸದಾಗಿ ಸೇರಿಸಬೇಕು ಅದನ್ನು ಸೇರಿಸಿದ್ದೇವೆ. ಇದರ ಅಗತ್ಯ ಇಷ್ಟೇ ; Elected bodies at three levels is compulsary and mandatory.

ಶ್ರೀ ಡಿ. ಬಿ. ಚಂದ್ರೇಗೌಡ : ಇದು ಎಲ್ಲದಕ್ಕೂ ಮೂಲತಃ ನಮಗೆ ಕಮಿಟ್‌ಮೆಂಟ್ ಬೇಕಾಗುತ್ತದೆ. Natural tendency and character of any political power is to centralise, therefore, it is the political will of the party in power at that point of time can only think of bringing any decentralisation....

ಈ ಕಾರಣಕ್ಕೆ ನಾನು ಹೇಳಿದ್ದು. ನಿಮಗೆ ತತ್‌ಕ್ಷಣ ಮಾಡಬೇಕೆಂಬ ಉದ್ದೇಶ ಇದ್ದಿದ್ದರೆ ತಾಲ್ಲೂಕು ಪಂಚಾಯತಿ ಸೇರಿಸುವುದಕ್ಕೆ ಅವಕಾಶ ಇತ್ತು. ಎರಡು ಸೆಟ್‌ಅಪ್ ಇದ್ದವು. ಕೆಳಗಡೆ ಪಂಚಾಯತಿ ಇತ್ತು ಮತ್ತು ಮೇಲ್ಗಡೆ ಜಿಲ್ಲಾ ಪರಿಷತ್ತು ಇತ್ತು . ಅವುಗಳ ಮಧ್ಯೆ ಸೇರಿಸಿದ್ದರೆ ಸಾಕಾಗಿತ್ತು. To that extent you should have amended this Act. There was no need to bring a new Act ಇದು ನನ್ನ ಅನಿಸಿಕೆ. ಅದನ್ನು ನೀವು ಒಪ್ಪಬಹುದು ಅಥವಾ ಬಿಡಬಹುದು. You should have brought an amendment to the sections concerned.. ಈಗಲೂ ತಾಲ್ಲೂಕು ಪಂಚಾಯಿತಿ ಇದೆ. ಆದರೆ ಅದು ಹಲ್ಲು ತೆಗೆದ ಹಾವು. ಅದಕ್ಕೆ ಹೆಚ್ಚು ವ್ಯವಸ್ಥೆ ಕೊಡಬೇಕೆಂದಿದ್ದರೆ ನಮ್ಮದೇನೂ ವಿರೋಧ ಇರಲಿಲ್ಲ. ಆದರೆ ಈ ಮಸೂದೆಯಲ್ಲಿಯೇ ಮಾಡಬೇಕಿತ್ತು. ಹೊಸ ಮಸೂದೆಯನ್ನು ತರುವುದರ ಅಗತ್ಯ ಏನಿತ್ತು? ಇದು ನನ್ನ ಮೊದಲ ಪ್ರಶ್ನೆ. ನಾನು ಇದರ ಪೂರ್ಣ ವಿವರಕ್ಕೆ ಹೋಗುವುದಕ್ಕೆ ಮುನ್ನ ನನ್ನ ಮೊದಲಿನ ಮಾತನ್ನೇ ಹೇಳುತ್ತೇನೆ. ಲೋಕಸಭೆಯ ಚರ್ಚೆಯಲ್ಲಿ Minister while piloting the Bill. ಅವರು ಬಳಕೆ ಮಾಡತಕ್ಕಂಥ ಪದ. However, I am quoting from December 1st 1991 Constitution 72nd amendment Bill reported by the Joint Committee and the Minister while piloting the Bill said. ಇದೇ ಪದಗಳನ್ನು ಅವರು ಬಳಸುತ್ತಾರೆ. However even after 42 years we have not been able to fulfill this expectation of the founding fathers of the Constitution. It is for this reason that the Government under the Leadership of our beloved Prime Minister Sri P.V. Narasimha Rao introduced the Constitution Bill in effect we are fulfilling the Gandhiji's dream. ಈ ಮಸೂದೆ ಏನು ತಂದಿದ್ದೀರಿ, this is not the dream of Gandhiji. The concept of decentralisation is totally taken away. This is my objection. I will come to that at a later stage. ನಾವು ಈಗ ಇರುವ ಮಸೂದೆಯಲ್ಲಿ ಇದೆಲ್ಲ ರಾಜ್ಯಾಂಗದ ತಿದ್ದುಪಡಿಯನ್ನು ಒಳಗೊಂಡಿರುವಂಥ ಸಮಗ್ರವಾದಂಥ ಮಸೂದೆ. ಈ ಮಸೂದೆ ಬಗ್ಗೆ ತಾವು ಇದನ್ನು ಆತುರಾತುರವಾಗಿ ತರಲಿಲ್ಲ ಎಂದು ಹೇಳಿದ್ದೀರಿ. ಹಾಗೆಯೇ 1983ರ ಕಾಯಿದೆ ಕೂಡ ಆತುರಾತುರವಾಗಿ ತಂದಿದ್ದಲ್ಲ. ಜಂಟಿ ಸಲಹಾ ಸಮಿತಿಗೆ ಹೋಗಿತ್ತು. ಎರಡೂ ಸದನಗಳ ಸದಸ್ಯರು ಸುದೀರ್ಘವಾಗಿ ಚರ್ಚೆ ನಡೆಸಿ ಎಲ್ಲ ರಾಜ್ಯಗಳಲ್ಲಿ ಪ್ರವಾಸ ಮಾಡಿ ಅಲ್ಲಿಯ ಅನುಭವಗಳನ್ನು ಕ್ರೋಢೀಕರಿಸಿ, ಒಂದು ಆಲೋಚನೆ ಕ್ರೋಢೀಕರಣವಾಗಿ ಈ ಮಸೂದೆ ರೂಪದಲ್ಲಿ ಹೊರಬಂದಿದೆ. ಅದಕ್ಕಾಗಿ ನಾನು ಪ್ರಾರಂಭದಲ್ಲೇ ಹೇಳಿದೆ; ಇದನ್ನು ಕೊಲ್ಲತಕ್ಕಂಥ ಕೆಲಸವನ್ನು ನೀವು ಮಾಡಿದ್ದೀರಿ ಎಂದು. ಆದರೆ ಇದು ಸಾಯಲಿಲ್ಲ. ನಾನು ಅಂದುಕೊಂಡಿದ್ದೆ, ಹೊಸ ಮಸೂದೆಯಲ್ಲಿ ಏನೋ ಭಾರಿ ಬದಲಾವಣೆಯಾಗಿದೆ; ನೋಡೋಣ, ಈ ಬದಲಾವಣೆಗಳು ಯಾವ ರೀತಿ ಸಧ್ಯಕ್ಕೆ ಎಷ್ಟು ಸಮಂಜಸ ಎಂದು.

3.15 ಪಿ.ಎಂ.

ಮೊದಲು ಈ ಹೊಸ ಮಸೂದೆಯ ಹೆಸರು ಪದನಾಮ ನೋಡೋಣ. ಈಗ ಕರ್ನಾಟಕ ಪಂಚಾಯತ್‌ರಾಜ್ ವಿಧೇಯಕ 1993 ಎಂದು ಇದೆ. ಮೊದಲು ಇದ್ದದ್ದು ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್‌ರಾಜ್ ಸಮಿತೀ, ಮಂಡಲ್ ಪಂಚಾಯತ್ ಅಂಡ್ ನ್ಯಾಯ ಪಂಚಾಯತ್ ಆಕ್ಟ್ ಎಂದು; ಇಲ್ಲಿ ಸಿಗ್ನಿಫಿಕೇನ್ಸ್ ಇದೆ. ನೀವು ತ್ರೀ ಟೈರ್ ಸಿಸ್ಟಂ ಎಂದು ಏನು ಇಂಟರ್‌ಡ್ಯೂಸ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. The entire three tier system is not only depicted but it has formed part of the nomanclature of the Bill of the Legislature. The very nomenclature explains three tier system. ಇದನ್ನು ಬದಲಾವಣೆ ಮಾಡಿದ್ದೀರಿ. ಚಿಕ್ಕ ಹೆಸರು ಇಟ್ಟಿದ್ದೀರಿ ಸಂತೋಷ.

ನಾನು ಇದರ ಪರಿಣಾಮಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಜಿಲ್ಲಾ ಪರಿಷತ್ತು ಈಗ ಜಿಲ್ಲಾ ಪಂಚಾಯತ್‌ರಾಜ್ ಮಂಡಲ ಪಂಚಾಯತಿ ಈಗ ಗ್ರಾಮ ಪಂಚಾಯತ್. ತಾಲ್ಲೂಕು ಪಂಚಾಯತ್ ಸಮಿತಿ ಈಗ ತಾಲ್ಲೂಕು ಪಂಚಾಯತ್. ಈ ಹೆಸರು ಬದಲಾವಣೆಯಿಂದ ನಿಮಗೆ ಆದ ಲಾಭ ಏನು? ಆದರೆ ಆಗತಕ್ಕಂಥ ನಷ್ಟ ಅಪಾರ. ಲಾಭ ಏನು? ನಾನು ತಮಗೆ ಹೇಳುತ್ತೇನೆ. ಒಂದು ಹೆಸರಿನ ಬದಲಾವಣೆಯಿಂದಾಗಿ ರಾಜ್ಯದ ಉದ್ದಗಲಕ್ಕೂ ಕಳೆದ 5 ವರ್ಷಗಳಲ್ಲಿ ಜಿಲ್ಲಾ ಪರಿಷತ್ತಿನವರು ಏನು ವ್ಯವಹಾರಗಳನ್ನು ಮಾಡಿದ್ದಾರೆ. ಈ ವ್ಯವಹಾರಗಳ ಪರಿಪೂರ್ಣವಾದಂತಹ ಹೆಸರುಗಳ ಬದಲಾವಣೆ. ಈ 5 ವರ್ಷಗಳಲ್ಲಿ ಲಕ್ಷಾಂತರ ಕೆಲಸಗಳು ಆಗಿವೆ. ಪ್ರತಿಯೊಂದು ಬೀದಿಗೆ ಹೆಸರು ಇಟ್ಟಿದ್ದಾರೆ. ಮಂಡಲ ಪಂಚಾಯತಿ ಮಾಡಿದ ಕೆಲಸಕ್ಕೆ, ಜಿಲ್ಲಾ ಪರಿಷತ್ತು ಮಾಡಿದ ಕೆಲಸಕ್ಕೆ ಹೆಸರನ್ನಿಟ್ಟಿದ್ದಾರೆ. ಈಗ ಅವುಗಳನ್ನೆಲ್ಲಾ ಬದಲಾವಣೆ ಮಾಡಬೇಕು. ಈಗ ಅದಕ್ಕಾಗಿ ಆಫೀಸ್‌ಗಳಲ್ಲಿ ಫಾರಮ್ಸ್ ಪ್ರಿಂಟ್ ಮಾಡುತ್ತಾರೆ. ಆ ಹಳೆಯ ಫಾರಮ್ಸ್ ಸುಟ್ಟು ಹಾಕಿ ಹೊಸ ಫಾರಮ್ಸ್ ಸೃಷ್ಟಿ ಆಗಬೇಕು. ಪುಸ್ತಕಗಳನ್ನು ಏನು ತಯಾರು ಮಾಡಿದ್ದಾರೆ, ಆ ಪುಸ್ತಕಗಳನ್ನು ಸುಟ್ಟು ಹಾಕಬೇಕು. ಹೊಸ ಪುಸ್ತಕಗಳನ್ನು ತಯಾರು ಮಾಡಬೇಕು. ವಾಹನಗಳ ಮೇಲೆ ಬೋರ್ಡ್‌ಗಳನ್ನು ಬರೆದಿದ್ದಾರೆ, ಅವುಗಳನೆಲ್ಲ ಕಿತ್ತುಹಾಕಿ ಹೊಸದಾಗಿ ಬರೆಸಬೇಕು. ಕಛೇರಿಗಳ ಮೇಲೆ ನಾಮಫಲಕಗಳು ಏನು ಇವೆ, ಅವುಗಳನ್ನು ಕಿತ್ತು ಹಾಕಿ ಬೇರೆ ಬರೆಸಬೇಕು. ಇದು ನನ್ನ ಅಂದಾಜು. ಮಾನ್ಯ ಭೈರೇಗೌಡರು ಖರ್ಚು ಸುಮಾರಾಗಿ 5 ಕೋಟಿ ಎನ್ನುತ್ತಾರೆ. ಎಲ್ಲಾ ಲೆಕ್ಕ ಹಾಕಿದರೆ ಫಾರಮ್ಸ್ ಲೆಕ್ಕ ಹಾಕಿದರೆ ಸುಮಾರು 10 ರಿಂದ 15 ಕೋಟಿ ರೂಪಾಯಿಗಳು ಖರ್ಚು ಆಗುತ್ತದೆ. ಜೊತೆಗೆ ಈ ಕಾರ್ಯ ಮತ್ತೊಂದು ಸಾರಿ ಮಾಡತಕ್ಕಂಥಾದ್ದಕ್ಕೆ ತಗಲತಕ್ಕಂಥ ಸಮಯದ ವೆಚ್ಚ ಇದೆಯಲ್ಲಾ ಅಂದರೆ ಅಧಿಕಾರಿಗಳು ಬದಲಾವಣೆಗೋಸ್ಕರ ಎಷ್ಟು ದಿವಸ ಶ್ರಮ ಪಡಬೇಕೋ ನನಗೆ ಗೊತ್ತಿಲ್ಲ ಅದು ಯಾವ ತರಹದ statistical justification.. ನಾವು ಒಂದು ಹೊಸ ಮಸೂದೆ ತಂದಿದ್ದೇವೆ, ಹೆಸರು ಬೇರೆ ಇದೆ ಅನ್ನುವುದಾದರೆ there should be some permanency somewhere.. ಹೀಗೆ ಬಂದ ಸರ್ಕಾರಗಳು ತಮ್ಮ ತಮ್ಮ ಆಲೋಚನೆಗೆ ತಕ್ಕಂತೆ ಹೆಸರುಗಳನ್ನು ಬದಲಾಯಿಸಿಕೊಂಡು ಹೋಗುವುದಕ್ಕಾಗುವುದಿಲ್ಲ. ನಮ್ಮ ಅಪ್ಪ ಹೆಸರು ಇಟ್ಟಿದ್ದು ಸರಿ ಇಲ್ಲ ಎಂದು ಹೇಳಿ ನನಗೆ ಮಿಾಸೆ ಬಂದ ಕೂಡಲೇ ನಾನು ಬದಲಾಯಿಸಿಕೊಳ್ಳುವುದಕ್ಕಾಗುವುದಿಲ್ಲ. There should be some permanency in the administrative set-up.. ನೀವು ~~ಈಗ~~ ಬದಲಾವಣೆ ಮಾಡಿದ್ದೀರಿ, ಮುಂದಿನವರು ಅದನ್ನೇ ಇಟ್ಟುಕೊಳ್ಳುತ್ತಾರೆ ಎನ್ನುವುದು ಏನು ಖಾಯಂ. ನಮ್ಮ ಸರ್ಕಾರ ಬಂದರೆ ನಾವು ಹಿಂದಕ್ಕೆ ಹೋಗಬಹುದು. There should be some sort of permanency.. ನೀವು ಹೆಸರುಗಳ ಮೇಲೆ ಏತಕ್ಕೆ ಗದಾಪ್ರಹಾರ ಮಾಡಿದ್ದೀರಿ ಎಂದು ನನಗೆ ಅರ್ಥವಾಗಲಿಲ್ಲ. ಆಮೇಲೆ ಸೆಕ್ಷನ್ 3 ಗ್ರಾಮಸಭೆ. ಈ ಆಕ್ಟ್‌ನಲ್ಲಿ ಮೂಲ ತತ್ವವೇ ಗ್ರಾಮಸಭೆ. ಒಂದು ಮಂಡಲದಲ್ಲಿ ನಡೆಯತಕ್ಕಂಥ ಒಟ್ಟಾರೆ ವ್ಯವಹಾರ ಗ್ರಾಮದ ಜನರಿಗೆ ತಿಳಿದಿರಬೇಕು. ಆಳುವವರು ಜನಕ್ಕೆ they should be accountable. ಇವತ್ತು ಶಾಸನಸಭೆಯ ಸದಸ್ಯರಾಗಿ ಲೋಕಸಭೆಯ ಸದಸ್ಯರಾಗಿ We are accountable. ಮಂತ್ರಿಗಳು ಕೂಡ ಒಂದು ರೀತಿಯಿಂದ ಈ ಶಾಸನ ಸಭೆಗೆ ಅಕೌಂಟಬಲ್ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಇತ್ತೀಚಿನ ಬೆಳವಣಿಗೆ ನೋಡಿದರೆ they are not accountable. ದಿನಾ ಜಗಳ ಮಾಡುತ್ತೇವೆಯಲ್ಲಾ. ಈಗ ಇಂತಹ ದೊಡ್ಡ ಮಸೂದೆಯನ್ನು ನಮ್ಮ ಮಗು ಅಂತ ತಬ್ಬಿಕೊಂಡಿದ್ದೀರಲ್ಲ. ಸ್ವಾಮಿ ಹಿಂದಕ್ಕೆ ತಿರುಗಿ ನೋಡಿ ಎಷ್ಟು ಜನ ಇದ್ದಾರೆ. ಅಕೌಂಟಬಲ್ ಅಲ್ಲ ಎನ್ನುವುದಕ್ಕೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಡ. ಕನಿಷ್ಟ ಇಂತಹ ಒಂದು ಕ್ರಾಂತಿಕಾರಕ ಮಸೂದೆಯನ್ನು ತಂದಾಗ ಒಂದು ಆಳುವ ಪಕ್ಷದ ಆಲೋಚನೆ ಏನು? ಖಾಲಿ ಬೆಂಚೇ ಇದು ಅಕೌಂಟಬಿಲಿಟಿಯೇ? Please tell me. I am seriously trying to explain the situation.

ಶ್ರೀ ಎಂ. ವೈ. ಘೋರ್ಪಡೆ : ಗ್ರಾಮಸಭೆ ಕಾನೂನಿನಲ್ಲಿದೆ. ಎಷ್ಟೋ ಕಡೆ ಕರೆಯುತ್ತಾ ಇಲ್ಲ. ನಾವು ಈಗ ಏನು ಮಾಡಿದ್ದೇವೆ ಅಂದರೆ, ಕಡ್ಡಾಯವಾಗಿ 6 ತಿಂಗಳಿಗೆ ಒಂದು ಸಾರಿ ಕರೆಯಲೇಬೇಕು, ಕರೆಯದಿದ್ದರೆ The Higher authority will call it.

Sri D. B. Chandre Gowda : I am on the point. ಹಿಂದೆ 6 ತಿಂಗಳಿಗೆ ಒಂದು ಸಾರಿ ಸಭೆ ಕರೆಯಬೇಕು ಎಂದು ಕಡ್ಡಾಯವಿತ್ತು. ಎಲ್ಲರೂ ಕರೆದಿದ್ದಾರೋ ಇಲ್ಲವೋ ಗೊತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಬಹುತೇಕ ಕರೆದಿದ್ದಾರೆ. ಈಗ ನೀವು ಹೊಸದು ಏನು ಮಾಡಿದ್ದೀರಿ ಅಂದರೆ 6 ತಿಂಗಳಿಗೆ ಒಮ್ಮೆ ಪಂಚಾಯತಿ ಸಭೆ ಕರೆಯದಿದ್ದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಗ್ರಾಮಸಭೆಯನ್ನು ಕರೆಯುವುದು. ಈ ಉದ್ದೇಶ ಒಳ್ಳೆಯದು. ಆದರೆ ಅಧಿಕಾರ? ಚುನಾಯಿತ ಸಭೆಯ ಅಧಿಕಾರದ ಜವಾಬ್ದಾರಿಯನ್ನು ನಾವು ಕಾರ್ಯನಿರ್ವಾಹಕ ಅಧಿಕಾರಿಗೆ ವರ್ಗಾಯಿಸಿದ್ದೇವೆ.

ಶ್ರೀ ಎಂ. ವೈ. ಘೋರ್ಪಡೆ : ಗ್ರಾಮ ಸಭೆಯ ಅಧಿಕಾರವನ್ನು ಯಾರೂ ಕಸಿದುಕೊಳ್ಳುತ್ತಿಲ್ಲ. ಗ್ರಾಮ ಸಭೆ ಅಧಿಕಾರ ಚಲಾಯಿಸುತ್ತದೆ. ನೀವು ಮೀಟಿಂಗ್ ಕರೆಯದಿದ್ದರೆ ಏನು ಮಾಡಬೇಕು? ಆ ಕೆಲಸ ಮಾತ್ರ ಅವರು ಮಾಡುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ಹಿಂದೆ ಈ ಸಭೆಯಲ್ಲಿ ಆಡಳಿತ ವರದಿಯನ್ನು ಇಡಬೇಕೆಂದು ಇತ್ತು. ಶಾಸನವನ್ನು ನಾನು ಓದಿಕೊಂಡ ಹಾಗೆ ಒಂದು ಬದಲಾವಣೆಯನ್ನು ಮಾಡಿದ್ದೀರಿ. ಲೆಕ್ಕ ಪರಿಶೋಧನಾ ವರದಿಯ ಟಿಪ್ಪಣಿಯನ್ನು , ಅದಕ್ಕೆ ನೀಡಿದ ಉತ್ತರವನ್ನು ಸಭೆಗೆ ಮಂಡಿಸುವುದು ಎನ್ನುವ ಒಂದು ಹೊಸ ಆಯಾಮವನ್ನು ನೀವು ಅದಕ್ಕೆ ಕೊಟ್ಟಿದ್ದೀರಿ. ನಾನು ಈಗ ಆಲೋಚನೆ ಮಾಡುತ್ತೇನೆ. ನಾವು ಅಲ್ಲಿ ಚರ್ಚೆ ಮಾಡತಕ್ಕಂಥಾದ್ದು ಡೆವಲಪ್‌ಮೆಂಟಲ್ ಆಕ್ಟಿವಿಟೀಸ್. ಹಿಂದೆ ಇದ್ದ ಶಾಸನದಲ್ಲಿ ಜಿಲ್ಲಾಪರಿಷತ್ತು, ಮಂಡಲದ ಯೋಜನೆಗಳನ್ನು ತಯಾರು ಮಾಡತಕ್ಕಂಥ ಸೂಚನೆಗಳನ್ನು ಕೊಡುತ್ತಿತ್ತು. ಮಂಡಲಗಳು ಯೋಜನೆಗಳನ್ನು ತಯಾರು ಮಾಡಿ ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಅದರ ಒಪ್ಪಿಗೆಯನ್ನು ಪಡೆದು ಜಿಲ್ಲಾ ಪರಿಷತ್ತಿಗೆ ಕಳುಹಿಸುತ್ತಿತ್ತು. ಅದು ಅಂತಿಮವಾಗುತ್ತಿತ್ತು. ಜಿಲ್ಲಾ ಪರಿಷತ್ತು ತನ್ನ ಎಲ್ಲಾ ವರದಿಗಳನ್ನು ಕ್ರೋಢೀಕರಿಸಿ ರಾಜ್ಯ ಸರ್ಕಾರಕ್ಕೆ ಕಳುಹಿಸುತ್ತಿದ್ದ ವ್ಯವಸ್ಥೆ ಇತ್ತು. ಈಗ ಮತ್ತೊಂದು ಹೊಸ ಆಯಾಮವನ್ನು ಮಾಡಿದ್ದೀರಿ. ಇದರಲ್ಲಿ 310ನೇ ಸೆಕ್ಷನ್ ಸೇರಿಸಿದ್ದೀರಿ. ನಾನು ಅದಕ್ಕೆ ಆಮೇಲೆ ಬರುತ್ತೇನೆ. ಈ ಲೆಕ್ಕ ಪರಿಶೋಧನೆ ಅಂದರೆ ಈ ಲೆಕ್ಕ ಪರಿಶೋಧನೆಯನ್ನು ಮಾಡತಕ್ಕಂಥವರು ಯಾರು? ಆಡಿಟ್ ವರದಿಯನ್ನು ಅಲ್ಲಿ ಇಡಬೇಕಾಗುತ್ತದೆ. ಆಡಿಟ್ ವರದಿಯನ್ನು ಗ್ರಾಮಸಭೆಯಲ್ಲಿ ಚರ್ಚೆಮಾಡುವುದಕ್ಕೆ ಸಾಧ್ಯವೇ? ಸಾಧ್ಯವಾಗುವುದಾದರೆ ಸಂತೋಷ. ಆದ್ದರಿಂದ ನನ್ನದೊಂದು ಸಲಹೆ ಇದೆ, ಆಲೋಚನೆ ಮಾಡಿ. ತಾವು ಹೇಳಿದ ಹಾಗೆ I have an open mind. ಇಂತಹ ಸಭೆಯನ್ನು ವರ್ಷಕ್ಕೆ ಒಂದು ಸಾರಿ ಕರೆಯತಕ್ಕಂಥಾದ್ದು ಕಡ್ಡಾಯ ಮಾಡುವುದು ಒಳ್ಳೆಯದು. ಕಾರಣ ಏನೆಂದರೆ, ವರ್ಷದಲ್ಲಿ ಆಗಿರತಕ್ಕಂಥ ಅಭಿವೃದ್ಧಿ, ಖರ್ಚುವೆಚ್ಚ ಮತ್ತು ಮುಂದಿನ ವರ್ಷ ಮಾಡಬೇಕಾದಂತಹ ಆಯವ್ಯಯ - ಇವೆರಡನ್ನೂ ಚರ್ಚೆಮಾಡುವುದಕ್ಕೆ ಸಾಧ್ಯ. ಆಗ ಆಡಳಿತವರದಿಯ ಟಿಪ್ಪಣಿಯನ್ನು ಏನು ಇಡುತ್ತೀರಿ ಅದು ಅಲ್ಲಿ ಕೆಲಸಕ್ಕೆ ಬರುತ್ತದೆ. ಅದೂ ಅಲ್ಲದೆ 6 ತಿಂಗಳಿಗೆ ನಾನು ಇಲ್ಲಿ ಈ ಶಾಸನ ಸಭೆಯಲ್ಲಿ ಹಲವು ಹತ್ತು ಸಾರಿ ಪರ್‌ಫಾರ್ಮೆನ್ಸ್ ಬಡ್ಜೆಟ್ ಇಡಿ ಎಂದು ಕೇಳಿದ್ದೇನೆ. With the enormous administrative set up, you are not in a position to present the performance Budget on the floor of the House here. How do you expect the Panchayat to present the performance Budget at the Mandal level.

Therefore, ದಯಮಾಡಿ ಇದನ್ನು ಆಲೋಚನೆ ಮಾಡಿ. ಮಾನ್ಯ ಅಧ್ಯಕ್ಷರೇ, ಇದು ಸ್ವಲ್ಪ ಮಾಡಿರತಕ್ಕಂಥ ಸಣ್ಣ ಬದಲಾವಣೆ. ಅದರಿಂದ ನಾನು ಬಹಳ ಮುಖ್ಯವಾದಂತಹ, ಗಂಭೀರವಾದಂತಹ ಮತ್ತು ಈ ಮಸೂದೆಯ ಒಟ್ಟಾರೆ ಅನುಭವದ ಗೋ ಬೈ ಎಲ್ಲಿ ಆಗಿದೆ ಎನ್ನುವುದನ್ನು ಹೇಳುತ್ತೇನೆ. ಮಂಡಲ ಪಂಚಾಯತಿಯ ವ್ಯಾಪ್ತಿಯನ್ನು ಚಿಕ್ಕದು ಮಾಡಿದ್ದಾರೆ. ಸದಸ್ಯರು ಅಷ್ಟೇ ಜನರು ಇರುತ್ತಾರೆ. ಅಧ್ಯಕ್ಷರು ಉಪಾಧ್ಯಕ್ಷರು ಜಾಸ್ತಿ ಆಗುತ್ತಾರೆ. ಏಕೆಂದರೆ, ಸದಸ್ಯತ್ವ 400 ಜನಕ್ಕೆ ಒಂದು ಎಂದು ನಮ್ಮ ಶಾಸನದಲ್ಲಿದೆ. ಇವೊತ್ತಿಗೂ ಅದು ಬದಲಾವಣೆಯಾಗಿಲ್ಲ. ಸದಸ್ಯರ ಸಂಖ್ಯೆ ಜಾಸ್ತಿಯಾಗುತ್ತದೆ. 2500ಜನ ಅಧ್ಯಕ್ಷರುಗಳು ಇದ್ದವರು ಈಗ 5000 ಜನರಾಗುತ್ತಾರೆ. 2500 ಜನ ಉಪಾಧ್ಯಕ್ಷರುಗಳು ಇದ್ದವರು ಕೂಡ 5000 ಜನರಾಗುತ್ತಾರೆ. ಆದರೆ ಚುನಾಯಿತ ಸದಸ್ಯರ ಸಂಖ್ಯೆ ಮಾತ್ರ ಅಷ್ಟೇ ಇರುತ್ತದೆ ಹೀಗಾಗಿ ಮೂಗಿಗಿಂತ ಮೂಗುತಿ ಭಾರ ಎಂಬ ಕನ್ನಡದ ಗಾದೆಯ ಪ್ರಕಾರ ಈಗ ಆಗಿದೆ. ನಾವು ಡಿಸೆಂಟ್ರಲೈಸೇಶನ್ ಮಾಡಿ ಜನರ ಹತ್ತಿರ ಹೋಗಬೇಕೆಂದು ವಿಚಾರ ಮಾಡುವಾಗ, ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಜಾಸ್ತಿ ಮಾಡುವ ಒಂದು ವ್ಯವಸ್ಥೆ ಜನರ ಹತ್ತಿರಕ್ಕೆ ಹೋಗುವುದೇ? 2534 ಮಂಡಳಗಳು ಅಸ್ತಿತ್ವದಲ್ಲಿದೆ. ಇನ್ನು ಸರಿ ಸುಮಾರು 5000 ಮಂಡಳ್‌ಗಳು ಅಸ್ತಿತ್ವಕ್ಕೆ ಬರುತ್ತವೆ. ಆದರೆ ಸದಸ್ಯರ ಸಂಖ್ಯೆ ಮಾತ್ರ ಈಗ ಇರುವುದನ್ನು ಮೀರುವುದಿಲ್ಲ. ಇಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಂಖ್ಯೆ ಮಾತ್ರ ದ್ವಿಗುಣವಾಗುತ್ತದೆ. ಹಿಂದಿನ ಶಾಸನದಲ್ಲಿ 1971ರ ಸೆನ್ಸಸ್‌ನಂತೆ 8000ದಿಂದ 12000ದ ಸಂಖ್ಯೆಗೆ ಒಂದು ಮಂಡಳ, ಈಗ 5000 ದಿಂದ 7000ಕ್ಕೆ ಒಂದು ಮಂಡಳ ಎಂದು ನಿಗದಿ ಮಾಡಿದ್ದಾರೆ. ಇದು 1991ರ ಸೆನ್ಸಸ್‌ನ ಪ್ರಕಾರ ಮಾಡಿದ್ದು. 8000 ದಿಂದ 12000ದ ವರೆಗೆ ಎಂದು ಯಾವ ಮಂಡಳಗಳನ್ನು ಮಾಡಿದ್ದೇವೋ, ಅದರಲ್ಲಿ ಮಲೆನಾಡಿಗೆ ಸ್ವಲ್ಪ ವಿನಾಯಿತಿ ಕೊಟ್ಟಿದ್ದಾರೆ. ಅದು 4000ಕ್ಕೆ ಕಡಿಮೆ ಇಲ್ಲದ ಹಾಗೆ, ಮಂಡಳ ಪಂಚಾಯತ್‌ಗಳ ರಚನೆಗೆ ಅಲ್ಲಿ ಅವಕಾಶ ಇದೆ. ಈಗ ಅದನ್ನು 2500ಕ್ಕೆ ಇಳಿಸಿದ್ದೀರಿ. 1971ರ ಸೆನ್ಸ್‌ಸ್‌ಗೆ 4000 ಇದ್ದುದು 1991ರ 2500ಕ್ಕೆ ಇಳಿದರೆ ಆಗ ನನ್ನ ತಾಲ್ಲೂಕ್‌ನಲ್ಲಿ 18 ಮಂಡಳಗಳು ಇವೆ, ನನ್ನ ಮತ ಕ್ಷೇತ್ರದಲ್ಲಿ 22 ಮಂಡಳಗಳು ಇವೆ. ಹಳೆಯ ಸಿಸ್ಟಂನಲ್ಲಿ ನನ್ನ ತಾಲ್ಲೂಕಿನಲ್ಲಿ 46 ಪಂಚಾಯತ್‌ಗಳು ಇದ್ದವು, ನನ್ನ ಕ್ಷೇತ್ರ ತೀರ್ಥಹಳ್ಳಿ ತಾಲ್ಲೂಕು ಮತ್ತು ಹೊಸನಗರದ ಒಂದು ಹೋಬಳಿಯೂ ಸೇರಿಕೊಳ್ಳುತ್ತದೆ. ಆ 46 ಪಂಚಾಯತ್‌ಗಳು ಹೇಗೆ ಕೆಲಸ ಮಾಡುತ್ತಿದ್ದುವು ಎಂದು ಸ್ಥೂಲವಾಗಿ ಒಂದು ವರದಿಯನ್ನು ತರಿಸಿನೋಡಿದರೆ, ಅವರಿಗೆ ಸಭೆ ಸೇರಿದರೆ ಕಾಫಿ ಕುಡಿಯಲು ಕೂಡ ಹಣ ಇರುತ್ತಿರಲಿಲ್ಲ. ಆ ಕಾಲಕ್ಕೆ ಒಂದು ದೊಡ್ಡ ಮಂಡಳಕ್ಕೆ ಸುಮಾರು 2000 ರೂಪಾಯಿಗಳ ವರಮಾನ ಬರಬಹುದು. ಅವುಗಳ ಸ್ಥಿತಿ ಏನೆಂಬುದು ಎಲ್ಲಾ ಮಾನ್ಯ ಸದಸ್ಯರುಗಳು ಮತ್ತು ಹಳೆಯ ಸದಸ್ಯರುಗಳಿಗೆ ಗೊತ್ತಿರಬಹುದು. ಆ ಮಂಡಳಗಳು ನಿರುಪಯುಕ್ತ ಮಂಡಳಗಳು ಎನ್ನುವ ಕಾರಣಕ್ಕಾಗಿ ಉಪಯುಕ್ತ ಮಂಡಳಗಳು ಆಗಬೇಕೆಂಬ ಕಾರಣಕ್ಕಾಗಿ ಮಂಡಳಗಳು ಎನ್ನುವ ಕಾರಣಕ್ಕಾಗಿ ಉಪಯುಕ್ತ ಮಂಡಳಗಳು ಆಗಬೇಕೆಂಬ ಕಾರಣಕ್ಕಾಗಿ ಮಂಡಳಗಳ ರಚನೆ ಆಗಿದ್ದು ಅನೇಕ ಗ್ರಾಮಗಳು i.e A group of villages are called Mandala, ಇದನ್ನು ಎಸ್ಟಾಬ್ಲಿಶ್ ಮಾಡುವಾಗ ಸಾಕಷ್ಟು ಚರ್ಚೆಗಳು ಆಗಿವೆ. ವ್ಯಾಪ್ತಿ ಎಷ್ಟಿರಬೇಕು, ವಿಸ್ತೀರ್ಣ ಎಷ್ಟಿರ ಬೇಕು, ತ್ರಿಜ್ಯ ಎಷ್ಟಿರಬೇಕೆಂಬ ವಿಚಾರಗಳ ಬಗ್ಗೆ ಚರ್ಚೆಯಾಯಿತು. ತಮಗೆ ಆ ವಿಚಾರವಾಗಿ ಹೇಳುವುದಾದರೆ ಪಕ್ಷಾತೀತವಾಗಿ ನಿನ್ನೆಯ ಆ ವಿಚಾರವಾಗಿ ದಿವಸ ಇಡೀ ದಿನ ಕುಳಿತು. ಅನೇಕ ಜನ ಮಾನ್ಯ ಸದಸ್ಯರುಗಳು ಮತ್ತು ಅನುಭವಿ ಅಧ್ಯಕ್ಷರುಗಳನ್ನು ಕೂರಿಸಿಕೊಂಡು ಚರ್ಚೆ ಮಾಡಿದ್ದೇನೆ. ಅವರ ಅಭಿಪ್ರಾಯದಂತೆ ಈಗಿರತಕ್ಕಂಥವುಗಳು ಸರಿಯಾಗಿವೆ, ಅವುಗಳನ್ನು ಏಕೆ ಚಿಕ್ಕದು ಮಾಡುತ್ತೀರಿ ಎಂಬುದಾಗಿದೆ. ಇದರಿಂದಾಗಿ ಒಂದು ಕಡೆಯಲ್ಲಿ ಆಡಳಿತಾತ್ಮಕವಾದಂಥ ವೆಚ್ಚವು ಜಾಸ್ತಿಯಾಗುತ್ತದೆ. ಹಾಗೆಯೇ ಗ್ರಾಮಪಂಚಾಯತಿಗಳ ಅಧ್ಯಕ್ಷರುಗಳು ಮತ್ತು ಉಪಾಧ್ಯಕ್ಷರುಗಳ ಸಂಖ್ಯೆಯೂ ಜಾಸ್ತಿಯಾಗುತ್ತದೆ.

ಆದರೆ ಕೆಲಸ ಮಾತ್ರ ಹೆಚ್ಚಾಗುವುದಿಲ್ಲ. ಏರಿಯಾ ನೀವೇನು ಕಡಿಮೆಯಾಗುತ್ತದೆ ಎಂದು ತಿಳಿದುಕೊಂಡಿದ್ದೀರಿ, ಆ ಏರಿಯಾಕ್ಕೆ ನೀವು ಕೊಡತಕ್ಕಂಥ ಹಣ ಸರಿಯಾಗಿ ಉಪಯೋಗವಾಗುವುದಿಲ್ಲ. ನಾನು ಅದರ ಬಗ್ಗೆ ವಿವರಗಳನ್ನು ಕೊಡುತ್ತೇನೆ. ಈಗ 18 ಇದ್ದ ಮಂಡಳ ಮುಂದೆ ನನ್ನ ತಾಲ್ಲೂಕಿನಲ್ಲಿ ಮತ್ತೆ 46ಕ್ಕೆ ಹೋಗುತ್ತದೆ. ಆದ್ದರಿಂದ ಹಳೆಯ ಪಂಚಾಯತ್‌ಗಳು ಏನಿದ್ದವು ಅದಕ್ಕಿಂತಲೂ ಹೀನಾಯ ಸ್ಥಿತಿಗೆ ಹೋಗುತ್ತದೆ. ಹಾಗೆ ಹೋಗಬಾರದು ಎಂದು ಒಂದು ಆಲೋಚನೆಯನ್ನು ನೀವು ಮಾಡಿದ್ದೀರಿ. ತಲಾ ಅನುದಾನವನ್ನು ಬಿಟ್ಟು ಪ್ರತಿ ಗ್ರಾಮಪಂಚಾಯಿತಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡತಕ್ಕಂಥ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ನೀವು ಆಡಳಿತಾತ್ಮಕ ವೆಚ್ಚಕ್ಕೆ ಖರ್ಚು ಮಾಡಬೇಡಿ ಎಂದು ಆದೇಶವನ್ನು ಕೊಟ್ಟಿದ್ದೀರಿ, ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಮಾತ್ರ ಅಂದರೆ ಕುಡಿಯುವ ನೀರಿಗೋ, ಬೀದಿದೀಪಗಳಿಗೋ, ಚರಂಡಿ ತೆಗೆಯುವುದಕ್ಕೋ, ರಸ್ತೆ ಮಾಡುವುದಕೋ, ಹೀಗೆ ಮುಂತಾಗಿ ಬಳಸಿಕೊಳ್ಳಿ ಎಂದು ಹೇಳಿದ್ದೀರಿ. ನಾವು ಗ್ರಾಮ್ಯ ಜೀವನದಿಂದ ಬಂದವರು ಹೇಗೆ ಆಡಳಿತಾತ್ಮಕ ವೆಚ್ಚ ಜಾಸ್ತಿಯಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. ಇದರಲ್ಲಿ ಮುಂದೆ ಒಂದು ಬಹಳ ಪ್ರಮುಖವಾದ ಅಂಶ ಯಾವುದು ಬರುತ್ತದೆ ಅಂದರೆ, ಈಗ ಎಲ್ಲಾ ಮಂಡಳಿಗಳೂ ರದ್ದಾಗಿ ಆಡಳಿತಾಧಿಕಾರಿಗಳು ಇದ್ದಾರೆ. ಯಾರು ಆಡಳಿತ ಅಧಿಕಾರಿ? ಅಸಿಸ್ಟೆಂಟ್ ಕಮಿಶನರ್ ಲೆವಲ್ ಹುದ್ದೆಯ ಅಧಿಕಾರಿ ಈ ಮಂಡಳಿಯ ಆಡಳಿತಾಧಿಕಾರಿಯಾಗಬೇಕೆನ್ನುವುದು ಈ ಮಸೂದೆಯ ನಿರ್ದೇಶನ. ಈಗ ಎಲ್ಲಾ ಒಟ್ಟಿಗೆ ವಜಾವಾದುವಲ್ಲ. ಹೀಗೆ ವಜಾ ಆದಮೇಲೆ, ಅಲ್ಲಿಗೆ ಹಾಕಿದ ಆಡಳಿತಾಧಿಕಾರಿಗಳು ಯಾರು? ಪೋಲೀಸ್ ಇಲಾಖೆಯನ್ನು ಬಿಟ್ಟು, ಅಸಿಸ್ಟೆಂಟ್ ಇಂಜಿನಿಯರ್, ಮುಂತಾಗಿ ಎಲ್ಲಾ ಇಲಾಖೆಯವರುಗಳೂ ಕೂಡ ಆಡಳಿತಾಧಿಕಾರಿಯಾದರು. ನಾಲ್ಕು ಮಂಡಳಿಕ್ಕೆ ಒಬ್ಬ ಆಡಳಿತಾಧಿಕಾರಿ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಒಬ್ಬ ಇಂಜಿನಿಯರ್ ನಾಲ್ಕು ಮಂಡಳಿಗಳಿಗೆ ಆಡಳಿತಾಧಿಕಾರಿಯಾಗಿದ್ದ. ಒಂದು ವರ್ಷ ಮೂರು ತಿಂಗಳಲ್ಲಿ ಒಂದು ರೂಪಾಯಿಯನ್ನು ಕೂಡ ಆತನು ಖರ್ಚು ಮಾಡಿಲ್ಲ; ಹೊಸನಗರ ತಾಲ್ಲೂಕಿನದ್ದು ನಾನು ಹೇಳಿದ್ದು. ತಾವುಗಳು ಬೇಕಾದರೆ ಅದರ ಬಗ್ಗೆ ವಿವರಗಳನ್ನು ತರಿಸಿಕೊಳ್ಳಿ. ಹೋಬಳಿ ನನ್ನದು, ತಾಲ್ಲೂಕು ನನ್ನದು, ಅವನ ಆಡಳಿತದ ರೀತಿ ನೋಡಿ, ಒಂದೂವರೆ ವರ್ಷದಿಂದ ಒಂದು ಕೆಲಸವನ್ನು ಕೂಡ ಆತನು ಮಾಡಿಲ್ಲ. 2500 ಮಂಡಳಗಳಿಗೆ ನೀವು ಆಡಳಿತಾಧಿಕಾರಿಗಳನ್ನು ನೇಮಿಸಲು ಸಾಧ್ಯವಿಲ್ಲದೇ ಇರುವಂಥ ಸ್ಥಿತಿಯಲ್ಲಿರುವಾಗ, ಮುಂದೆ ಇದು 5000ವಾಗಿ ಇಂಥಾದ್ದೆ ಸ್ಥಿತಿ ಬಂದು ಚುನಾವಣೆ ಮಾಡಲು ಸಾಧ್ಯವಿಲ್ಲದೆ, ಆಡಳಿತಾಧಿಕಾರಿಗಳನ್ನು ನೇಮಿಸತಕ್ಕಂಥ ಒಂದು ಪರಿಸ್ಥಿತಿಗೆ ಹೋದರೆ, ಆಗ ಯಾವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೀರಿ ಎಂಬ ಬಗ್ಗೆ ನಾನು ತಮ್ಮಿಂದ ಉತ್ತರವನ್ನು ನಿರೀಕ್ಷಿಸುತ್ತೇನೆ. ಈ ಐದು ವರ್ಷಗಳಲ್ಲಿ ಹ್ಯಾಟ್ಸ್ ಆಫ್ ಮಿಸ್ಟರ್ ನಜೀರ್ ಸಾಬ್, ಆಗ ಎನ್‌ಆರ್‌ಡಬ್ಲೂ ಸ್ಕೀಮ್ ಎಂದು ಇತ್ತು, ಆರ್‌ಎಲ್‌ಇಜಿಪಿ ಸ್ಕೀಮ್ಸ್ ಎಂದು ಇತ್ತು, ಇವುಗಳು ಗ್ರಾಮದ ರಸ್ತೆಗಳಿಗೆ ಮಣ್ಣು ಹಾಕುವ ಕೆಲಸವನ್ನು ಮಾಡುವುದು. ಮಣ್ಣು ಹಾಕಿ ಬಿಲ್ ತೆಗೆದುಕೊಳ್ಳುವುದು. ಇಂಥ ದುರವಸ್ಥೆಯಲ್ಲಿ ವೆಚ್ಚವಾಗುತ್ತಿದ್ದ ಹಣವನ್ನು ಆಸ್ತಿ ಮಾಡಿ ಇಟ್ಟಿದ್ದಾರೆ. ಆಸ್ತಿ ಏನು? ಕಛೇರಿಗಳ ಕಟ್ಟಡಗಳನ್ನು ಕಟ್ಟಿದ್ದಾರೆ, ಪೀಠೋಪಕರಣಗಳನ್ನು ಕೊಟ್ಟಿದ್ದಾರೆ, ಸಿಬ್ಬಂದಿ ಒದಗಿಸಿದ್ದಾರೆ, ಪ್ರತಿಯೊಂದು ಮಂಡಳದಲ್ಲಿಯೂ ಇವೊತ್ತು ಕಟ್ಟಡಗಳು ಇವೆ. ಯಾವುದೇ ತಾಲ್ಲೂಕಿಗೆ ಹೋದರೂ ಅಲ್ಲಿ ಮಂಡಳ ಪಂಚಾಯತ್ ಕಟ್ಟಡಗಳು ಇವೆ. ಈಗ 2500 ಕಚೇರಿ ಕಟ್ಟಡಗಳನ್ನು ಇವೆ. ಮುಂದೆ ಇನ್ನೂ 2500 ಕಚೇರಿಗಳನ್ನು ನೀವು ಕಟ್ಟಬೇಕು. ಅದರ ಅಗತ್ಯ ಏನು? ಮುಂದೆ ಈ 2500 ಕಚೇರಿಗಳಿಗೆ ಪೀಠೋಪಕರಣಗಳು ಮತ್ತು ಸಿಬ್ಬಂದಿಯನ್ನು ಕೂಡ ನೀವು ಕೊಡಬೇಕು. ಹೊಸದಾಗಿ ಕೇಂದ್ರ ಸರ್ಕಾರದವರು ಒಂದು ನಿರ್ಣಯ ಮಾಡಿದ್ದಾರೆ. ಅದರ ಪ್ರಕಾರ ಎಲ್ಲಾ ಮಂಡಳಗಳಿಗೂ ದೂರ ಸಂಪರ್ಕ ವ್ಯವಸ್ಥೆಯನ್ನು ಮಾಡಬೇಕು. ಇದು ಸ್ವಾಗತಾರ್ಹ.

ನಮ್ಮ ಕಾಲದಲ್ಲಿ ಅದು ಆಗುತ್ತದೆ ಎಂದು ಆಲೋಚನೆ ಮಾಡಿದ್ದೆ ಆದರೆ ಆಗಿಲ್ಲ. ಆದರೆ ಇನ್ನೂ ಹೆಚ್ಚಿನ 2500ಕ್ಕೆ ಎಲ್ಲಿಂದ ಬರಬೇಕು? ಒಟ್ಟಾರೆ ಸಮಗ್ರವಾಗಿ ಗ್ರಾಮ್ಯ ಜೀವನದ ಅನುಭವ ಇರತಕ್ಕಂಥವರಿಗೆ, ನೀವು ವ್ಯವಸ್ಥೆ ಮಾಡಿರತಕ್ಕಂಥ ಡೀಸೆಂಟ್ರಲೈಸೇಶನ್, ಜನರ ಹತ್ತಿರ ಇರಬೇಕೆನ್ನುವ ಮಾತನ್ನು ನಾನು ಪರಿಪೂರ್ಣವಾಗಿ ಒಪ್ಪುತ್ತೇನೆ. ಅಧಿಕಾರಿ ಜನರ ಹತ್ತಿರ ಇರಬೇಕೆನ್ನುವುದಕ್ಕೆ ಅದು ಸೀಮಿತವಾಗಬಾರದು.ಅಧಿಕಾರವು ವ್ಯಾವಹಾರಿಕವಾಗಿಯೂ ಇರಬೇಕು. ಅದರ ಆದಾಯ ವ್ಯವಹಾರಿಕವಾಗಿದ್ದರೆ ಆಡಳಿತವೂ ವ್ಯವಹಾರಿಕವಾಗಿರುತ್ತದೆ. ಇಷ್ಟೆಲ್ಲಾ ಅಧಿಕಾರ ಕೊಟ್ಟಂಥ ಮಂಡಳಗಳಲ್ಲಿ ವ್ಯವಹಾರಿಕವಾದ ನಡವಳಿಕೆಯು ನಡೆಯುತ್ತಾ ಇಲ್ಲ. ಅದನ್ನು ಇವೊತ್ತು ದ್ವಿಗುಣಗೊಳಿಸಿದರೆ ಅದು ವ್ಯವಹಾರಿಕವಾಗಿ ನಡೆಯುತ್ತದೆ ಎನ್ನತಕ್ಕಂಥ ಆಶ್ವಾಸನೆಯನ್ನು ಹೇಗೆ ನಮಗೆ ಕೊಡುತ್ತೀರಿ ಎಂಬುದನ್ನು ನಾನು ತಮ್ಮಿಂದ ತಿಳಿಯಬಯಸುತ್ತೇನೆ. ಈ ಮಸೂದೆ ಮಾಡಿದ ಮೇಲೆ ಮಲೆನಾಡಿನಲ್ಲಿ 10 ಕಿ.ಮೀ. ವ್ಯಾಸ ಮತ್ತು from the centre of the Mandal 5 ಕಿ.ಮೀ. ವ್ಯಾಸ ಹೊಸದಾಗಿ ಮಾಡಿರುವುದು. ಹಿಂದೆ 14 ಕಿ.ಮೀ. ವ್ಯಾಸ, 8 ಕಿ.ಮೀ. ಇತ್ತು , ಈಗ 3 ಕಿ.ಮೀ. ಕಡಿಮೆ ಮಾಡಿದ್ದೀರಿ. ಹೀಗೆ ಮಾಡುವಾಗ 1 ಕಿ.ಮೀ. ಅಷ್ಟು ಆಗಿದೆ. ಈ ಎಲ್ಲಾ ವ್ಯವಸ್ಥೆಗಳಾಗಬೇಕಾಗಿಲ್ಲ, ಇದು ಹೇಗೆ ಸಾಧ್ಯ? Practically I would get myself convinced .about this question. ಮತ್ತೊಂದು ಮೂಲಭೂತವಾದಂತಹ ಪ್ರಶ್ನೆ ಅಂದರೆ, ಸಣ್ಣ ಸಣ್ಣ ಪುರಸಭೆಗಳನ್ನೆಲ್ಲ ಪರಿವರ್ತಿತ ಮಂಡಲಗಳು ಎಂದು ಕರೆದರು. The benefit of the rural developmental scheme went to them. ಈಗ ಅವು ಪುನಃ ಪುರಸಭೆಗಳಾಗುತ್ತವೆ. ಇವು ನನಗೆ ಗೊತ್ತಿರುವ ಹಾಗೆ, ಸುಮಾರು 54 ಎಂದು ಕಾಣುತ್ತದೆ ಇಲ್ಲವೇ 75, 79, ಇರಬಹುದು. ಅದಕ್ಕೆ ಪರಿವರ್ತಿತ ಮಂಡಲಗಳು. ಅದಕ್ಕೆ ಪ್ರಧಾನರು, ಉಪಪ್ರಧಾನರು, ಈಗ ಆ ಪರಿವರ್ತಿತ ಮಂಡಲಗಳು ಪುನಃ ಪುರಸಭೆಗಳಾಗಿವೆ. ಇವು ಯಾವ ಪುರುಷಾರ್ಥಕ್ಕೆ ಆಗಿವೆ. We should not try to put them in the dissecting table and go on dissecting them every time.

ಶ್ರೀ ಕೆ. ಹೆಚ್. ರಂಗನಾಥ್ : ಮುನಿಸಿಪಾಲಿಟಿ ಮಾಡಿ, ಮುನಿಸಿಪಾಲಿಟಿ....

ಶ್ರೀ ಡಿ. ಬಿ. ಚಂದ್ರೇಗೌಡ : ಆಕ್ಟ್‌ನಲ್ಲಿ, ನಾವು ಲೇವಿಯನ್ನು ವಸೂಲು ಮಾಡುವುದು ಎಂದು ಇತ್ತು. ಈಗ ಅದು ಇಲ್ಲ, ಆದ್ದರಿಂದ ಪುನರ್ ಮಂಡಲಿಗಳು ಆಗಬೇಕೆನ್ನುವ ಒತ್ತಾಯ ಹೆಚ್ಚಿತ್ತು. Regarding education grants, it is a matter of opinion. It is my experience. ಆದ್ದರಿಂದ ಎಲ್ಲಾದರೂ ಒಂದು ಕಡೆ ಖಾಯಂ ವ್ಯವಸ್ಥೆ ಇರಬೇಕು. ಜನತಂತ್ರದಲ್ಲಿ ನಾವು ಏನು ಮಾಡಿದ್ದೇವೆ ಅಂದರೆ, ಜನರನ್ನು ಪ್ರಯೋಗಶಾಲೆಗೆ ಹಾಕಿ, ಒಂದೊಂದು ಸರ್ಕಾರ ಬಂದಾಗ ಒಂದೊಂದು ಪ್ರಯೋಗ ಮಾಡುವುದು. How long we can go on doing this. Let us try to stop it at one stage or other, and say this is the permanent system. ಹೀಗಾಗಿ ಈ ಜನತಂತ್ರದ ಮೇಲೆ ವಿಶ್ವಾಸವೇ ಹೋಗುತ್ತದೆ. ಆದ್ದರಿಂದ ಮತ್ತೊಂದು ದ್ವಂದ್ವವಾಗುತ್ತದೆ. ಪರಿವರ್ತಿತ ಪುನಃ ಮತ್ತೆ ಪುರಸಭೆಗಳು, ಮುಂದೆ ನಮ್ಮ ಸರ್ಕಾರ ಬಂದರೂ ಅಷ್ಟೆ, ಆಗ ಯಾರಾದರೂ ಒಬ್ಬರು ಗ್ರಾಮೀಣಾಭಿವೃದ್ಧಿ ಮಂತ್ರಿಗಳು, ಹಿಂದಿದ್ದ ವ್ಯವಸ್ಥೆ ಸರಿ ಇತ್ತು ಎಂದು ಮತ್ತೆ ಪ್ರಯೋಗ ಮಾಡುವುದು ನಡೆಯಬಹುದು. ನಾನು ಅದಕ್ಕೆ ಹೇಳಿದೆ, ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ, You have just tried to reduce, nothing beyond that.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಗ್ರಾಮದ ವ್ಯಾಪ್ತಿಯನ್ನು ಚಿಕ್ಕದು ಮಾಡಬೇಕೆಂದು ಸಾಮಾನ್ಯವಾಗಿ ಕರ್ನಾಟಕದಲ್ಲಿ ಎಲ್ಲ ಕಡೆ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಇದರಿಂದ ಗ್ರಾಮ ಸಭೆಯನ್ನು ಸ್ವಲ್ಪ ಎಫೆಕ್ಟಿವ್ ಆಗಿ ನಡೆಸಲಿಕ್ಕೆ ಅನುಕೂಲವಾಗಬಹುದೆಂದು ನನಗೆ ಅನ್ನಿಸುತ್ತದೆ. ಮತ್ತೆ ಅದರ ಡೆವಲಪ್‌ಮೆಂಟ್‌ನ್ನು ಕಾನ್ಸೆಂಟರೇಟ್ ಮಾಡಲಿಕ್ಕೂ ಆಗುತ್ತದೆ. ನಾವು ಈಗ ಒಂದು ಲಕ್ಷ ರೂಪಾಯಿಯನ್ನು ಕೊಡುತ್ತಿದ್ದೇವೆ. In a limited area, they should be able to pay concentrated attention to neglected areas, specially in your area, Malnad area, though the population is 2,500, we will give it One lakh. We will still give One lakh to 7,000 population also and Malnad also, because though the population is small, the problems are similar. The area has to be taken care more intensively....

ಶ್ರೀ ಬಿ. ಹೆಚ್. ಬನ್ನಿಕೋಡ್ : ಅಲ್ಲಿ 2.5 ಸಾವಿರಕ್ಕೆ ಒಂದು ಲಕ್ಷ ರೂಪಾಯಿಯನ್ನು ಕೊಡುತ್ತೀರಿ, ನಮ್ಮಲ್ಲಿ 7-8 ಸಾವಿರಕ್ಕೆ ಒಂದು ಲಕ್ಷ ರೂಪಾಯಿಯನ್ನು ಕೊಡುತ್ತೀರಿ, ಇದು ಜನಸಂಖ್ಯೆಯ ಆಧಾರದ ಮೇಲೆ ಇರಬೇಕೇ ವಿನಃ ಈ ರೀತಿ ಮಲತಾಯಿ ಧೋರಣೆ ಅಥವಾ ಪಾರ್ಷಿಯಾಲಿಟಿ ಇರಬಾರದು. ಅದನ್ನು ತಾವು ಸರಿಪಡಿಸಿಕೊಳ್ಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಅದಕ್ಕಾಗಿ ಹೇಳಿದೆ, ನೀವು 1 ಲಕ್ಷವನ್ನು ಕೊಡುತ್ತೇವೆ ಎನ್ನುವುದೇ ಮೂಲ ಬಂಡವಾಳ. ಮೊದಲು ಏಳೂವರೆ ರೂಪಾಯಿ ಮಂಡಲಕ್ಕೆ ಹೋಗುವುದು, ಎರಡೂವರೆ ರೂಪಾಯಿ ಜಿಲ್ಲಾಪರಿಷತ್ತಿಗೆ ಹೋಗುವುದು. ಈಗ ಮೂಲ ಬಂಡವಾಳ ಒಂದು ಲಕ್ಷ ರೂಪಾಯಿಯನ್ನು ಕೊಡುತ್ತೇವೆ ಎಂದರು. ಅದು ಖಾಯಂ ಆಗಿ ಸಿಕ್ಕಿದರೆ ಮುಂದೆ ಬಜೆಟ್‌ನಲ್ಲಿ ಪಾಸ್ ಮಾಡಿದರೆ ಐದು ಸಾವಿರ ಮಂಡಲಕ್ಕೆ 50 ಕೋಟಿ ರೂಪಾಯಿ ಬೇಕಾಗುತ್ತದೆ. This is very important. I do admit. But, sum and substance of my discussion is, it should be less expensive and more productive and more effective. ವಿಕೇಂದ್ರೀಕೃತ ವ್ಯವಸ್ಥೆ ಜಾರಿಗೆ ಬರಬೇಕು; ಈಗಾಗಲೇ 40 ವರ್ಷಗಳು ಕಳೆದು ಹೋಗಿಬಿಟ್ಟಿದೆ, ತಡವಾಗಿದೆ, ಮಾಡಲಿಲ್ಲ - ಈ ಕಳಕಳಿ ಲೋಕಸಭೆಯಲ್ಲಿ ಕಾನ್ಸ್ಟಿಟೂಶನ್ ಅಮೆಂಡ್‌ಮೆಂಟ್ ಬಿಲ್ಲನ್ನು ಫೈಲೆಟ್ ಮಾಡುತ್ತಾ ಮಂತ್ರಿಗಳು ಅಭಿವ್ಯಕ್ತ ಮಾಡುತ್ತಾರೆ. ಬಹಳ ಹಿಂದೆ ಪಂಡಿತ್ ಜವಾಹರ್‌ಲಾಲ್ ನೆಹರೂರವರು ಹೇಳುತ್ತಾರೆ. ತಕ್ಷಣಕ್ಕೆ ಚುನಾವಣೆಯನ್ನು ಮಾಡಿಬಿಡಿ ಎಂದು ನಾವು ಅಂದರೆ, ನೀವು ಹೊಸ ಮಸೂದೆಯನ್ನು ತಂದು ಇದಕ್ಕೆ ಈಗ ಡಿಲಿಮಿಟೇಶನ್ ಆಗಬೇಕು, 1991ನೆ ಸೆನ್‌ಸಸ್‌ನ ವರದಿ ಬೇಕು. ಆ ಸೆನ್‌ಸಸ್‌ನ ಆಧಾರ ಮಾಡೇ ಡೀಲಿಮಿಟೇಶನ್ ಆಗಬೇಕು. ಆಮೇಲೆ ಕ್ಷೇತ್ರವಾರು ಪುನರ್ ವಿಂಗಡಣೆಗಳಾದ ಮೇಲೆ ಮೀಸಲಾತಿಯ ತೀರ್ಮಾನವಾಗಬೇಕು. ಹೀಗೆ ಒಂದಕ್ಕೊಂದು ಸೇರಿಕೊಂಡಿದೆ. ನಿಜವಾಗಿಯೂ ನಿಮಗೆ ಕಳಕಳಿ ಇದ್ದಿದ್ದರೆ ಈ ಮಸೂದೆಯ ಮೇಲೆ ಚುನಾವಣೆಯನ್ನು ಮಾಡಬಹುದಾಗಿತ್ತು. ಚುನಾವಣೆಯನ್ನು ಮಾಡುವುದಕ್ಕೆ ಏನು ತೊಂದರೆ ಇರಲಿಲ್ಲ. Just to postpone the election, a fraud is being made in the name of the decentralisation. That is the complaint.

ಶ್ರೀ ಎಂ. ವೈ. ಘೋರ್ಪಡೆ : ಈ 1971ರ ಸೆನ್‌ಸಸ್ ಪ್ರಕಾರ ಎಲೆಕ್ಷನ್ ಮಾಡಲಿಕ್ಕೆ ಕಾನೂನಿನ ಪ್ರಕಾರ ಸಾಧ್ಯವಿಲ್ಲ. ಏಕೆಂದರೆ 1971ನೇ ಸೆನಸಸ್‌ನ ಪ್ರಕಾರ ಡೀಲಿಮಿಟೇಶನ್ ಇದೆ. ಅಂದರೆ ಆ ಡೀಲಿಮಿಟೇಶನ್ ಪ್ರಕಾರ ನಾವು ಚುನಾವಣೆಯನ್ನು ಮಾಡಲಿಕ್ಕೆ ಹೋದರೆ It will be illegal from the start, because when the latest census is available, we cannot base on the 1971 census.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, 1971ನೇ ಸೆನ್‌ಸಸ್ ಪ್ರಕಾರ ಚುನಾವಣೆ ಮಾಡಬೇಕೆಂದು ಈ ಕಾನೂನಿನಲ್ಲಿ ಇದೆ. ಎರಡು ಸಾವಿರ ಇಸವಿಯವರೆಗೂ ಬದಲಾವಣೆಯನ್ನು ಮಾಡಬಾರದೆಂದು ಕಾನೂನನ್ನು ಮಾಡಿ ಕೊಂಡಿದ್ದೇವೆ. ಆದ್ದರಿಂದ ತಾವು ಹೇಳಿದಂತಹ ಕಾರಣ ಸರಿಯಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : 1987ರಲ್ಲಿ ಚುನಾವಣೆಯಾದಾಗಲೂ ಕೂಡ ಇದೇ ಪ್ರಶ್ನೆ ಬಂದಿತ್ತು. 1971ನೇ ಸೆನ್‌ಸಸ್‌ನಲ್ಲಿ ಮಾಡಿದ್ದರೆ 1987ರಲ್ಲಿ ಚುನಾವಣೆ ಮಾಡುತ್ತಿದ್ದೀರಿ. 1981ರ ಸೆನ್‌ಸಸ್‌ನಲ್ಲಿ ಮಾಡಬೇಕು ಅದರ ವರದಿ ಬಂದಿಲ್ಲ. ಅದರ ಮೇಲೆ ಕೋರ್ಟಿಗೆ ಹೋದರು. If I remember correct.

ಶ್ರೀ ಎಂ. ವೈ. ಘೋರ್ಪಡೆ : Let us not debate this. ಏಕೆಂದರೆ, ರಾಜ್ಯಾಂಗದ ಅಮೆಂಡ್‌ಮೆಂಟ್‌ನಲ್ಲಿ nearest available census ಎಂಬ ಪದವನ್ನು ಉಪಯೋಗಿಸಿದ್ದಾರೆ. ಇಲ್ಲಿಯವರೆಗೂ 1981ರ ಸೆನ್‌ಸಸ್ was the nearest. 1991ರ ಸೆನ್‌ಸಸ್ ಫಿಗರ್ಸ್ ನಮ್ಮ ಕೈಗೆ ಸೇರಿದ ಮೇಲೆ ಅದರ ಪ್ರಕಾರವೇ ಮಾಡಬೇಕಾಗುತ್ತದೆ. 1981ರ ಪ್ರಕಾರ ಮಾಡಿದರೆ it will be violative of the Constitutional Amendment.

ಶ್ರೀ ಹೆಚ್. ಏಕಾಂತಯ್ಯ : ಆ ರೀತಿ ಅಲ್ಲ, ನಮ್ಮ ಸಂವಿಧಾನದಲ್ಲಿ ನಾವು ತಿದ್ದುಪಡಿಯನ್ನು ಮಾಡಿಕೊಂಡಿದ್ದೇವೆ. ಈ ಮನೆಯಲ್ಲಿ ಏನು ಡೀಲಿಮಿಟೇಶನ್ ಇದೆ, ಇದೇ ಆಗಲಿ, ಲೋಕಸಭೆಯಲ್ಲಾಗಲಿ, 1971ನೇ ಇಸವಿಯ ಸೆನ್‌ಸಸ್ ಪ್ರಕಾರವೇ ಕನಿಷ್ಠ 30 ವರ್ಷಗಳನ್ನು ನಾವು ಗೊತ್ತುಮಾಡಿಕೊಂಡಿದ್ದೇವೆ. ಅಂದರೆ ನಮಗೆ ಏನು ಕಾನೂನು ತಿದ್ದುಪಡಿಯನ್ನು ಸಂವಿಧಾನದಲ್ಲಿ ಮಾಡಿಕೊಂಡಿದ್ದೇವೆ, ಅದೇ ತಿದ್ದುಪಡಿಯ ಆದೇಶದಂತೆ ನಾವು ಹಿಂದಿನ ಕಾನೂನಿನಲ್ಲಿಯೂ ಮಾಡಿಕೊಂಡಿದ್ದೇವೆ.

Sri D. B. Chandre Gowda : No. I am telling the analogy. ಪಾಪ್ಯುಲೇಶನ್ ಸೆನ್‌ಸಸ್ ಬರೇ ಮಂಡಲ ಪಂಚಾಯತಿಗೆ ಮತ್ತು ಜಿಲ್ಲಾಪರಿಷತ್ತಿಗೆ ಅಷ್ಟಕ್ಕೇ ಸೀಮೀತವಾಗಿಲ್ಲ. ವಿಧಾನಸಭೆ, ಲೋಕಸಭೆಗೂ ಅದು ಅನ್ವಯವಾಗುತ್ತದೆ. ವಿಧಾನ ಸಭೆ, ಲೋಕಸಭೆಗೆ ಅನ್ವಯವಾಗದೆ ಐದು ವರ್ಷಕ್ಕೆ ಒಂದು ಸಾರಿ ಚುನಾವಣೆ ಹೇಗಾಗುತ್ತದೆ. You can also conduct the election. According to me, this is not the reason. ಇದು ಒಂದು. ಮತ್ತೊಂದು 2500 ಜನಸಂಖ್ಯೆಗೆ ನೀವು ಇಳಿಸಿ, 2500 ಪಂಚಾಯತಿಗಳನ್ನು ಜಾಸ್ತಿ ಮಾಡುತ್ತಿದ್ದೀರಿ, ಆದರೆ ಸದಸ್ಯರ ಸಂಖ್ಯೆ ಹೆಚ್ಚಾಗುವುದಿಲ್ಲ, ಅಧ್ಯಕ್ಷರು, ಉಪಾಧ್ಯಕ್ಷರು ಮಂಡಲಗಳ ಸಂಖ್ಯೆ ಹೆಚ್ಚಾಗುತ್ತವೆ. ಆಡಳಿತಾತ್ಮಕವಾದಂತಹ ವೆಚ್ಚ ಹೆಚ್ಚಾಗುತ್ತದೆ. ಅದಕ್ಕೆ ವಿವರಣೆಯನ್ನು ಕೊಟ್ಟಿದ್ದೇನೆ.

ಶ್ರೀ ಎಂ. ವಿ. ವೆಂಕಟಪ್ಪ : ಮೊದಲು 54 ಸಾವಿರ ಜನ ಸದಸ್ಯರು ಇದ್ದರು. ಈಗ 60 ಸಾವಿರ ಜನ ಆಗುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : 1991ರ ಸೆನ್‌ಸಸ್ ಮೇಲೆ. ಜನಸಂಖ್ಯೆ ಜಾಸ್ತಿಯಾಗುವುದರ ಮೇಲೆ.

ಶ್ರೀ ಎಂ. ವಿ. ವೆಂಕಟಪ್ಪ : ಸದಸ್ಯರ ಸಂಖ್ಯೆ ಜಾಸ್ತಿ ಆಗುತ್ತದೆ.

3.45 ಪಿ.ಎಂ.

Sri D. B. Chandre Gowda : Please understand. ವೆಂಕಟಪ್ಪನವರೆ ದಾಮಾಶ, ನಮ್ಮ ಲೆಕ್ಕ ಹಾಗಲ್ಲ. ದಾಮಾಶ ಸದಸ್ಯರ ಸಂಖ್ಯೆ ಜಾಸ್ತಿಯಾಗುತ್ತದೆ. ಆದರೆ ಹಿಂದೆ ಇದ್ದಂಥ ಮಂಡಲದಲ್ಲಿ ವೆಷ್ಟು ಜನ ಸಂಖ್ಯೆ ಇತ್ತು, ನಮ್ಮ ಮಲೆನಾಡಿನಲ್ಲಿ ಈಗಲೂ 12 ಸದಸ್ಯರು ಇರುವ ಒಂದು ಮಂಡಲ ಇದೆ. 6 ಅಥವಾ 7ಕ್ಕೆ ಬರುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ : ಈಗ ಮಿನಿಮಮ್ 12, ಮ್ಯಾಗ್ಸಿಮಮ್ 17 ಆಗುತ್ತದೆ. ನೀವು ಲೆಕ್ಕ ಹಾಕಿ.

ಶ್ರೀ ಡಿ. ಬಿ. ಚಂದ್ರೇಗೌಡ : ಅದಕ್ಕೆ ಏನು ಮಾಡಿದಿರಿ ನೀವು ಅಂದರೆ ಸಂಖ್ಯೆ 7-8ಕ್ಕೆ ಇಳಿಯುತ್ತದೆ ಎಂದು ವರದಿ ಸಿಕ್ಕಿದ ಕೂಡಲೆ ಮಿನಿಮಮ್ 10+1 ಎಂದಿರಿ. Am I right? ಏಕೆ ಹೇಳಬೇಕು. ಮಿನಿಮಮ್ 10+1 ಅಂದ ಕೂಡಲೆ ಹೊರಗೆ ಬಂದಿರಿ. Please read this Act. I have made some study about this. ಈಗ ಏನಾಯಿತು ಎಂದರೆ 7 ಅಥವಾ 8 ಜನಕ್ಕೆ ಒಂದು ಮಂಡಲ. ಇದರಿಂದ ತಪ್ಪಿಸಿಕೊಳ್ಳಲಿಕ್ಕೆ ಶಾಸನದಲ್ಲಿ ಮಿನಿಮಮ್ 10+1 - 11 ಎಂದಿರಿ. ಏಕೆ ಈ ಹಿಂಸೆ. What is wrong in the present law? That's all my submission to this House. ಆ ಕಾರಣ ಅಗತ್ಯ ಇದ್ದ ಕಡೆ, ಎಲ್ಲಿ ಅಗತ್ಯ ಇದೆಯೋ ಅಲ್ಲಿ ಬದಲಾವಣೆ ಮಾಡಿ. geographical contiguity ದೃಷ್ಟಿಯಿಂದ ಅದನ್ನು ಮಾಡಬೇಕಾಗಬಹುದು. ಮಂಡಲ ಕಛೇರಿ ಇರತಕ್ಕಂತ ಸ್ಥಳ ಸರಿ ಇಲ್ಲ ಎಂದು ಬದಲಾವಣೆ ಮಾಡಬಹುದು. ಇದಕ್ಕೇನೂ ವಿರೋಧ ಇಲ್ಲ. ಆದರೆ ಹೊಸ ಶಾಸನ ಏನು ಮಾಡುತ್ತಾ ಇದ್ದೀರಿ, ಈ ಬಗ್ಗೆ ನಾನು ಹೇಳಿದ್ದು ಇದು ಒಂದು ವಿಕೃತ ವ್ಯವಸ್ಥೆ ಎಂದು.

ಶ್ರೀ ಕೆ. ಹೆಚ್. ಏಕಾಂತಯ್ಯ : ಈಗ Constitution of Mandal Panchayat ಬಗ್ಗೆ ಮಾನ್ಯ ಘೋರ್ಪಡೆ ಏನು ಹೇಳಿದರು ಅದಕ್ಕೆ ಹೇಳುತ್ತಿದ್ದೇನೆ. Provided further that, only relevant figures of the Census taken after the year 2000, have been published, it is not necessary to redetermine the total number of seats in the Mandal. ಆದುದರಿಂದ 81ನೇ ಇಸವಿ, 91ನೇ ಇಸವಿ ಜನ ಸಂಖ್ಯೆ ಆಧಾರದ ಮೇಲೆ ಹೊಸ ಸದಸ್ಯರ ಸಂಖ್ಯೆಯನ್ನು ನಿರ್ಧಾರ ಮಾಡಬೇಕೆಂದು ಹೇಳುವುದು ಕಾನೂನಿನಲ್ಲಿ ಇಲ್ಲ. ಕಾನೂನು ಇಲ್ಲದೇ ಇರುವುದರಿಂದ ಅದು ಕಾನೂನಿಗೆ ವಿರುದ್ಧ ಎಂದು ಹೇಳಿದರು; ಅದು ಸರಿಯಲ್ಲ. ಇದನ್ನು ಯಾರಿಗೆ ಹೇಳೋಣ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಒಂದು ಕ್ಲಾರಿಫಿಕೇಷನ್. ಅವರು ಈಗಿರುವಂಥ ಕಾನೂನಿನ ಆಧಾರದ ಮೇಲೆ ಚುನಾವಣೆ ಮಾಡಿದ್ದರೆ ಅದು ಕಾನೂನಿಗೆ ವಿರುದ್ಧ ಆಗುತ್ತಿತ್ತು ಎನ್ನುವಂತ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ತಮ್ಮ ಪಕ್ಷದ ಕೇಂದ್ರ ಸರ್ಕಾರ ಒಂದು ತಿದ್ದುಪಡಿ ಮಾಡಿ ಕಳುಹಿಸಿರುವುದನ್ನು ತಮ್ಮ ಗಮನಕ್ಕೆ ತರಲು ಓದುತ್ತೇನೆ;-

Not withstanding anything in the past, this Constitution Amendment, any provision of the law relating to Panchayats in Power in the State, immediately before the commencement of the Constitution Amendment of 17-2-1991, Which is inconsistent with the, even if it is

inconsistent with the provisions of the past, shall continue to be inforce until amended of repeated by the competent Legislature. So, what prevented to conduct the election under the existing law?

Sri M.Y. Ghorpade : Anything inconsistent, supposing we pass a law which is inconsistent with the Central Legislation, it has to be only for a period of six months. Then, you would have to have another election. We will have to have multiple election. Therefore, once the Constitutional Amendment is there, it is not at all feasible, practical to have a series of elections, one under the old law and one under the new law. We are not permitted to have under the old law and continue merrily with it. That is not the postion. Moreover, it is a matter for you to consider apart from this consideration, the unwisdom of having several elections when the Constitutional Amendment has clearly stated that elections should be taking hold the nearest census. I don't think we could have hold elections under the 1971 census. Alright if we adopt census, what will happen? What will happen is that we will be forced to have elections under the 1991 census. This is our view both from the practical point of view avoiding multiple elections and also from considering interpretation of that clause which says that we should adopt the nearest census to an election. I think on both those grounds holding elections under the old law would have to be ruled out.

Sri Y. K. Ramaiah : Sir, with great respect to the minister I disagree with him. ಯಾರು ಏನೋ ಹೇಳಿದ್ದನ್ನು ನಾನು ಓದಲಿಲ್ಲ. ಈ ಸಂವಿಧಾನದಲ್ಲಿ ತಿದ್ದುಪಡಿ ಈಗ ಇರತಕ್ಕ ಕಾನೂನನ್ನು ಅನುಸರಿಸಿ ಇರುವಂಥ ಪಂಚಾಯತ್ ರಾಜ್ ವ್ಯವಸ್ಥೆ ಯಾವುದು ಇದೆ, ಆ ವ್ಯವಸ್ಥೆಯ ಆಧಾರದ ಮೇಲೆ ಚುನಾವಣೆ ನಡೆಸಬಹುದು, ಅದಕ್ಕೆ ಏನೂ ಅಡ್ಡಿ ಇಲ್ಲ ಎಂದು ಈ ಸಂವಿಧಾನ ತಿದ್ದುಪಡಿಯಲ್ಲಿದೆ. ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ಈ ರಾಜ್ಯದ ಜನತೆಯ ಕಣ್ಣಿಗೆ ಮಣ್ಣು ಎರಚಲಿಕ್ಕೆ ನಮಗೆ ಇದು ಅಡ್ಡಿ ಬಂತು ಎಂಬ ನೆಪವನ್ನು ಹೇಳಬಹುದೇ ಹೊರತು ಕಾನೂನಿನಲ್ಲಿ ಅಡ್ಡಿ ಇರಲಿಲ್ಲ, ಇರುವಂಥ ಕಾನೂನಿನಲ್ಲಿ ಎಲೆಕ್ಷನ್ ಮಾಡುವುದಕ್ಕೆ ಅಡ್ಡಿ ಏನೂ ಇರಲಿಲ್ಲ. Under the Constitutional Amendment it is clearly held that the State Legislature can have the elections under the existing laws.

Sri M. Y. Ghorpade : Another reason is that we are forced to have elections under Article 311. So, even assuming that we could hold elections for zilla and mandal, which I don't think we can, even then we would have to hold elections. Of course, in our view, because of the reasons I have stated, it is not possible to hold, that is our view. It is not possible to hold the elections as per 1971 census when 1991 census is in our hands. That is our stand.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈಗ ರಾಜ್ಯಾದ್ಯಂತ ಮಂಡಲಗಳಲ್ಲಿ ಆಡಳಿತ ಅಧಿಕಾರಿಗಳು ಇದ್ದಾರೆ. ಹೊಸ ಸೆಕ್ಷನ್ 47ರಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕ ಅಧಿಕಾರವನ್ನು ಡಿ. ಸಿ. ಗೆ ಕೊಟ್ಟಿದ್ದಾರೆ. ಈ ವಿಚಾರ ಜಂಟೀ ಸಲಹಾ ಸಮಿತಿಯಲ್ಲಿ ಕೂಡ ಚರ್ಚೆಗೆ ಬಂದಿತ್ತು. ಜಂಟಿ ಸಲಹಾ ಸಮಿತಿಯವರು ಒಂದು ಮಾತನ್ನು ಹೇಳಿದ್ದಾರೆ. It is at page 5.

"Committee are of the opinion that the proviso to the Clause, namely giving power to the commissioner to extend the term of the office of the elction body is not fair and desire that as soon as the term of the members expire, action should be taken to conduct elections immediately according to proviso to the said clause"

ತಾವು 47ರಲ್ಲಿ ಹೇಳಿದ್ದೀರಿ. ಗ್ರಾಮಪಂಚಾಯತ್ ಅಧ್ಯಕ್ಷ ಹುದ್ದೆ ಖಾಲಿ ಇರುವ ಅವಧಿಯಲ್ಲಿ "ಅಧ್ಯಕ್ಷ ಮತ್ತು ಉಪಾಧ್ಯಕ್ಷ" ಇಲ್ಲದೇ ಇದ್ದಾಗ ಜಿಲ್ಲಾಧಿಕಾರಿ ನೇಮಕ ಮಾಡುವಂಥ ಒಬ್ಬ ಅಧಿಕಾರಿ ಅಧ್ಯಕ್ಷ ಕ್ರಮವಾಗಿ ಚುನಾಯಿತ ಆಗುವವರೆಗೆ ಅಧ್ಯಕ್ಷನ ಅಧಿಕಾರವನ್ನು ಚಲಾಯಿಸತಕ್ಕದ್ದು ಮತ್ತು ಅವನ ಕರ್ತವ್ಯವನ್ನು ನಿರ್ವಹಿಸತಕ್ಕದ್ದು ಎಂದು ಇದೆ. ಇದು ಬಹಳ for reaching consequences ಆಗುತ್ತದೆ. ಅದೇ ಜಾಯಿಂಟ್ ಸೆಲೆಕ್ಟ್ ಕಮಿಟಿ ರೆಕಮೆಂಡೇಷನ್ಸ್ ಏನು ಇದೆ ಎಂದರೆ

"Committe are of the opinion that if the office of the Pradhan and Upa Pradhan are vacant, the Dy. Commissioner shall appoint a person not below the rank of the Assistant Commissioner to perform the duties of the Pradhan until new Pradhan is duly elected"

ಹಿಂದೆ ಪ್ರಧಾನ ಮತ್ತು ಉಪಪ್ರಧಾನ ಇಲ್ಲದೇ ಇರತಕ್ಕ ಸಮಯದಲ್ಲಿ ಆ ಒಂದು ಸಮಿತಿಯ ಸಭೆಗೆ ಅಲ್ಲಿರತಕ್ಕ ಸದಸ್ಯರೇ ಆ ದಿನದ ಸಭೆಯನ್ನು ನಡೆಸಲು ಅಧ್ಯಕ್ಷರನ್ನು ಆಯ್ಕೆ ಮಾಡತಕ್ಕದ್ದು ಎಂದು ಇತ್ತು. ಅದರಿಂದ ಅಪರಾಧ ಏನೂ ಆಗುವುದಿಲ್ಲ. ನಮ್ಮ ಕೃಷ್ಣಪ್ಪನವರ ಕ್ಷೇತ್ರದಲ್ಲಿ ಇರಬಹುದು ನಾನು ಅಲ್ಲಿಗೆ ಹೋಗಿದ್ದೇನೆ. ಅಲ್ಲಿ ಪ್ರಧಾನ ಮತ್ತು ಉಪ ಪ್ರಧಾನ ಇಬ್ಬರೂ ಕೊಲೆಯಾಗಿಬಿಟ್ಟರು.

ಶ್ರೀ ಎ. ಕೃಷ್ಣಪ್ಪ : ಹೊಸಕೋಟೆ ತಾಲ್ಲೂಕಿನಲ್ಲಿ ಅದು ಆಗಿರುವುದು.

ಶ್ರೀ ಡಿ. ಬಿ. ಚಂದ್ರೇಗೌಡ : ಅಲ್ಲಿ ಪ್ರಧಾನ ಮತ್ತು ಉಪಪ್ರಧಾನ ಇಬ್ಬರೂ ಕೊಲೆಯಾಗಿಬಿಟ್ಟರು. ಆಗ ಆಡಳಿತಾಧಿಕಾರಿ ನೇಮಕ ಆಯಿತು. ಆದರೆ ಚುನಾಯಿತ ಸದಸ್ಯರು ಇವರು ಯಾರು ? ಏತಕ್ಕೆ ಚುನಾವಣೆ ಬೇಕಾಗಿತ್ತು? ಏತಕ್ಕೆ ವ್ಯವಸ್ಥೆ ಬೇಕಾಗಿತ್ತು? ಆಡಳಿತಾಧಿಕಾರಿಯೇ ಸರ್ವಾಧಿಕಾರಿ. ಈ ಸ್ಥಿತಿ ತಪ್ಪಬೇಕಾದರೆ, ಅದಕ್ಕಾಗಿಯೆ ಜಿಲ್ಲಾಧಿಕಾರಿಗೆ ನೀವು ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕಂಥ ಅಧಿಕಾರವನ್ನು ಕೊಡುವಾಗ ನಮಗೆ ಸ್ಪಷ್ಟವಾಗಿ ಹೇಳಿ ಆಡಳಿತಾಧಿಕಾರಿ ಯಾರು ಎಂದು. ಹಿಂದಿನ ಶಾಸನದಲ್ಲಿ ಅಸಿಸ್ಟೆಂಟ್ ಕಮಿಷನರ್ ಆಡಳಿತಾಧಿಕಾರಿ ಎಂದು ಹೇಳಿತ್ತು. ಅದನ್ನು ಬದಲಾವಣೆ ಮಾಡಿದರು. ಈಗ ಅನುಕೂಲ ಸಿಂಧು ವ್ಯವಸ್ಥೆ. ಅರಣ್ಯ ಮತ್ತು ಪೋಲೀಸ್ ಇಲಾಖೆಗಳ ಅಧಿಕಾರಿಗಳನ್ನು ಬಿಟ್ಟು ಉಳಿದವರೆಲ್ಲ ಆಡಳಿತಾಧಿಕಾರಿಗಳು. ಯಾರು

ಆಡಳಿತಾಧಿಕಾರಿಯೋ? ಯಾರು ಕೆಲಸ ಮಾಡುತ್ತಾರೋ? ಅದರಿಂದ ಈಗ ನೀವು ಎರಡೂವರೆ ಸಾವಿರ ಆಡಳಿತಾಧಿಕಾರಿಗಳ ಸ್ಥಿತಿಗತಿಗಳನ್ನು ನೋಡಿದ ಮೇಲೆ ಮುಂದೆ ಐದು ಸಾವಿರ ಮಂಡಲಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವಾಗ ಬದಲಿ ವ್ಯವಸ್ಥೆಗೆ ಮಸೂದೆಯಲ್ಲಿ ನಮೂದಾಗಿರಬೇಕು. who shold be the administrator ಎಂದು. ಇಲ್ಲಿ ನೀವು ಬ್ಲ್ಯಾಂಕ್ ಬಿಟ್ಟಿದ್ದೀರಿ. ಜಿಲ್ಲಾಧಿಕಾರಿಗಳು ಯಾರನ್ನು ಬೇಕಾದರೂ ಹಾಕಬಹುದು. ಸ್ಕೂಲ್ ಮೇಸ್ಟರನ್ನು ಹಾಕಬಹುದು, ಶಾಲೆಯ ಜವಾನನ್ನೂ ಹಾಕಬಹುದು. There should be some guidelines to the Dy. Commissioner as to how do you go about. Who is the administrator. ದಯಮಾಡಿ ಇದನ್ನು ಸ್ಪಷ್ಟಪಡಿಸತಕ್ಕಂತ ಪ್ರಯತ್ನವನ್ನು ತಾವು ಮಾಡಬೇಕು. ಮತ್ತೆ ಹಿಂದಿನ ಮಸೂದೆಯೊಳಗೆ ಇಂಥ ಪ್ರಸಂಗ ಬಂದಾಗ ಜಿಲ್ಲಾ ಪರಿಷತ್ತಿಗೆ ಅಧಿಕಾರ ಇತ್ತು. Under Article 272.

"Zilla Parishad may by notification delegate to the Secretary or office bearer any of the powers confirmed by or under this Act on the Zilla Parishad".

Article 269 :" Zilla Parishad may in respect of the Mandala Panchayat exercise the following power"

ಲೆವಿಯಿಂಗ್ ಟ್ಯಾಕ್ಸಸ್ ಇರಬಹುದು, ಕಾಲ್‌ಫಾರ್ ದಿ ಮೀಟಿಂಗ್ಸ್ ಇರಬಹುದು, ಕಾಲ್‌ಫಾರ್ ದಿ ಪ್ರೊಸೀಡಿಂಗ್ಸ್ ಇರಬಹುದು, powers to suspend an execution ಇರಬಹುದು. ಎಲ್ಲಕ್ಕಿಂತ ಹೆಚ್ಚಾಗಿ 268ರಲ್ಲಿ ಜಿಲ್ಲಾ ಪರಿಷತ್ತಿಗೆ ಅಧಿಕಾರ ಇತ್ತು.............

"Zilla Parishad may by notification delegate to the Secretary or other office bearer any of the powers confirmed under this act."

ಈಗ ನೀವು ಶಾಸನಬದ್ಧವಾಗಿ ಜಿಲ್ಲಾಪರಿಷತ್ತಿನ ಅಧಿಕಾರವನ್ನು ಕಿತ್ತು ಜಿಲ್ಲಾಧಿಕಾರಿಗಳಿಗೇ ಕೊಡುತ್ತಿದ್ದೀರಿ. This is where your experiment of decentralisation is total, according to me, ಜನರ ಹತ್ತಿರಕ್ಕೆ ಅಧಿಕಾರ ಹೋಗುವ ಬದಲು ಅಧಿಕಾರಿಗಳಿಗೆ ಅಧಿಕಾರವನ್ನು ಕೊಡುತ್ತಿದ್ದೀರಿ. ಇದನ್ನು ನಾವು ವಿಕೇಂದ್ರೀಕರಣ ಎನ್ನುವುದರ ಬದಲು ವಿಕೃತವಾದಂಥ ವ್ಯವಸ್ಥೆ ಎಂದು ನಾನು ಹೇಳುತ್ತೇನೆ; ಪ್ರಾರಂಭದಲ್ಲಿ ನಾನು ವಿಕೃತ ಎನ್ನುವ ಪದವನ್ನು ಬಳಸಿದ್ದು ಇದೇ ಕಾರಣಕ್ಕಾಗಿ. ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ ಹಿಂದೆ ಇದ್ದಹಾಗೆ ಜಿಲ್ಲಾ ಪರಿಷತ್ತಿಗೇ ಅಧಿಕಾರವನ್ನು ಕೊಡಿ. ಪರಿಷತ್ತು' ಡೆಪ್ಯುಟಿ ಕಮಿಷನರ್ ಮೂಲಕ ಯಾರನ್ನಾದರೂ ಆಯ್ಕೆ ಮಾಡಲಿ ಆಮೇಲೆ ಸೆಕ್ಷನ್ 44(2) ಓಲ್ಡ್ ಆ್ಯಕ್ಟ್, ಇಲ್ಲಿ ಬಹಳ ಮುಖ್ಯವಾದಂಥ ಪ್ರಶ್ನೆ ಇದೆ. ಒಟ್ಟು ಈ ವ್ಯವಸ್ಥೆಯ ಶಾಶ್ವತತೆಯನ್ನು ಇಲ್ಲಿ ಒತ್ತಿ ಹೇಳಿದ್ದಾರೆ, how the decentralised power was permanent in its absence.

"After the expiry of the term of the office of Pradhan, even after the expiry of that, then Pradhan shall continue to carry on the current duties of the office until such time as the new Pradhan shall have been elected and shall have taken over the charge"

ಈಗ ಅಧ್ಯಕ್ಷ ಸ್ಥಾನ ಇದೆ. Speaker of the Legislative Assembly : even if the Assembly is dissolved, he will continue to be the speaker till the next Election is conducted. ಪಂಜಾಬಿನಲ್ಲಿ ಮೂರು ವರ್ಷ , ಐದು ವರ್ಷ ಅಧ್ಯಕ್ಷರು ಇದ್ದರು. ಏಕೆ ಇದು ಎಂದರೆ, The Office of the Speaker represents the Elective or the democratic character of the system. ಶಾಸನ ಸಭೆ ಇಲ್ಲದೇ ಇದ್ದರೂ ಶಾಸನ ಸಭೆ ಅಧ್ಯಕ್ಷರು ಮುಂದಿನ ಅಧ್ಯಕ್ಷರು ಬರುವವರೆಗೆ ಇರುತ್ತಾರೆ. ಅದು ನಿಜವಾದಂತಹ the basic essence of democracy. The same thing has been incorporated in the old Act. ಪ್ರಧಾನ ಅವಧಿ ಮುಗಿದರೂ ಕೂಡ ಅವನ ಜವಾಬ್ದಾರಿಯಲ್ಲೇ ಆಡಳಿತಾಧಿಕಾರಿ ಕೆಲಸ ನಿರ್ವಹಣೆ ಮಾಡತಕ್ಕಂಥ ಒಂದು ವ್ಯವಸ್ಥೆ ಇತ್ತು. This is taken away totally. Should we call it as a democratic decentralisation? ಆದ್ದರಿಂದ ಈ ಒಂದು ಹಳೆಯ ವ್ಯವಸ್ಥೆ ಬಹಳ ಜನರಿಗೆ ಹತ್ತಿರವಾಗಿದ್ದಂತಹ ವ್ಯವಸ್ಥೆ ಆಗಿತ್ತು. ಇದನ್ನು ತೆಗೆದು ಈಗ ಆಡಳಿತಾಧಿಕಾರಿಗಳ ಕೈಯಲ್ಲಿ ಕೊಟ್ಟಿದ್ದೀರಿ. ಈ ಆಡಳಿತಾಧಿಕಾರಿ ಎಷ್ಟು ದಿವಸ ಇರಬೇಕು? ಎಷ್ಟು ದಿವಸದಲ್ಲಿ ಚುನಾವಣೆ ಮಾಡಬೇಕು? ಇದನ್ನು ನಿಖರವಾಗಿ ಹೇಳುವುದಿಲ್ಲ. ಅಧ್ಯಕ್ಷರು ಇಲ್ಲ, ಉಪಾಧ್ಯಕ್ಷರು ಇಲ್ಲ ಆಡಳಿತಾಧಿಕಾರಿ ನೇಮಕ. ಈ ಆಡಳಿತಾಧಿಕಾರಿ ಮಂಡಲದ ಆಡಳಿತವನ್ನು ಎಷ್ಟು ದಿವಸ ನಡೆಸಬೇಕು ? There should be a specific time bound programme for the Deputy Commissioners to conduct the Election of the President or the Vice-President. ನಿಮ್ಮ ಹೊಸ ಶಾಸನದಲ್ಲಿ ಒಂದು ತಿಂಗಳೊಳಗೆ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಚುನಾವಣೆ ಮಾಡತಕ್ಕದ್ದು ಎಂಬ ಆದೇಶ ಇಲ್ಲ. ಎರಡನೆಯದು, ಆಡಳಿತಾಧಿಕಾರಿಯ ನೇಮಕದ ಅಧಿಕಾರ ಮೊದಲು ಜಿಲ್ಲಾಧಿಕಾರಿಗಳಿಗೆ ಇದ್ದ ಹಾಗೆ, ಜಿಲ್ಲಾ ಪರಿಷತ್ತಿಗೂ ವಿಶೇಷ ಸಂದರ್ಭದಲ್ಲಿತ್ತು. ಆ ಅಧಿಕಾರವನ್ನು ಕಿತ್ತುಕೊಂಡಿದ್ದೀರಿ. ಒಂದು ವೇಳೆ ನೀವು ಚುನಾವಣೆ ಮಾಡಲಿಲ್ಲ ಎಂದರೆ ಆಡಳಿತಾಧಿಕಾರಿ ಐದು ವರ್ಷದ ತನಕ ಮುಂದುವರಿಯುವುದೇ? There should be some sort of directives in the Act? ಈಗ ನೀವು ಸೆಕ್ಷನ್ 46(1)ರಲ್ಲಿರುವಂತೆ ಇವನ ಅಧಿಕಾರ ಅಲ್ಲಿಗೆ ನಿಂತು ಹೋಗುವುದು, ಸದಸ್ಯತ್ವ ಅಲ್ಲಿಗೆ ಮುಗಿಯಿತು. ಸಾಧಾರಣ ಕಳೆದ 4 ತಿಂಗಳಿಂದ ಸದಸ್ಯತ್ವವೂ ಇಲ್ಲ; ಮಂಡಲ ಮತ್ತು ಜಿಲ್ಲಾ ಪರಿಷತ್ತಿನ ವ್ಯವಸ್ಥೆಯೂ ಇಲ್ಲ; ಅದು ಮುಗಿದು ಹೋಯಿತು. ಅಲ್ಲಿಗೆ ನಿಂತು ಹೋಯಿತು. ಮುಂದೆ ರಾಜ್ಯಾಂಗದ 73ನೇ ಅಮೆಂಡ್‌ಮೆಂಟ್‌ನಲ್ಲಿ ಡೈರೆಕ್ಟೀವ್ ಇರುವುದರಿಂದ, ನೀವು ಈ ವ್ಯವಸ್ಥೆಯನ್ನು ಶಾಶ್ವತಗೊಳಿಸುವುದಕ್ಕಾಗಿ ಈಗಲೂ ಆಲೋಚನೆ ಮಾಡುವುದಕ್ಕೆ ಅವಕಾಶ ಇದೆ. ಮಂಡಲಕ್ಕೆ ಸಂಬಂಧಪಟ್ಟ ಹಾಗೆ ಇನ್ನೊಂದು ಮಾತು. ಹಿಂದಿನ ಮಸೂದೆಯಲ್ಲಿ ಅಧ್ಯಕ್ಷರು ಅಥವಾ ಮಂಡಲದ ಪ್ರಧಾನ ಹಾಗೂ ಉಪ ಪ್ರಧಾನರಿಗೆ 300 ರೂಪಾಯಿ ಮತ್ತು 150 ರೂಪಾಯಿ ವೇತನವನ್ನು ನಿಗದಿ ಮಾಡಲಾಗಿತ್ತು. ಈ ಸಾರಿ ನಿಮ್ಮ ಶಾಸನದಲ್ಲಿ ಮುಂದೆ ನಿಗದಿಪಡಿಸಿದಂತೆ ಎಂದು ಇದೆ. ಈ ಆಕ್ಟ್ ಪಾಸ್ ಆಗಿ. ಶಾಸನವಾಗಿ ಅದಕ್ಕೆ ಒಪ್ಪಿಗೆ ಬಂದು ಆಮೇಲೆ ನೀವು ರೂಲ್ಸನ್ನು ಫ್ರೇಂ ಮಾಡಿ ಆ ರೂಲ್ಸ್‌ನೊಳಗೆ ತರತಕ್ಕ ಪ್ರಯತ್ನ ಮಾಡಿದರೂ ಸಹ it should be in the bill, it should be in the Act itself. ನೀವು ಈ ಶಾಸನದಲ್ಲಿ ಹೇಳಿ. ಮಂಡಲದ ಅಧ್ಯಕ್ಷ ಎಂದು ಹೇಳುತ್ತೀರಲಿಲ್ಲ, ಅವನಿಗೆ 500 ರೂಪಾಯಿ ಕೊಡುತ್ತೇವೆಂದು ಹೇಳಿ, ಉಪಾಧ್ಯಕ್ಷನಿಗೆ 250 ರೂಪಾಯಿ ಎಂದು ಶಾಶ್ವತವಾದ ವ್ಯವಸ್ಥೆ ಮಾಡಿ. ಅದರ ಬದಲಾವಣೆಗೆ ಆಯಾಯ ಕಾಲಕ್ಕೆ ಇರತಕ್ಕ ಪರಿಸ್ಥಿತಿಗೆ ಅನುಗುಣವಾಗಿ ಮಾಡಿ.

ಶ್ರೀ ಎಂ. ವೈ. ಘೋರ್ಪಡೆ : ಅದನ್ನು ಜಾಸ್ತಿ ಮಾಡುವಾಗ ಪುನಃ ಅಮೆಂಡ್ ಮೆಂಟ್ ಮಾಡಬೇಕಾಗುತ್ತದೆ. ಆದಕಾರಣ ಕಾಲಕಾಲಕ್ಕೆ ಜಾಸ್ತಿ ಮಾಡಲೇಬೇಕಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ಜಾಸ್ತಿ ಮಾಡುವುದಾದರೆ ಅಮೆಂಡ್‌ಮೆಂಟ್ ಮಾಡಬೇಕು. ಈಗ ಮಾಡುವುದೇ ಇಲ್ಲ ಎಂದು ಆದರೆ ಅದಕ್ಕೂ ಅಮುಂಡ್‌ಮೆಂಟ್ ಆಗಬೇಕಲ್ಲ. ಆದ್ದರಿಂದ ಇಷ್ಟು ಎಂದು ನಿಗದಿಪಡಿಸಿ ಬಿಡಿ.

Sri M.Y. Ghorpade : In democracy you have to assume that fairly reasonable people are ruling. ಇಲ್ಲವೇ ಹೋದರೆ, ಅಸಂಪ್‌ಷನ್ ಮಾಡದೇ ಹೋದರೆ ಯಾವ ಕಾನೂನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ತಮಗೆ ಹೇಳುತ್ತೇನೆ. ನಮ್ಮ ಸಂಬಳ ಮತ್ತು ಸಾರಿಗೆಯನ್ನು ಹೆಚ್ಚು ಕಡಿಮೆ ಪ್ರತಿ ವರ್ಷ ಏರಿಸಿಕೊಳ್ಳುತ್ತಿದ್ದೇವೆ. ಆದರೆ ಮೂಲತಃ ನಮಗೆ ಎಷ್ಟು ಬರುತ್ತದೆ ಎನ್ನುವುದು ಗೊತ್ತಿದೆ. ಆದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಏಕೆ ಇರಬಾರದು? ಆಮೇಲೆ ಏರಿಸುವುದೋ ಇಳಿಸುವುದೋ ಮಾಡೋಣ. ರೂಲ್‌ನಲ್ಲಿ ಬೇಕಾದರೆ ಅವರಿಗೆ ಪವರ್ ಕೊಡೋಣ. ಆದರೆ ಬೇಸಿಕ್ ಆಗಿ ಈ ಶಾಸನದಲ್ಲಿ ಇರಬೇಕು ಎನ್ನತಕ್ಕದ್ದು ನನ್ನ ಭಾವನೆ. Now, I will come to the Administration. ಸೆಕ್ಷನ್ 111ಕ್ಕೆ ಬಂದರೆ ನೀವು ಒಟ್ಟು ಈ ಮಸೂದೆಯೊಳಗೆ ನಮಗೆ 111 ಕೊಟ್ಟಿರುವುದು ಇಲ್ಲೆ; ಹಳೆಯ ಸೆಕ್ಷನ್ 121: "Every Mandal Panchayat shall have a whole time Secretary who shall subject to such rules as may be prescribed to be appointed by the Zilla Parishats in consultation with the Mandal Panchayat". Please make a note of this last sentence. " to be appointed by the Zilla Parishats in consultation with the Mandal Panchayat". Sub-section(2) reads: "Secretary shall be the officer of the Zilla Parishat and shall draw his salary and allowances from the Zilla Parishat funds. The Secretary shall perform the duties and exercise all powers super -imposed or conferred upon him by or under the Act or any rules or bye-laws made there under". Now it is section 111, old Act it is 121. ಇಲ್ಲಿ ಏನು ಮಾಡಿದ್ದೀರಿ, ಎಂದರೆ ಪ್ರತಿಯೊಂದು ಗ್ರಾಮ ಪಂಚಾಯಿತಿಯೂ ಒಬ್ಬ ಪೂರ್ಣಕಾಲಿಕ ಕಾರ್ಯದರ್ಶಿಯನ್ನು ಹೊಂದಿರತಕ್ಕದ್ದು, ಅವರು ಸರ್ಕಾರದ ಅಧಿಕಾರಿ ಎಂದು ಇದೆ. ಅಲ್ಲಿ ಜಿಲ್ಲಾ ಪರಿಷತ್ತಿನ ಅಧಿಕಾರಿ, ಇಲ್ಲಿ ಸರ್ಕಾರದ ಅಧಿಕಾರಿ! Do you call this as decentralisation? ಮಂಡಲದ ಜುಟ್ಟು, ಜನಿವಾರಗಳೆಲ್ಲಾ ನಿಮ್ಮ ಕೈಯಲ್ಲಿರಬೇಕು, ಕಾರ್ಯದರ್ಶಿಯವರ ನೇಮಕಾತಿ ನೀವು ಮಾಡುತ್ತೀರಿ. ಜಿಲ್ಲಾ ಪರಿಷತ್ತಿನ ಅಧಿಕಾರಿ ಯಾವ ಜವಾಬ್ದಾರಿಯನ್ನೂ ಕೇಳುವಂತಿಲ್ಲ. ಈ ಅಧಿಕಾರಿಗೆ ಜಿಲ್ಲಾ ಪರಿಷತ್‌ನ ನಿಧಿಯಿಂದ ಸಂಬಳ. ಆದರೆ, ಅಧಿಕಾರಿ ಸರ್ಕಾರಕ್ಕೆ ಸೇರಿದವರು. ಯಾವ ಅಧಿಕಾರಿಯನ್ನು ಯಾರು ನೇಮಿಸುತ್ತಾರೋ he shall be the suspending authority, he shall be the dismissing authority. ಸಸ್ಪೆಂಡ್ ಅಲ್ಲ, ಆತನಿಗೆ ಕಸ ಗುಡಿಸು ಎಂದು ಹೇಳುವುದಕ್ಕಾಗುವುದಿಲ್ಲ, ಲೆಕ್ಕಬರಿ ಎಂದು ಹೇಳುವುದಕ್ಕಾಗುವುದಿಲ್ಲ. ಇವರನ್ನು ವರ್ಗ ಮಾಡಿ ಎಂದು ಹೇಳುವುದಕ್ಕೆ ಮಂತ್ರಿಗಳ ಹತ್ತಿರ ತೆಗೆದುಕೊಂಡು ಬರಬೇಕು. ಜಿಲ್ಲಾ ಪರಿಷತ್ ಅಧಿಕಾರಿ ಆಗಿದ್ದಂಥವನು ಈಗ ಸರ್ಕಾರದ ಅಧಿಕಾರಿ. ' ಈ ಸರ್ಕಾರಿ ಅಧಿಕಾರಿ ಈ ಅಧಿನಿಯಮದ ಮೂಲಕ ಅದರಡಿಯಲ್ಲಿ ಬರುವ ನಿಯಮದ ಪ್ರಕಾರ

ಕೆಲಸ ಮಾಡುತ್ತಾನೆ'. ಜಿಲ್ಲಾ ಪರಿಷತ್ತಿಗೆ ಅಥವಾ ಮಂಡಲ ಪಂಚಾಯತಿಗೆ, ತಾಲ್ಲೂಕು ಪಂಚಾಯತಿಗೆ ಆತ ಅಧೀನನಲ್ಲ, ಆತ ಸರ್ಕಾರದ ಅಧೀನ. ನಾನು ಅದಕ್ಕಾಗಿ ಹೇಳಿದೆ: ಈ ಒಂದು ವಿಕೇಂದ್ರಿಕರಣದ ಹೆಸರಿನಲ್ಲಿ ವಿಕೃತವಾದ ಮಸೂದೆ ಎಲ್ಲೆಂದರೆ ಇಲ್ಲ. You have totally dispensed with the basic concept. ಅದನ್ನೇ ಪಂಡಿತ ಜವಹರಲಾಲ್ ನೆಹರೂರವರು ಸಂಬಳದ ಅಧಿಕಾರಿಗಳಿಂದ ವಿಕೇಂದ್ರೀಕರಣ ಸಾಧ್ಯವಿಲ್ಲವೆಂದು ಏನು ಹೇಳಿದರೋ ಪುನಃ ಇದೇ ವ್ಯವಸ್ಥೆಯನ್ನೇ ತಾವು ಇಲ್ಲಿ ತಂದಿದ್ದೀರಲ್ಲಾ. Is it decentralisation? ಮತ್ತೊಂದು ವಿಚಾರ ಇದೆ. ಮಾನ್ಯ ಅಧ್ಯಕ್ಷರೆ, ಸೆಕ್ಷನ್ 121ರಲ್ಲಿ ಏನು ಹೇಳುತ್ತಾರೆ, ಎಂಬುದನ್ನು ತುಂಬಾ ಗಮನಿಸಬೇಕಾಗಿದೆ. ಕಾರ್ಯದರ್ಶಿಯವರ ನೇಮಕ In Consultation with the Mandal Panchayat. ಇವೊತ್ತು ಮಂಡಲ ಪಂಚಾಯಿತಿ ಯಾವ ಲೆಕ್ಕಕ್ಕೂ ಇಲ್ಲ, ಸರ್ಕಾರದವರು ನೇಮಕ ಮಾಡುತ್ತಾರೆ....

ಶ್ರೀ ಕೆ. ಎಸ್. ಕಾಳಮರಿಗೌಡ : ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಕಾರ್ಯದರ್ಶಿಗಳನ್ನು ನೇಮಕ ಮಾಡುವಂಥ ಸಂದರ್ಭದಲ್ಲಿ ಜಿಲ್ಲಾ ಪರಿಷತ್‌ನವರು ಏನಾದರೂ ಮಂಡಲ ಪಂಚಾಯಿತಿಯವರನ್ನು ಕೇಳಿ ನೇಮಕ ಮಾಡುತ್ತಿದ್ದರೇ? ಅದು ಕಾಯಿದೆಯಲ್ಲಿತ್ತು. ಆದರೆ ಪ್ರಾಕ್ಟಿಕಲ್ ಆಗಿ ನಡೆಯುತ್ತಿತ್ತೇ?

ಶ್ರೀ ಡಿ. ಬಿ. ಚಂದ್ರೇಗೌಡ : ನನಗೆ ಗೊತ್ತಿಲ್ಲ.

ಶ್ರೀ ಕೆ. ಎಸ್. ಕಾಳಮರಿಗೌಡ : ಯಾವೊತ್ತೂ ನಡೆಯುತ್ತಿರಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ಆದರೆ, ಕಾನ್‌ಸೆಪ್ಟ್ ಅನ್ನು ಚರ್ಚೆ ಮಾಡುವಾಗ, ಮಸೂದೆ ಎಲ್ಲಿದೆ? ನೀವೇನು ಡಿಸ್‌ಪೆನ್ಸ್ ಮಾಡುತ್ತೀರಿ? ಅದಕ್ಕೋಸ್ಕರವೆ ನಾನು ಈಗ ತಾನೇ ಹೇಳಿದೆ: ಜುಟ್ಟು, ಜನಿವಾರಗಳೆಲ್ಲಾ ನಿಮ್ಮ ಕೈಯಲ್ಲಿರಬೇಕು, ನಾವು ನಾಳೆ ಅಲ್ಲಿಗೆ ಬಂದಾಗ ನೀವು ಇಲ್ಲಿಗೆ ಬಂದು ಕುಳಿತರೆ ಆಗ .'ಚಂದ್ರೇಗೌಡರೆ, ವರ್ಗ ಮಾಡಿಕೊಡಿ ' ಎಂದು ನನ್ನ ಹತ್ತಿರ ಬರಬೇಕು. ಈಗ ನಾವು ಘೋರ್ಪಡೆಯವರ ಹತ್ತಿರ ಹೋಗಿ 'ವರ್ಗ ಮಾಡಿಕೊಡಿ' ಎಂದು ಕೇಳಬೇಕು. ಮಂಡಲ ಪಂಚಾಯಿತಿ ಕಾರ್ಯದರ್ಶಿಯನ್ನು ವರ್ಗ ಮಾಡುವಂಥ ಅಧಿಕಾರಕ್ಕಾಗಿ ನಾವು ಇಲ್ಲಿಗೆ ಬರಬೇಕು. ಕಾರ್ಯದರ್ಶಿಗಳ ವಿಚಾರವನ್ನಷ್ಟೇ ಹೇಳುತ್ತೇನೆ. ಜವಾನನನ್ನು ಮಂಡಲದ ಪ್ರಧಾನರು ಸಸ್‌ಪೆಂಡ್ ಮಾಡುವುದಕ್ಕೆ ಸಾಧ್ಯವಿಲ್ಲ. ಮಂಡಲಕ್ಕೆ ಏನಾದರೂ ಸ್ವಲ್ಪ ಅಧಿಕಾರವಿದ್ದರೂ ಸಹ ತಾಲ್ಲೂಕು ಪಂಚಾಯಿತಿಗಳಿಗೆ ಮತ್ತು ಜಿಲ್ಲಾಪರಿಷತ್‌ಗಳಿಗೆ ಏನೇನು ಅಧಿಕಾರವಿಲ್ಲ. ಸಂಪೂರ್ಣವಾಗಿ ಅಧಿಕಾರವನ್ನು ನೀವು ಇಟ್ಟುಕೊಂಡು ವಿಕೇಂದ್ರೀಕರಣ ಮಾಡುತ್ತೇವೆಂದರೆ ಏನನ್ನು ವಿಕೇಂದ್ರೀಕರಣ ಮಾಡಿದ್ದೀರಿ? ದಯಮಾಡಿ ಮಸೂದೆಯನ್ನು ಓದಿ. What is that you have done? Section 112, Sub section 1.

ಶ್ರೀ ಎಂ. ವೈ. ಘೋರ್ಪಡೆ : ತಮಗೆ ಗೊತ್ತಿರಬೇಕು, ಮಂಡಲ ಪಂಚಾಯಿತಿಗೆ ಈಗಾಗಲೆ 18 ಸಾವಿರ ಜನರನ್ನು ನೇಮಕ ಮಾಡಿದಾಗ, ಅವರುಗಳು ಸರ್ಕಾರದ ಕಾನೂನಿನ ಪ್ರಕಾರ ಸಂಬಳವನ್ನು ಕೊಡಬೇಕು, ಇಲ್ಲದಿದ್ದರೆ ನಾವು ಬದುಕಲು ಸಾಧ್ಯವಿಲ್ಲವೆಂದು ಚಳುವಳಿಯನ್ನು ಮಾಡುತ್ತಿದ್ದರು. ಆ ಕಾರಣ ಕಾರ್ಯದರ್ಶಿಯವರಿಗೂ ಕೂಡ ನಾವೇ ಸಂಬಳವನ್ನು ಕೊಡುತ್ತಿದ್ದೇವೆ. ಮತ್ತು ಎಲ್ಲರಿಗೂ ಸಹ ನ್ಯಾಯವಾಗಿ ಸಂಬಳದ ವ್ಯವಸ್ಥೆಯನ್ನಾದರೂ ಸಹ ಮಾಡಬೇಕಲ್ಲ. ತಾವು ಏನು ಓದುತ್ತಿದ್ದೀರಿ ಅದರ ಪ್ರಕಾರ ನಡೆಯಲಿಲ್ಲ. ಏಕೆಂದರೆ, ಅವರನ್ನು ನೇಮಕ ಮಾಡಿಕೊಳ್ಳಲು ಅವರ ಹತ್ತಿ ಹಣವಿರಲಿಲ್ಲ,

ಅವರನ್ನು ಕನ್‌ಸಲ್ಟ್ ಮಾಡತಕ್ಕ ಪ್ರಶ್ನೆ ಇರಲಿಲ್ಲ. ಈಗ ಅವರಿಗೆ ಸರ್ಕಾರವೇ ಸಂಬಳವನ್ನು ಕೊಡುತ್ತಿದೆ. It is a fact that Zilla Parishat sector of personnel ಡೆವಲಪ್ ಮಾಡುವುದಕ್ಕಾಗಲಿಲ್ಲ. ಎಷ್ಟು ಸಾಧ್ಯವೋ ಅಷ್ಟನ್ನು ಮುಂದೆ ಮಾಡೋಣ, ಆದರೆ ಸಧ್ಯಕ್ಕೆ ಏನೂ ಆಗಿಲ್ಲವೆಂದು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. There is no Zilla Parishad sector where they appoint people from their own income and suspend or transfer on their own. That situation is not there today.

ಶ್ರೀ ಡಿ. ಬಿ. ಚಂದ್ರೇಗೌಡ : ಅದಕ್ಕೆ ನಾನು ನನ್ನ ಭಾಷೆಯಲ್ಲಿ ಹೇಳಲಿಲ್ಲ; but it was the observation of Pandit Jawahar Lal Nehru that paid employees lacked the spirit needed to fill the commitment of such work. As a result, the scheme could not produce tangible and visible results. ಈಗ ಏನಾಗುತ್ತದೆಂದರೆ ಎಲ್ಲಿ ನಮಗೆ ವರ್ಗಾವಣೆ ಮಾಡತಕ್ಕ ಅವಕಾಶವಿರುವುದಿಲ್ಲ, ಎಲ್ಲಿ ನಮಗೆ ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳಲು ಅಧಿಕಾರವಿಲ್ಲ, ಅಲ್ಲಿ ನಮ್ಮ ಮಾತನ್ನು ಯಾರೂ ಸಹ ಕೇಳುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ : ಜವಹರ್‌ಲಾಲ್‌ರವರು ಬರೇ ನಾವು ಅಧಿಕಾರಸ್ಥರ ಮೇಲೆ ಎಲ್ಲವನ್ನೂ ಬಿಡಲು ಆಗುವುದಿಲ್ಲ, ಚುನಾಯಿತ ಪ್ರತಿನಿಧಿಗಳೂ ಸಹ ಇರಬೇಕಾಗುತ್ತದೆ ಎನ್ನತಕ್ಕ ಅರ್ಥದಲ್ಲಿ ಹೇಳಿದ್ದರು. ಸರ್ವ ಕಾಲಕ್ಕೂ ಅವರ ಮಾತು ಅನ್ವಯಿಸುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ : ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರವಿಲ್ಲ, ಸಂಬಳವನ್ನು ಕೊಡಲು ಅಧಿಕಾರವಿಲ್ಲ, ಅವರನ್ನು ನೇಮಕ ಮಾಡಲು ಅಧಿಕಾರವಿಲ್ಲ, ಅಂದ ಮೇಲೆ ನನ್ನ ಮನೆಯಲ್ಲಿರತಕ್ಕ ಜವಾನ ನನ್ನ ಮಾತನ್ನು ಕೇಳುತ್ತಾನೆಯೆ? ಇದರ ಬಗ್ಗೆ ಹೇಳಿ? ಅವನನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಅಧಿಕಾರ ಇಲ್ಲದಿದ್ದರೆ ಅವನು ನಮ್ಮ ಮಾತನ್ನು ಕೇಳುತ್ತಾನೆಯೇ? ನೀವು ಸಂಬಳವನ್ನು ಕೊಟ್ಟು ನಮ್ಮ ಮನೆಯಲ್ಲಿ ನೇಮಕ ಮಾಡಿದಂತಾಗುತ್ತದೆ. ಅವನು ನಮ್ಮ ಮಾತನ್ನು ಎಲ್ಲಿ ಕೇಳುತ್ತಾನೆ?

Dr. N.B. Nanjappa : Same thing applies to the Government also. Isn't it? What happened in Zilla Parishad? When I went for the first meeting, the President of the ZP said we are nowhere concerned with the Government, We have got our own Government and so we need not ask anybody. That was the reply and there was a big quarrel and all that. ಇವತ್ತು ಸರ್ಕಾರ ಇದರ ಮೇಲೆ ಇದ್ದರೆ ಮಾತ್ರ, ಕೊನೆಯವರೆಗೂ ಅದರ ಮೇಲೆ ಒಂದು ಅಧಿಕಾರ ಇಟ್ಟುಕೊಂಡರೆ ಮಾತ್ರ ಪ್ರಜಾಪ್ರಭುತ್ವ ಸುವ್ಯವಸ್ಥಿತವಾಗಿ ನಡೆಯಲು ಸಾಧ್ಯ. You have given Power to Mandal Pradhan. Is there any accountability at present at the Mandal level? Any good work done? Have they misused their powers? All these things are to be looked into.

(ಶ್ರೀ ಬಿ.ಎಂ. ಇದಿನಬ್ಬರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಡಿ. ಬಿ. ಚಂದ್ರೇಗೌಡ : ನೀವು ವೈದ್ಯಗಾರಿಕೆಯನ್ನು ಓದಿದ್ದೀರಿ, ನಾನು ಗ್ರಾಮ ಜೀವನವನ್ನು ಓದಿದ್ದೇನೆ. Please hear me.

ಡಾ॥ ಎನ್. ಬಿ. ನಂಜಪ್ಪ : ನಿಮಗಿಂತ ಹೆಚ್ಚಾಗಿ ಹಳ್ಳಿಯ ಜೀವನದಲ್ಲಿ ನಾನು ಬೆಳೆದು ಬಂದವನು, ತಾವು ಅದನ್ನು ತಿಳಿದುಕೊಳ್ಳಬೇಕು. ಏಕೆಂದರೆ ನೀವು ಮಲೆನಾಡು ಪ್ರದೇಶದಲ್ಲಿ ಹುಟ್ಟಿದವರು, ತಾವು ಪ್ಲಾನ್‌ಟೇಷನ್ ಮಧ್ಯೆ ಹುಟ್ಟಿದವರು, ಆದರೆ ನಾನು ಹುಟ್ಟಿರತಕ್ಕದ್ದು rain shadow area where there is 12" to 20" rainfall in the year. ಇಂಥ ಕಡೆ ಹುಟ್ಟಿರತಕ್ಕ ಗೌಡಗಾರಿಕೆಯವನು ನಾನು. ನನಗೆ ಗ್ರಾಮ ಜೀವನದ ಬಗ್ಗೆ I know the picture of village even before independence and after independence up till today. I can give a detailed account of villages in India.

4.15 ಪಿ. ಎಂ.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಪೂರ್ತಿ ಹೇಳುವುದಕ್ಕೆ ಮುಂಚೆಯೇ ತಾವು ಎದ್ದು ನಿಂತಿರಿ.

ಡಾ॥ ಎನ್. ಬಿ. ನಂಜಪ್ಪ : ನಾನು ಡಾ॥ ಪದವಿ ಪಡೆದಿದ್ದೇನೆ. ಅದಕ್ಕಾಗಿ ನನಗೆ ಹಳ್ಳಿಯ ವಿಚಾರ ಏನೇನೂ ಗೊತ್ತಿಲ್ಲವೆಂಬ ಭಾವನೆಯನ್ನು ತಾವು ಏನು ಹೊಂದಿದ್ದೀರಿ, ಅದನ್ನು ದಯವಿಟ್ಟು ಬದಲಾವಣೆ ಮಾಡಿಕೊಳ್ಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಚಂದ್ರೇಗೌಡರೆ, ತಾವು ಸೂಲಗಿತ್ತಿಯಾಗಿ ಈ ಹೆರಿಗೆಯನ್ನು ಮಾಡಿದಿರಿ. ಆದರೆ ಅದು ಹೆಣ್ಣೋ, ಗಂಡೋ ಎಂಬುದನ್ನು ತಾವು ಇದುವರೆಗೂ ಹೇಳಲಿಲ್ಲ. ನಾನು ಮುಂಜಾನೆಯಿಂದ ಇದುವರೆಗೂ ಇಲ್ಲೇ ಕುಳಿತಿದ್ದೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಇದುವರೆಗೂ ಹೇಳಿದ್ದು ಗಂಡು ಮಗು ಎಂದು. ಅದು ನಿಮಗೆ ಅರ್ಥವಾಗಲಿಲ್ಲ ಅಷ್ಟೆ;

ಶ್ರೀ ಜೆ. ಸಿ. ಮಾಧುಸ್ವಾಮಿ : ನೀವು ಕಸಿ ಮಾಡಿ ಹುಡುಗಿಯನ್ನು ಮಾಡುತ್ತಿದ್ದೀರೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಮಲ್ಲಾರಿಗೌಡರೆ, ನಾನು ಹೇಳಿದ ಉದ್ದೇಶವೆಂದರೆ, ರಾಜ್ಯಾಂಗದ 40ನೇ ವಿಧಿಯಲ್ಲಿ ಲೋಕಲ್ ಸೆಲ್ಫ್ ಗೌರ್ನಮೆಂಟ್ ಎಂದು ಹೇಳುತ್ತಾರೆ. ರಾಜ್ಯಾಂಗದ 73ನೇ ತಿದ್ದುಪಡಿಯಲ್ಲೂ ಕೂಡ ಸೆಲ್ಫ್ ಗೌರ್ನಮೆಂಟ್ ಎಂದು ಹೇಳಿದ್ದಾರೆ. ಆದರೆ ನೀವು ಇದರ ಜುಟ್ಟು ಜನಿವಾರ ಹಿಡಿದುಕೊಂಡು ಸರ್ಕಾರವನ್ನು ನಡೆಸಬೇಡಿ ಎಂದು ನಾನು ಹೇಳಿದ್ದು.

ಡಾ॥ ಎನ್. ಬಿ. ನಂಜಪ್ಪ : ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತ್‌ಗಳಿಗೆ ಹಣ ಬೇಕಾಗಿತ್ತು. ನೀವು ಇದನ್ನು ಬದಲಾವಣೆ ಮಾಡಿ ಏತಕ್ಕೆ ಈ ಗೊಂದಲವನ್ನು ಸೃಷ್ಟಿ ಮಾಡಿದಿರಿ? ನೀವು ಮಾಡಿದ್ದರ ಮೇಲೆ ಘತ್ತೆ ನೀವೇ ಕಮೆಂಟ್ ಮಾಡುತ್ತಿದ್ದೀರಲ್ಲಾ. ಮೊದಲು ಇದ್ದ ವ್ಯವಸ್ಥೆಗೇ ಹಣವನ್ನು ಕೊಟ್ಟಿದ್ದಿದ್ದರೆ ಅವರು ಚರಂಡಿಯನ್ನೋ, ಬೇರೆ ಇನ್ನೇನನ್ನೋ ಮಾಡಿಕೊಂಡು ಹೋಗುತ್ತಿದ್ದರು.

ಶ್ರೀ ಡಿ. ಬಿ. ಚಂದ್ರೇಗೌಡ : ಅವರು ಶಾಸಕರ ಸೇವಕರಾಗಿರುತ್ತಿದ್ದರು. ಅಕೌಂಟಬಿಲಿಟಿಯ ಬಗ್ಗೆ ತಾವು ಹೇಳುತ್ತೀರಿ. ನಾನು ತಮ್ಮನ್ನು ಕೇಳುತ್ತೇನೆ, ಚುನಾವಣೆ ಆಗಿ ಇಷ್ಟು ದಿವಸವಾಗಿದೆ. Have you submitted your performance both inside the House and outside the House to the people? ಅಂದರೆ ನಿಮ್ಮ ಅಕೌಂಟಬಿಲಿಟಿ ಎಲ್ಲಿದೆ? ನನಗಾಗಲಿ, ನಿಮಗಾಗಲಿ, ಬೇರೆ ಶಾಸಕರಿಗಾಗಲಿ ಅಕೌಂಟಬಿಲಿಟಿ ಇದೆಯೆ? ನಾವು 5 ವರ್ಷಕ್ಕೆ ಆಯ್ಕೆಯಾಗಿ ಇಲ್ಲಿ ಬಂದು ಕುಳಿತುಕೊಳ್ಳಬಹುದು, ಅಕೌಂಟಬಿಲಿಟಿ ಇಲ್ಲ. ಅಲ್ಲಿ ಮಂಡಲ ಪ್ರಧಾನನಿಗೆ, ಜಿಲ್ಲಾ ಪರಿಷತ್ತಿನವರಿಗೆ ನೀವು ಅಕೌಂಟಬಿಲಿಟಿಯನ್ನು ಕೇಳುತ್ತೀರಿ. What right do we have ? Do we have moral authority to ask this question? please ask this question to youselves.

ಶ್ರೀ ಜೆ. ಸಿ. ಮಾಧುಸ್ವಾಮಿ : ಕಾವೇರಿ ನೀರಿನ ಬಗ್ಗೆ ಒಂದು ಡಿಸಿಷನ್‌ನ್ನು ಇಲ್ಲಿ ತೆಗೆದುಕೊಳ್ಳುವಾಗ ಅಲ್ಲಿ ಒಂದು ಫೆಡರಲ್ ಗೌರ್ನಮೆಂಟ್ ಇದೆ ಎಂದು ಯೋಚನೆ ಮಾಡಿದ್ದಿದ್ದರೆ ಜಿಲ್ಲಾ ಪರಿಷತ್ತುಗಳು ಏತಕ್ಕೆ ಇರಬೇಕೆಂದು ಅರ್ಥವಾಗಿರುತ್ತಿತ್ತು. ಭಾರತ ಸರ್ಕಾರದವರು ಈ ಪ್ರಶ್ನೆಯನ್ನು ಕೇಳಿದ್ದಿದ್ದರೆ ಉತ್ತರವನ್ನು ಹೇಳುತ್ತಿದ್ದರು.

Dr. N.B. Nanjappa : You cannot have Conceptions - ಅದನ್ನು ಬಿಡಬೇಕು. ಅದು ಸಮಾಜಕ್ಕಾಗಿ, ಹಳ್ಳಿಗಾಗಿ, ದೇಶಕ್ಕಾಗಿ ಎಂಬುದನ್ನು ಎಲ್ಲರೂ ಯೋಚನೆ ಮಾಡಬೇಕು. ಅದನ್ನು ಬಿಟ್ಟು ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಯೋಚನೆ ಮಾಡಿದರೆ ಇಂಥ ಗತಿ ಆಗುತ್ತದೆ. ಮೊದಲು ಇದ್ದಂಥ ತಾಲ್ಲೂಕು ಬೋರ್ಡ್‌ಗಳನ್ನು ಸುವ್ಯವಸ್ಥಿತವಾಗಿ ಮಾಡದ್ದಿದ್ದರೆ ಇವತ್ತು ಈ ಪಂಚಾಯಿತಿಯೇ ಬರುತ್ತಿರಲಿಲ್ಲ. ಮೊದಲಿದ್ದ ವ್ಯವಸ್ಥೆಯನ್ನು ಏತಕ್ಕೆ ಬದಲಾವಣೆ ಮಾಡಿದಿರಿ?

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ನಿಮಗೆ ಮೊದಲಿನಿಂದ ಅಂದರೆ, ಅ, ಆ, ಇ, ಈ, ನಿಂದ ಹೇಳಬೇಕು. ನೀವು ಮಧ್ಯೆ ಎಲ್ಲೋ ಒಂದುಸಾರಿ ಬಂದುಬಿಡುತ್ತೀರಿ. ನೀವು ಡಾಕ್ಟರು ಎಂದು ನಮ್ಮ ನಾಡಿಯನ್ನು ನಿಮ್ಮ ಕೈಗೆ ಕೊಟ್ಟು ನೀವು ಕೊಟ್ಟ ಔಷಧಿಯನ್ನು ನಾವು ತಿಂದರೆ ನಮ್ಮ ಗತಿ ಏನು?

ಡಾ॥ ಎನ್. ಬಿ. ನಂಜಪ್ಪ : ಎಲ್ಲರೂ ಡಾಕ್ಟರ್‌ಗಳಾಗುವುದಕ್ಕೆ ಹೋಗಿ ಈ ಪರಿಸ್ಥಿತಿ ಬಂದಿದೆ. ಪ್ರತಿಯೊಬ್ಬರೂ ಡಾಕ್ಟರ್ ಆಗಬೇಕು, ಪ್ರತಿಯೊಬ್ಬರೂ ಅಂಬೇಡ್ಕರ್ ಆಗಬೇಕು, ಪ್ರತಿಯೊಬ್ಬರೂ ಗಾಂಧೀಜಿಯಾಗಬೇಕು ಎಂದು ಎಲ್ಲರೂ ಫೋಟೋಗಳನ್ನು ಹಾಕಿಸಿಕೊಳ್ಳುವುದಕ್ಕೆ ಹೊರಟಿರುವುದರಿಂದಲೇ ಇವತ್ತು ದೇಶಕ್ಕೆ ಈ ಗತಿ ಬಂದಿರತಕ್ಕದ್ದು. ನಿಜವಾಗಿ ದೇಶಕ್ಕೋಸ್ಕರ ಕೆಲಸ ಮಾಡಿದ್ದಿದ್ದರೆ 47 ವರ್ಷಗಳಲ್ಲಿ ಈ ಗತಿ ಬರುತ್ತಲೇ ಇರಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಕಾಂಟ್ರವರ್ಸಿಗೆ ಹೋಗುವುದಿಲ್ಲ. ಗ್ರಾಮ ಸಭೆಯಿಂದ ಗ್ರಾಮ ಪಂಚಾಯತಿ ಸಭೆಗೆ ಬರೋಣ. ನನ್ನ ದೃಷ್ಟಿಯಲ್ಲಿ 111 ಮತ್ತು 112ನೇ ಸೆಕ್ಷನ್‌ಗಳಲ್ಲಿ ಎಲ್ಲಾ ಅಧಿಕಾರವನ್ನೂ ಸರ್ಕಾರವೇ ಇಟ್ಟುಕೊಂಡಿದೆ. ಕಾರ್ಯದರ್ಶಿ ನೇಮಕಾತಿ, ಮತ್ತು 112ರಲ್ಲಿ ಯಾರ್ಯಾರನ್ನು ನೇಮಕಾತಿ ಮಾಡಬೇಕೆಂದು ಹಿಂದೆ ಮಂಡಲಗಳು ತೀರ್ಮಾನ ಮಾಡುತ್ತಿದ್ದವು. ಆದರೆ ಈಗ ನೀವು ನಿರ್ಣಯಗಳನ್ನು ಮಾಡಿ ಕಳುಹಿಸುತ್ತಿದ್ದೀರಿ. ಇದು ವಿಕೇಂದ್ರಿಕೃತ ವವಸ್ಥೆ ಅಲ್ಲ. ವಿಕೇಂದ್ರೀಕೃತ ವಿಕೃತ ವ್ಯವಸ್ಥೆ. ಇದು ನನ್ನ ಅನಿಸಿಕೆ. ಗ್ರಾಮ ಸಭೆ, ಅಂದರೆ ಗ್ರಾಮ ಪಂಚಾಯಿತಿಯ ಸಭೆ

ಅದು ಸೊಸೈಟಿ ಇರಬಹುದು ಅಥವಾ ಯಾವುದೇ ಸಂಘ ಸಂಸ್ಥೆಗಳು ಇರಬಹುದು. ಅದು ಮಂಡಲ ಇರಬಹುದು, ಜಿಲ್ಲಾ ಪರಿಷತ್ತು ಇರಬಹುದು. ಎಲ್ಲಕಡೆಗಳಲ್ಲೂ ತಿಂಗಳಿಗೆ ಒಂದು ಸಭೆ ಎಂದು ಇದೆ. ಈಗ ನೀವು 2 ತಿಂಗಳಿಗೆ ಒಂದು ಸಭೆ ಮಾಡಬೇಕೆಂದು ಹೇಳುತ್ತಿದ್ದೀರಿ. ಜಿಲ್ಲಾ ಪರಿಷತ್ತಿನ ಸಭೆಯೂ 2 ತಿಂಗಳಿಗೆ ಒಂದು, ತಾಲ್ಲೂಕು ಪಂಚಾಯತಿ ಸಭೆಯು 2 ತಿಂಗಳಿಗೆ ಒಂದು, ಗ್ರಾಮ ಪಂಚಾಯತಿ ಸಭೆಯೂ 2 ತಿಂಗಳಿಗೆ ಒಂದು. ಅಂದರೆ 2 ತಿಂಗಳಿಗೆ ಕಡಿಮೆ ಇಲ್ಲದಂತೆ ಒಂದು ಸಭೆಯನ್ನು ಮಾಡಬೇಕೆಂದು ಹೇಳುತ್ತಿದ್ದೀರಿ. ಹಳೆ ಆ್ಯಕ್ಟ್‌ನ ಸೆಕ್ಷನ್ 52ರಲ್ಲಿ ತಿಂಗಳಿಗೆ ಒಂದು ಸಭೆ ಎಂದು ಇದೆ. ತಮ್ಮದು 2 ತಿಂಗಳಿಗೆ ಒಂದು ಸಭೆ. ಈ ಬದಲಾವಣೆ ಏತಕ್ಕೆ? ತಾಲ್ಲೂಕು ಸಮಿತಿಗೂ ಎರಡು ತಿಂಗಳಿಗೆ ಒಂದು ಸಭೆ, ಜಿಲ್ಲಾ ಪಂಚಾಯತಿಗೂ 2 ತಿಂಗಳಿಗೆ ಒಂದು ಸಭೆ; ಅದು ಕಡ್ಡಾಯವಾಗಿ ತಿಂಗಳಿಗೆ ಒಂದು ಸಭೆಯಾಗಬೇಕು. ಇಲ್ಲಿ ಬಹಳ ಇಂಟರೆಸ್ಟಿಂಗ್ ಆಗಿದೆ. You are not clear in your mind. ಅಧ್ಯಕ್ಷರ ಚುನಾವಣೆ ನೇರವಾಗಿ ಜನರಿಂದ ಆಗಬೇಕೋ, ಚುನಾಯಿತ ಸದಸ್ಯರಿಂದ ಆಗಬೇಕೋ, ಎನ್ನುವುದನ್ನು ಸ್ಪಷ್ಟಪಡಿಸಿಬಿಡಿ. ನಿಮ್ಮ ಪಕ್ಷದ ಸಭೆಗಳಲ್ಲಿ ಇನ್ನೂ ಚರ್ಚೆಯಾಗುತ್ತಿದೆ. ನೇರವಾಗಿ ಚುನಾವಣೆಯಾಗಬೇಕೋ, ಇಲ್ಲವೇ ಚುನಾಯಿತ ಪ್ರತಿನಿಧಿಗಳಿಂದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯಾಗಬೇಕೋ- ಇದು ಬಹಳ ಮುಖ್ಯವಾದ ಪ್ರಶ್ನೆ. I am very clear. ನಾನು ನಮ್ಮ ಹಾಗೆ ದ್ವಂದ್ವ ಇಟ್ಟುಕೊಳ್ಳುವುದಿಲ್ಲ. ನಮ್ಮ ಅಭಿಪ್ರಾಯವೇನು ಎನ್ನುವುದನ್ನು ಹಿಂದಿನ ಮಸೂದೆಯಲ್ಲಿ ಸ್ಪಷ್ಟಪಡಿಸಿಬಿಟ್ಟಿದ್ದೇವೆ. ಮತ್ತೊಮ್ಮೆ ಸ್ಪಷ್ಟಪಡಿಸಬೇಕೆಂದರೆ, ಅದೇ ಈಗಿರುವ ವ್ಯವಸ್ಥೆಯನ್ನೇ ಮುಂದುವರಿಸಿ. I cannot go back.

Sri M. Y. Ghorpade : That is an important matter. Please throw light on that. You argue out its pros and cons and what is your opinion.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಸೆಕ್ಷನ್ 52 ನ್ಯೂ ಆಕ್ಟ್‌ನಲ್ಲಿ ನಾನು ಹೇಳುತ್ತಿದ್ದೆ, ಎರಡು ತಿಂಗಳಿಗೆ ಒಂದು ಸಾರಿ ಸಭೆಯನ್ನು ಕರೆಯುವುದು ಮತ್ತು ಅದಕ್ಕಿಂತ ಮುಂಚೆ ಅಧ್ಯಕ್ಷರ ಚುನಾವಣೆ. Section 44, Sub section (1) ಈಗ ಗ್ರಾಮ ಪಂಚಾಯತಿಯ ಇಬ್ಬರು ಸದಸ್ಯರು ಅನುಕ್ರಮವಾಗಿ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡತಕ್ಕಂಥದ್ದು ಎಂದು ಇದೆ. ಅದು ಹಿಂದಿನ ಶಾಸನದ ಅನುಗುಣವಾಗಿಯೇ ಇದೆ. ಇಲ್ಲಿ ನೇರವಾದ ಚುನಾವಣೆಯಾಗಬೇಕೆಂಬುದು ಒಂದು ವಾದ. ಇನ್ನೊಂದು ವಾದ ; ಈಗಿರತಕ್ಕಂಥ ವ್ಯವಸ್ಥೆಯಂತೆ ಸದಸ್ಯರು ತಮ್ಮ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆ ಮಾಡಿಕೊಳ್ಳಬೇಕು. ನೇರವಾಗಿ ಚುನಾಯಿತನಾದಂಥ ಅಧ್ಯಕ್ಷರಿಗೆ ಬರತಕ್ಕಂಥ ತೊಂದರೆಗಳೇನು? ಘಾರ್ಪಡೆಯವರೇ ಈಗ ನೀವು ಇದರ ಬಗ್ಗೆ ಸ್ವಲ್ಪ ಮಟ್ಟಿಗೆ ಆಲೋಚನೆ ಮಾಡುವುದಕ್ಕೆ ಅವಕಾಶ ಏತಕ್ಕಿದೆ ಎಂದರೆ ಮಂಡಲದ ಲೆವೆಲ್‌ನಲ್ಲಿ ರಾಜಕೀಯ ಪಕ್ಷಗಳ ಅವಾಂತರದಿಂದ ದೂರ ಇರುವುದರಿಂದ ಸಾಧ್ಯವಿದೆ ಎಂದು ಯೋಚನೆ ಮಾಡೋಣ. ಒಂದು ವೇಳೆ ನಾವು ನೇರವಾಗಿ ಜನತಾದಳದ ಸದಸ್ಯರಲ್ಲ, ಬಿ.ಜೆ.ಪಿ. ಸದಸ್ಯರಲ್ಲ, ಇವರು ಕಾಂಗ್ರೆಸ್ ಸದಸ್ಯರಲ್ಲವೆಂದರೂ ಸಹ, ನಾನು ಹೋಗಿ ಯಾರ ಪರವಾಗಿ ಕೆಲಸ ಮಾಡುತ್ತೇನೊ ಅವನು ನನ್ನ ಪಕ್ಷದ ಸದಸ್ಯನಾಗುತ್ತಾನೆ. ಯಡಿಯೂರಪ್ಪನವರೋ, ಈಶ್ವರಪ್ಪನವರೋ ಹೋಗಿ ಯಾರ ಕೆಲಸ ಮಾಡುತ್ತಾರೋ ಅವರ ಪಕ್ಷದ ಸದಸ್ಯನಾಗಿರುತ್ತಾನೆ. ಇದನ್ನು ನೋಡುವುದು ಹೇಗೆ? ಅದು ಎಲ್ಲಿ ಪ್ರತಿಧ್ವನಿಯಾಗುತ್ತದೆ. ಚುನಾವಣೆಯಾದ ಮೇಲೆ ಪ್ರತಿ ಮೀಟಿಂಗ್‌ನಲ್ಲೂ ಪ್ರತಿಧ್ವನಿಯಾಗುತ್ತದೆ. ನಾವು ನಾಮಕಾವಸ್ತೆಗೆ ಪಕ್ಷಗಳಿಂದ ಹೊರಗಿದ್ದೇವೆಂದು ಆಲೋಚನೆ ಮಾಡಬಹುದು. ಆದರೆ ವಸ್ತುಸ್ಥಿತಿ ತನ್ನ ಪಕ್ಷದ ಸದಸ್ಯನನ್ನು ಹಾಕಿರುತ್ತಾನೆ, ಗೆಲ್ಲಿಸಿರುತ್ತಾನೆ, ತನ್ನ ಅಭಿಪ್ರಾಯದಂತೆ

ಕೆಲಸ ನಡೆಯಬೇಕೆನ್ನತಕ್ಕಂಥ ಒತ್ತಾಯ ಮಾಡುತ್ತಲೇ ಇರುತ್ತಾನೆ. ಈ ಸಂದರ್ಭದಲ್ಲಿ ನೇರವಾಗಿ ಚುನಾಯಿತನಾದ ಅಧ್ಯಕ್ಷ, ತಾನು ಚುನಾವಣೆಯಲ್ಲಿ ಗೆದ್ದುಬಂದು ತನ್ನ ಅಭಿಪ್ರಾಯದ ವಿರುದ್ಧವಾಗಿರತಕ್ಕಂಥ ಸದಸ್ಯರು ಬಹುಪಾಲು ಗೆದ್ದರೆ ಅವನು ಕಾರ್ಯೋನ್ಮುಖನಾಗುವುದು ಹೇಗೆ ? ಇದು ಒಂದು. 15 ಜನ ಸದಸ್ಯರು ನೇರವಾಗಿ ಗೆದ್ದು ಬಿಡುತ್ತಾರೆ. ಉಳಿದ 15 ಜನವೂ ಅವನ ಅಭಿಪ್ರಾಯಕ್ಕೆ ವಿರುದ್ಧವಾಗಿರುವವರು ಗೆದ್ದರೆ ಅವನು ಸಭೆಯನ್ನು ನಡೆಸುವುದು ಹೇಗೆ? ಇದು ಒಂದು ಪ್ರಶ್ನೆ ಅಲ್ಲವೆ?

ಶ್ರೀ ಜಿ. ರಾಜುಗೌಡ : ಒಬ್ಬ ನೇರವಾಗಿ ಗೆಲ್ಲತಕ್ಕಂಥ ಅಧ್ಯಕ್ಷ ಅವನಿಗೆ ಪಕ್ಷವೇ ಇಲ್ಲ. ಅವನ ಅಭಿಪ್ರಾಯವನ್ನು ಹೇಗೆ ವಿರೋಧ ಮಾಡುತ್ತಾರೆ. ಬೇರೆ ಪಕ್ಷದವರು ಏತಕ್ಕೆ ವಿರೋಧ ಮಾಡುತ್ತಾರೆ. ಪಕ್ಷದಲ್ಲೇ ಇಲ್ಲದವನನ್ನು ಏತಕ್ಕೆ ವಿರೋಧ ಮಾಡುತ್ತಾರೆ? ಅವನ ಅಭಿಪ್ರಾಯ ಸಕಾರಣವಾಗಿದ್ದರೆ ಎಲ್ಲರೂ ಪುಷ್ಟೀಕರಿಸುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ರಾಜುಗೌಡರೆ, ನಾವು ಪಕ್ಷದ ಲೇಬಲ್ ಹಾಕಿರುವುದಿಲ್ಲ. ಸೊಸೈಟಿಗಳ ಎಲೆಕ್ಷನ್‌ನಲ್ಲಿ ಲೇಬಲ್ ಎಲ್ಲಿರುತ್ತದೆ. ಆದರೆ ಚುನಾವಣೆಯಾದ ಮೇಲೆ ಗ್ರೂಪ್‌ಗಳಾಗುತ್ತವೆ. ಬಿ.ಜೆ.ಪಿ ಇದ್ದರೆ ಬಿ.ಜೆ.ಪಿ. ಗ್ರೂಪ್‌ಗೆ ಹೋಗುತ್ತಾನೆ, ಜನತಾದಳದವನು ಜನತಾದಳದ ಗ್ರೂಪ್‌ಗೆ ಹೋಗುತ್ತಾನೆ. ಕಾಂಗ್ರೆಸ್‌ನವನು ಕಾಂಗ್ರೆಸ್ ಗ್ರೂಪ್‌ಗೆ ಹೋಗುತ್ತಾನೆ.

ಶ್ರೀ ಕರಿಯಣ್ಣ : ಯಾವುದೇ ಪಕ್ಷ ಇದ್ದರೂ ಸಬ್ಜೆಕ್ಟ್ ಮೇಲೆನೇ ತೀರ್ಮಾನವಾಗುವುದು. ಸಬ್ಜೆಕ್ಟ್‌ಗೆ ಹೇಗೆ ವಿರುದ್ಧ ಬರುತ್ತದೆ. ಆ ಊರಿಗೆ ಅನುಕೂಲವಾದ ಸಬ್ಜೆಕ್ಟ್ ಇದ್ದರೆ ಆ ಸಬ್ಜೆಕ್ಟ್‌ಗೆ ಎಲ್ಲರೂ ಸಹಕಾರ ಕೊಡುತ್ತಾರೆ. ಇಲ್ಲದೆ ಹೋದರೆ ಅದರ ಪಾಡಿಗೆ ಅದು ಬಿದ್ದುಹೋಗುತ್ತದೆ. ಆದ್ದರಿಂದ ನೇರವಾಗಿ ಆರಿಸಿಬಂದವನಿಂದಲೇ ಒಳ್ಳೆಯ ಕೆಲಸವಾಗುತ್ತದೆಂದು ಹೇಳುವುದು ಸರಿಯಲ್ಲ.

ಶ್ರೀ ಡಿ. ಬಿ. ಚಂದ್ರೆಗೌಡ : ವಿಷಯ ಇಷ್ಟು ಸರಳವಾಗಿದ್ದರೆ ಇಷ್ಟೆಲ್ಲ ಚರ್ಚೆ ಮಾಡಬೇಕಾದುದಿಲ್ಲ. ಆದುದರಿಂದ ನಮ್ಮ ಅನುಭವಗಳನ್ನು ಹಂಚಿಕೊಳ್ಳೋಣ. ಎರಡನೆಯದಾಗಿ, ಅಧ್ಯಕ್ಷ ನೇರವಾಗಿ ಚುನಾಯಿತನಾಗಿದ್ದರೆ ಆತನ ವಿರುದ್ಧ ಅವಿಶ್ವಾಸ ನಿರ್ಣಯ ತರುವುದಕ್ಕೆ ಸಾಧ್ಯವಿದೆ. ಅವಿಶ್ವಾಸ ನಿರ್ಣಯ ತರಬೇಕೆಂದರೆ ಜಯಪ್ರಕಾಶ್ ನಾರಾಯಣ್ ಅವರು ಹೇಳಿದ - Right to Recall ಆಗಬೇಕು. Right to recall ಗೆ ವಿಶೇಷವಾದ ಒಂದು ವ್ಯವಸ್ಥೆ ಈ ಮಸೂದೆಯಲ್ಲಿ ಆಗಬೇಕು. This Right to recall - 6 ತಿಂಗಳಿಗೋ ಒಂದು ವರ್ಷಕ್ಕೋ ಸೇರತಕ್ಕ ಗ್ರಾಮ ಸಭೆಗಳಿಗೆ Right to recall ಮಾಡತಕ್ಕ ಅಧಿಕಾರ ಕೊಡತಕ್ಕ ವ್ಯವಸ್ಥೆ ಇದ್ದರೆ ಆಲೋಚನೆ ಮಾಡಬೇಕು. ಮೂರನೆಯದಾಗಿ, ಚುನಾಯಿತ ಸದಸ್ಯರು ಅಧ್ಯಕ್ಷನನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. Because they have no right to remove them 2/3 ಮೆಜಾರಿಟಿ ಆದರೂ ಎಲ್ಲ ಸದಸ್ಯರು ಸೇರಿದರೂ ಆತನನ್ನು ತೆಗೆಯುವುದಕ್ಕಾಗುವುದಿಲ್ಲ. ಆತ ನೇರವಾಗಿ ಆಯ್ಕೆಯಾಗಿರುತ್ತಾನೆ.

ಶ್ರೀ ಕರಿಯಣ್ಣ : ಗ್ರಾಮ ಪಂಚಾಯಿತಿ ಇದ್ದಾಗ ಈ ತರಹ ಪಕ್ಷದ ಆಧಾರದ ಮೇಲೆ ಚುನಾವಣೆ ನಡೆದಿರಲಿಲ್ಲ. ತಾವು ಗ್ರಾಮ ಪಂಚಾಯಿತಿಯ ಅನುಭವ ಪಡೆದಿದ್ದೀರಿ. ಆಗಲೂ ಸಹ ಯಾವ ಬ್ಯಾನರ್ ಮೇಲೂ ನಡೆಯಲಿಲ್ಲ. ಆಗ ನೇರವಾಗಿ ಚುನಾವಣೆ ನಡೆಯದೆ ಹೋದರೂ ಅಧ್ಯಕ್ಷನಿಗೆ ಸಬ್ಜಕ್ಟ್ ವಿಚಾರದಲ್ಲಿ ಸಹಕಾರ ಕೊಟ್ಟುಕೊಂಡಿದ್ದರು.

ನೇರವಾಗಿ ಚುನಾವಣೆಯಾಗುವುದರಿಂದ ಹಳ್ಳಿಗಾಡಿನಲ್ಲಿ ಅಂಥ ತೊಂದರೆ ಏನೂ ಕಾಣುವುದಿಲ್ಲವಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ವಿಷಯ ಇಷ್ಟು ಸರಳವಾಗಿರುವುದಾದರೆ, ನಾವು ಇಷ್ಟು ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ಆದರೆ ನಾವು ಪ್ರಾಕ್ಟಿಕಲ್ ಅಪ್ಲಿಕಬಿಲಿಟಿ, ಫೀಲ್ಡಿಗೆ ಹೋದಾಗ ನಾವು ಇಲ್ಲಿ ಚರ್ಚೆ ಮಾಡಿದಷ್ಟು ಸುಲಭವಾಗಿರುವುದಿಲ್ಲ; ಸಾಮಾಜಿಕ ವ್ಯವಸ್ಥೆ ಇರುವುದಿಲ್ಲ. ಆ ದೃಷ್ಟಿಯಿಂದ ಇದನ್ನು ಆಲೋಚನೆ ಮಾಡಬೇಕು. ಅದಕ್ಕಾಗಿ ಹೇಳಿದೆ, ಮಸೂದೆಯನ್ನು ತರುವ ಮುನ್ನ ಇಂಥ ಅನೇಕ ವಿಚಾರಗಳು ಪರಿಪೂರ್ಣವಾಗಿ ಚರ್ಚೆಯಾಗಬೇಕು. ಇಲ್ಲಿ ಎಲ್ಲವೂ ಅನುಭವದ ಗರ್ಭದಿಂದ ಹೊರಟು ಬಂದಂಥದ್ದು ಆಗಿಲ್ಲ.

ಡಾ॥ ಎನ್. ಬಿ. ನಂಜಪ್ಪ : ಕಳೆದ ಸಾರಿ ಮಂಡಲ ಪಂಚಾಯಿತಿ ಎಲೆಕ್ಷನ್‌ನಲ್ಲಿ ಗೆದ್ದಂತ ವ್ಯಕ್ತಿಗಳು ಯಾರು ಬಲಯುತವಾಗಿರುತ್ತಾರೆ, ಯಾರಿಗೆ ಹಣ ಖರ್ಚು ಮಾಡುವುದಕ್ಕೆ ಸಾಧ್ಯತೆ ಇರುತ್ತದೋ ಅಂತಹ ಕ್ಯಾಂಡಿಡೇಟ್ಸ್ ಅನ್ನು ಹೊತ್ತುಕೊಂಡು ಹೋಗಿ ಒಂದು ಕಡೆ ಇಟ್ಟುಕೊಂಡು ತಾನು ಪ್ರೆಸಿಡೆಂಟ್ ಆಗತಕ್ಕ ವ್ಯವಸ್ಥೆ ಮತ್ತು ಅವನ ಪೀರಿಯಡ್‌ನಲ್ಲಿ ಅವರನ್ನೆಲ್ಲ ಮೆಯಿಂಟೇನ್ ಮಾಡತಕ್ಕ ವ್ಯವಸ್ಥೆಯನ್ನು ನಾವು ಈಗಾಗಲೆ ನೋಡಿದ್ದೇವೆ. ಈ ಡಿಫಿಕಲ್ಟೀಸ್ ಇವೆಯಲ್ಲ. ಆದುದರಿಂದ ನೇರವಾಗಿ ಸ್ಪರ್ಧಿಸಿ ಗೆಲ್ಲತಕ್ಕದ್ದು ಸರಿಯೆ? ಅಥವಾ ಈ ರೀತಿ ಬಂಡವಾಳಸ್ಥರು ಅಥವಾ ಯಾರಾದರೂ ಮಸಲ್ ಪವರ್, ಮನಿ ಪವರ್ ಇರತಕ್ಕವನು ಆಳತಕ್ಕದ್ದು ಸರಿಯೆ? ಈಗಾಗಲೇ ನಾವು 20-30 ವರ್ಷಗಳಿಂದ ನೋಡಿದ್ದೇವೆ. ಪಂಚಾಯತಿ ವ್ಯವಸ್ಥೆ ನೋಡಿದ್ದೇವೆ, ಮಂಡಲ ಪಂಚಾಯತಿ ವ್ಯವಸ್ಥೆ ನೋಡಿದ್ದೇವೆ. ಇದರಲ್ಲಿ ಯಾವುದು ಒಳ್ಳೆಯದೆಂಬುದರ ಬಗ್ಗೆ ನೀವು ನಿಮ್ಮ ಅಭಿಪ್ರಾಯವನ್ನು ತಿಳಿಸಿದರೆ ತುಂಬಾ ಒಳ್ಳೆಯದು ಎಂದು ನನಗನ್ನಿಸುತ್ತದೆ.

ಶ್ರೀ ಡಿ. ಬಿ. ಚಂದ್ರೆಗೌಡ : ನಾನು ಹೇಳಿದರೆ ನಿಮಗೆ ಕೋಪ ಬರುತ್ತದೆ. ನೀವು ಸಮಗ್ರವಾಗಿ ಮಸೂದೆಯನ್ನು ಓದಿ ಎಂದು ಏತಕ್ಕೆ ಹೇಳಿದೆ ಎಂದರೆ, ಈ ಮಸೂದೆಯಲ್ಲಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಒಂದು ವ್ಯವಸ್ಥೆ ಇದೆ. ಅಲ್ಲಿ ಅಧ್ಯಕ್ಷನನ್ನು ತೆಗೆದುಹಾಕುವುದಕ್ಕೆ ಸಿಂಪಲ್ ಮೆಜಾರಿಟಿ ಸಾಕು. ಮಂಡಲ ಪಂಚಾಯಿತಿಯಲ್ಲಿ 2/3 ಭಾಗ ಮೆಜಾರಿಟಿ ಬೇಕೆಂದು ಹೇಳುತ್ತಾರೆ. ಈ ದ್ವಂದ್ವಗಳು ಇವೆ. ಈ ದ್ವಂದ್ವಗಳು ಏತಕ್ಕೆ ಇವೆ ಎಂದರೆ ನಮ್ಮ ಮನಸ್ಸಿನಲ್ಲಿ ಗೊಂದಲ ಇದೆ. ಆದ್ದರಿಂದ ದ್ವಂದ್ವಗಳಿವೆ. ನಾವು ನಿಖರವಾಗಿ ಹೀಗೇ ಆಗುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಅದಕ್ಕೆ ಪ್ರತಿ ಸಾರಿ ಪ್ರಯೋಗ ಮಾಡುವುದಕ್ಕಾಗುವುದಿಲ್ಲ. ಒಂದು ಶಾಶ್ವತ ವ್ಯವಸ್ಥೆಯನ್ನು ಆಲೋಚನೆ ಮಾಡೋಣ ಎಂಬ ದೃಷ್ಟಿಯಿಂದ ನೀವು ಹೇಳಿದ ಹಾಗೆ ಚುನಾಯಿತ ಸದಸ್ಯರು ಆಯ್ಕೆ ಮಾಡತಕ್ಕದ್ದು ಒಂದು ದೃಷ್ಟಿಯಿಂದ ಸರಿಯಲ್ಲ ಎಂದು ಏತಕ್ಕೆ ನನಗೆ ಅನ್ನಿಸುತ್ತದೆಂದರೆ, ಆತ ಪ್ರಭಾವಿತ ವ್ಯಕ್ತಿಯಾಗಿದ್ದರೆ ಉಳಿದ ಸದಸ್ಯರನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಬಹುದೆಂಬುದು ಒಂದೇ ಕಾರಣ. ಉಳಿದ ಯಾವುದೇ ಕಾರಣದಿಂದ ಅಲ್ಲವೆಂಬುದು ಕೂಡ ನಮ್ಮ ಮನಸ್ಸಿನಲ್ಲಿ ಇರಬೇಕು.

ಶ್ರೀ ಕೆ. ಶಿವಮೂರ್ತಿ : ತಮ್ಮ ಅನುಭವದಲ್ಲಿ ಹಿಂದೆ ಜಿಲ್ಲಾ ಪರಿಷತ್ತಿನ ವ್ಯವಸ್ಥೆ ಆಯಿತಲ್ಲ; ಆಗ ಜಿಲ್ಲಾ ಪರಿಷತ್ ಅಧ್ಯಕ್ಷರ ಚುನಾವಣೆ ಆಯಿತು. ಆ ಸಂದರ್ಭದಲ್ಲಿ ಬಹಳ ಬುದ್ಧಿವಂತರು, ಮೇಧಾವಿಗಳು ಆಗಿರತಕ್ಕವರು ಯಾರೂ ಅಧ್ಯಕ್ಷರಾಗುವುದಕ್ಕೆ ಆಗಲಿಲ್ಲ. ಏನೋ ಆಶೀರ್ವಾದ ಅಥವಾ ಗುಂಪುಗಾರಿಕೆಯಿಂದ ಕೆಲವರು ಅಧ್ಯಕ್ಷರಾದರು.

ಅಧ್ಯಕ್ಷರಾದ ತಕ್ಷಣ ಪಾರ್ಟಿ ಸ್ಪಿರಿಟ್ ಹೊರಟು ಹೋಯಿತು. ಜನತಾದವರು ಕಾಂಗ್ರೆಸ್ ಕಡೆ ಬಂದರು, ಕಾಂಗ್ರೆಸ್‌ನವರು ವಿರೋಧ ಪಕ್ಷದಲ್ಲಿ ಕುಳಿತರು. ಅಲ್ಲಿ ಯಾವುದೇ ರೀತಿಯ ಪಾರ್ಟಿ ಸ್ಪಿರಿಟ್ ಇರಲಿಲ್ಲ. ಅಲ್ಲಿ ನೀತಿ ನಿಯಮ ಏನೂ ಇರಲಿಲ್ಲ. ದಡ್ಡನನ್ನು ತೆಗೆದುಕೊಂಡು ಹೋಗಿ ಪ್ರೆಸಿಡೆಂಟ್ ಮಾಡಿದರು. ಅವನು ಏನು ಹೇಳುತ್ತಾನೆ ಅದೇ ರೀತಿ ಕೆಲವು ಜನ ಅದರ ಫಲ ಊಟ ಮಾಡಿದರು. ಈ ರೀತಿ ಕೆಲವೇ ಜನ ಎಕ್ಸ್‌ಪ್ಲಾಯಿಟ್ ಮಾಡತಕ್ಕ ವ್ಯವಸ್ಥೆಗಿಂತ ಡೈರೆಕ್ಟ್ ಆಗಿ ಜನರಿಂದ ಚುನಾವಣೆ ಆಗತಕ್ಕದ್ದು ಬಹಳ ಸೂಕ್ತವೆಂದು ನನ್ನ ಅಭಿಪ್ರಾಯ. ಡಾ॥ ನಂಜಪ್ಪನವರು ಶಕ್ತಿವಂತರಿಗೆ ಅನುಕೂಲವಾಗುತ್ತದೆಂದು ಹೇಳಿದರು. ಡೈರೆಕ್ಟ್ ಎಲೆಕ್ಷನ್ ಆದರೆ ಶಕ್ತಿವಂತರ ಆ ಒಂದು ಪ್ರಾಬ್ಲಮ್ ಇರುವುದಿಲ್ಲ. ನೇರವಾಗಿ ಜನ ಇಂತಹವರೇ ಬೇಕು ಎಂದು 5 ವರ್ಷಕ್ಕೆ ಚುನಾವಣೆ ಮಾಡಿದರೆ ಜನತೆ ಮೇಲೆ ತಪ್ಪು ಹಾಕಬಹುದು. ಆ ಒಂದು ದೃಷ್ಟಿಯಿಂದ ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಯಲ್ಲಿ ತಮ್ಮದೇ ನೋಡಿ, ತಮ್ಮ ಜನತಾಪಾರ್ಟಿಯಲ್ಲೇ, ಜನತಾದಳದಲ್ಲೇ ಸ್ಪ್ಲಿಟ್ ಆಯಿತು. ಜನತಾ ಪಕ್ಷದಲ್ಲಿ ಇರುವವರೆ ವಿರೋಧ ಪಕ್ಷಗಳ ರೀತಿಯಲ್ಲಿ ವರ್ತನೆ ಮಾಡಿದರು.

ಛೇರ್ಮನ್ : ಈಗಾಗಲೇ 1 ಗಂಟೆ 40 ನಿಮಿಷ ಆಯಿತು. ನಿಮ್ಮ ಸಮಯ ಈ ರೀತಿ ಈಲ್ಡ್ ಆದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಪ್ರಮುಖವಾದ ಮಸೂದೆ, ವಿಚಾರ ಮಂಥನ ಆಗಬೇಕು.

ಛೇರ್ಮನ್ : ಮಂಥನ ನಾವು ಮಾಡುವಾಗ ಮಾತನಾಡಬೇಕು; ಬೇರೆಬೇರೆ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ಎರಡೂ ಕಡೆ ಅವರವರ ಅಭಿಪ್ರಾಯ ಮಂಥನ ಆಗುತ್ತಿದ್ದರೆ ಚೆಂದ. ಇಲ್ಲದಿದ್ದರೆ ಒಂದೇ ರೀತಿ ಹೋಗುತ್ತದೆ.

ಛೇರ್ಮನ್ : ಮಾನ್ಯ ಚಂದ್ರೇಗೌಡರೇ ಸಮಯ ಹೆಚ್ಚಿಗೆ ಹೋಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಅವರು ಇನ್ನೂ ಒಂದು ಗಂಟೆ ಹೆಚ್ಚು ಮಾತನಾಡಲಿ. ಇದರಲ್ಲಿ ಬಹಳ ಪ್ರಮುಖವಾದ ವಿಚಾರಗಳು ಇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಶಿವಮೂರ್ತಿಯವರು ಹೇಳಿದ ಹಾಗೆ ಎಲ್ಲಾ ಸ್ಥಿತಿ ಇಲ್ಲೂ ಇದೆಯಲ್ಲವೇ? ಹಾಗಿದ್ದರೆ ಮುಖ್ಯಮಂತ್ರಿಗಳನ್ನು ನೇರವಾಗಿ ಚುನಾವಣೆ ಮಾಡುವುದಕ್ಕಾಗುತ್ತದೆಯೇ ಎನ್ನುವುದು ಪ್ರಶ್ನೆ. ಅವರು ಮಾತನಾಡುತ್ತಾ ಚಿತ್ರದುರ್ಗದಲ್ಲಿ ಜಿಲ್ಲಾಪರಿಷತ್ತಿನ ಸ್ಥಿತಿ ಹೇಳಿದ್ದಾರೆ. ದಡ್ಡರು ಬಂದರು, ಅಧ್ಯಕ್ಷರು ಆದರು, ಬೆಂಬಲ ಇಲ್ಲದವರು ಅಧ್ಯಕ್ಷರು ಆದರು ಎಂದು ಹೇಳಿದರು. ರಾಜ್ಯ ಸರ್ಕಾರದಲ್ಲೂ ಇದೇ ರೀತಿ ಇದೆ. ಇಲ್ಲಿ ಏನಾದರೂ ನೇರವಾಗಿ ಎಲೆಕ್ಷನ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ. ಶಿವಮೂರ್ತಿ : ಅದಕ್ಕೇ ಶ್ರೀಮತಿ ಇಂದಿರಾಗಾಂಧಿಯವರು ರಾಷ್ಟ್ರಪತಿಗಳ ಚುನಾವಣೆಯನ್ನು ನೇರವಾಗಿ ಮಾಡಬೇಕು ಎಂದು ಹೇಳಿದರು. ಆ ವಾದವನ್ನು ತಾವು ಒಪ್ಪಲಿಲ್ಲ; ನಾವು ಒಪ್ಪಿದ್ದೇವೆ.

ಶ್ರೀ ಜೆ. ಸಿ. ಮಧುಸ್ವಾಮಿ : ಆ ಸಿಸ್ಟಮ್ ಇದ್ದದ್ದರಿಂದಲೇ ಅಮೇರಿಕಾದಲ್ಲಿ ಬಡ್ಜೆಟ್ ಪಾಸ್ ಆಗಿರಲಿಲ್ಲ. ಗೊತ್ತೇ ಸ್ವಾಮಿ?

ಶ್ರೀ ಡಿ. ಬಿ. ಚಂದ್ರೇಗೌಡ : ನಮ್ಮ ಶಿವಮೂರ್ತಿಯವರ ಗಮನಕ್ಕೆ ಒಂದೇ ಒಂದು ವಿಚಾರ ತರುತ್ತೇನೆ. ನಾನು ಆಂಧ್ರಪ್ರದೇಶಕ್ಕೆ ಹೋಗಿದ್ದೆ. ಅಲ್ಲಿ ನೇರ ಚುನಾವಣೆ ಇದೆ. ನನಗೆ ಆಶ್ಚರ್ಯವಾಯಿತು. ಜಿಲ್ಲಾಪರಿಷತ್ತಿನ ಅಧ್ಯಕ್ಷ ಚುನಾವಣೆಗೆ ಒಬ್ಬ ಅಭ್ಯರ್ಥಿ 2 ಕೋಟಿ ರೂಪಾಯಿ ಖರ್ಚು ಮಾಡಿದ್ದಾನೆ. Please bear it in mind. ನಾನು ಎಗ್ಸಾಜುರೇಷನ್‌ಗೆ ಹೇಳುತ್ತಾ ಇಲ್ಲ. ಇದೂ ನಮ್ಮ ಗಮನದಲ್ಲಿ ಇರಬೇಕು. ಅದು ನಿಮ್ಮ ನಮ್ಮ ಆರ್ಥಿಕ ಸ್ಥಿತಿಗೆ ನಿಲುಕುತ್ತದೆಯೇ ಎಂದು ಯೋಚನೆ ಮಾಡಬೇಕು. ಆಗ ಜಾತಿ ಪ್ರಧಾನ ಆಗುತ್ತದೆ, ಗರ್ವ ಪ್ರಧಾನ ಆಗುತ್ತದೆ, ಹಣ ಪ್ರಧಾನವಾಗುತ್ತದೆ, ಪಕ್ಷ ಪ್ರಧಾನವಾಗುತ್ತದೆ. ವ್ಯಕ್ತಿ ಪ್ರಧಾನವಾಗುವುದಿಲ್ಲ.

ಶ್ರೀ ಕೆ. ಎಸ್. ಕಾಳಮರಿಗೌಡ : ಮಂಡಲ ಪಂಚಾಯಿತಿ ಚುನಾವಣೆಗೆ 1 ಲಕ್ಷ ರೂಪಾಯಿ ಖರ್ಚು ಮಾಡುವವರು ಇದ್ದಾರೆ.

ಶ್ರೀ ಕೆ. ಶಿವಮೂರ್ತಿ : ಹಿಂದೆ ಕಾಂಗ್ರೆಸ್, ಜನತಾ ಪಕ್ಷಗಳ ಚುನಾವಣೆ ಆದಾಗ ಹೆಂಡ ಸಾರಾಯಿ ಹಾವಳಿ ಇರಲಿಲ್ಲ. ಜಿಲ್ಲಾ ಪರಿಷತ್ ಮಂಡಲ ಪಂಚಾಯತಿ ಚುನಾವಣೆ ಬಂದ ಮೇಲೆ ರಾಜಕೀಯ ಶುರು ಆಯಿತು. ಆದ್ದರಿಂದ ಜನಕ್ಕೇ ಬಿಡೋಣ. ಜನ ಯಾರನ್ನಾದರೂ ಚುನಾಯಿಸಲಿ. ಅಲ್ಲಿಂದ ರಾಜಕೀಯ ಶುರು ಆಯಿತು. ಅಲ್ಲಿಂದ ಹಾವಳಿ ಶುರು ಆಯಿತು. ಅದಕ್ಕೋಸ್ಕರ ಜನರಿಗೆ ಬಿಡೋಣ.

ಶ್ರೀ ಡಿ. ಬಿ. ಚಂದ್ರೇಗೌಡ : ನನ್ನ ಅಭಿಪ್ರಾಯವನ್ನು ನಾನು ಹೇಳಿದೆ. We have the say ; Only we have the say, you have the right of way. ಆದ್ದರಿಂದ ನೀವು ಆಲೋಚನೆ ಮಾಡಿ. ಇರತಕ್ಕ ಸ್ಥಿತಿಯ ಬಗ್ಗೆ ಪ್ರಾಂಜಲ ಮನಸ್ಸಿನಿಂದ ಚರ್ಚೆ ಮಾಡೋಣ. ಈಗ ಅದಕ್ಕಾಗಿ ಈ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗೆ ಮೀಸಲಾತಿ. ಸದಸ್ಯತ್ವ ಮೀಸಲಾತಿ ಮತ್ತು ಹುದ್ದೆ ಮೀಸಲಾತಿ - ಎರಡೂ ಇದೆ. ಹುದ್ದೆ ಮೀಸಲಾತಿ ಮತ್ತು ಸದಸ್ಯತ್ವ ಮೀಸಲಾತಿಯಲ್ಲಿ ಆಗಿರತಕ್ಕ ತೊಡಕುಗಳನ್ನು ಆಲೋಚನೆ ಮಾಡೋಣ. ನಾನು ಏನು ಹೇಳುತ್ತೇನೆ ಎಂದರೆ ಹುದ್ದೆ ಮೀಸಲಾತಿಗೆ ನಮ್ಮದು ವಿರೋಧ ಇಲ್ಲ. ಪರಿಸ್ಥಿತಿ ಎಲ್ಲಿದೆ ಎಂದರೆ ನಾನು ತೀರ್ಥಹಳ್ಳಿ ಕ್ಷೇತ್ರದ ಪ್ರತಿನಿಧಿ. ಆದರೆ ನನ್ನದು ಮೂಡಿಗೆರೆ ತಾಲ್ಲೂಕು. ಒಂದು ರಿಸರ್ವ್ ಕಾನ್‌ಸ್ಟಿಟ್ಯುಯೆನ್ಸಿ. ಇನ್ನೊಂದು, ರಿಸರ್ವೇಷನ್‌ಗೆ ಸಿಕ್ಕದೇ ಇರುವಷ್ಟು ಹರಿಜನ ಗಿರಿಜನರ ಸಂಖ್ಯೆ. ನಮ್ಮ ಶಾಸನದಲ್ಲಿ ಸೆಕ್ಷನ್ 5ರಲ್ಲಿ ಸ್ಥಾನಗಳನ್ನು ದಾಮಾಷ ಮೀಸಲಿಡತಕ್ಕದ್ದು. ನನಗೆ ಗೊತ್ತಿರುವ ಹಾಗೆ, ಕರ್ನಾಟಕ ರಾಜ್ಯದಲ್ಲಿ ಶೇಕಡ 15ರಷ್ಟು ಪರಿಶಿಷ್ಟ ಜಾತಿ, ಶೇಕಡ 3ರಷ್ಟು ಪರಿಶಿಷ್ಟ ವರ್ಗ - ಒಟ್ಟು ಶೇಕಡ 18ರಷ್ಟು ಮೀಸಲಾತಿ ಇದೆ. ನನ್ನ ಮಾಹಿತಿ ಸರಿಯಾಗಿದ್ದರೆ, ಈಗ ಶೇಕಡವಾರು ದೃಷ್ಟಿಯಿಂದ ರಾಜ್ಯದ ಹರಿಜನ-ಗಿರಿಜನರ ಸಂಖ್ಯೆ ಶೇಕಡ 23. 1991ರ ಜನಗಣತಿಯ ಪ್ರಕಾರ ಶೇಕಡ 23ರಷ್ಟು ಆಗಿದೆ. ರಾಜ್ಯಾಂಗದ ತಿದ್ದುಪಡಿಯಲ್ಲಿ ಮಿನಿಮಮ್ ಹೇಳಿದ್ದಾರೆ. ಮಾಕ್ಸಿಮಮ್ ಹೇಳಿಲ್ಲ. ಶೇಕಡ 18 ಇರಲೇಬೇಕು. ಅದು 23 ದಾಟಿದರೆ ತಪ್ಪಲ್ಲ. ಮಾನ್ಯ ಕರಿಯಣ್ಣನವರಿಗೆ ಗೊತ್ತು ನನಗೆ ಬರತಕ್ಕ ಕ್ಷೇತ್ರದಲ್ಲಿ ಶೇಕಡವಾರು ದೃಷ್ಟಿಯಿಂದ ಹರಿಜನ-ಗಿರಿಜನರ ಸಂಖ್ಯೆ ಐದನ್ನು ಮೀರುವುದಿಲ್ಲ. ನನ್ನ ತಾಲ್ಲೂಕು ಮೂಡಿಗೆರೆಗೆ ಬಂದರೆ ಇದು ಶೇಕಡ 30ರಷ್ಟು ಇದೆ. ತಪ್ಪಿದ್ದರೆ ತಾವು ವಿವರ ತರಿಸಿಕೊಳ್ಳಿ. ಮೂಡಿಗೆರೆಯಲ್ಲಿ ಅದು 24 ಪರ್ಸೆಂಟ್ ಮೀಸಲಾತಿ ಇತ್ತು. ಈಗ ಅದು ಇನ್ನೂ ಸ್ವಲ್ಪ ಜಾಸ್ತಿಯಾಗಿರಬಹುದು. ಇನ್ನು ಸದಸ್ಯರ

ಹುದ್ದೆ ಮೀಸಲಾತಿ. ತಾವು ಶಾಸನದಲ್ಲಿ ಹೇಳಿರುವಂತೆ ಒಟ್ಟು ಜನಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಹಾಗೆ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯು ಗ್ರಾಮಪಂಚಾಯಿತಿ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು.'' ಇದು ತಾವು ಹೇಳಿರತಕ್ಕದ್ದು. ಇದರಲ್ಲಿ ಬರತಕ್ಕ ತೊಂದರೆಯೇನು ಎನ್ನುವುದನ್ನು ನಾನು ತಮಗೆ ಹೇಳುತ್ತೇನೆ. ಶೇಕಡ 30ರಷ್ಟು ಮೂಡಿಗೆರೆಯಲ್ಲಿ ಅಥವಾ ಬೇಲೂರಿನಲ್ಲಿರಬಹುದು, ಏಕೆಂದರೆ ಅದು ಜನಸಂಖ್ಯೆಗೆ ಅನುಗುಣವಾಗಿ, ನೀವು ಇಲ್ಲಿ ಶೇಕಡ 5ರಷ್ಟು ಮಾಡುವುದಿಲ್ಲ. ಇಲ್ಲಿ ಶೇಕಡ 18 ಮಾಡುತ್ತೀರಿ. ಇಲ್ಲಿ 18ಕ್ಕೆ ಕಡಿಮೆಯಿಲ್ಲದೆ, ಕೆಲವು ಕಡೆ 33-35ರವರೆಗೆ ಹೋಗಬಹುದು. ಜನಸಂಖ್ಯೆಗೆ ಆಧಾರವಾಗಿ ಒಂದು ಕ್ಷೇತ್ರದಲ್ಲಿ ಶೇಕಡ 35ರಷ್ಟು ಮೀಸಲಾತಿಯನ್ನು ಕೊಟ್ಟರೆ ಮುಂದೆ ಬ್ಯಾಕ್‌ವರ್ಡ್ ಕ್ಲಾಸ್‌ಗೆ ರಿಸರ್ವೇಶನ್. ಇದು 1971ರ, 1981ರ ಮತ್ತು 1991ರ ಜನಗಣತಿಯಲ್ಲಿಯೂ ಸಿಗುವುದಿಲ್ಲ. ಯಾರು ಬ್ಯಾಕ್‌ವರ್ಡ್ ಕ್ಲಾಸ್ಟ್ ಗೊತ್ತಿಲ್ಲ. ಸೆನ್ಸಸ್‌ನಲ್ಲಿ ಆ ಜಾತಿಯನ್ನು ಆಧರಿಸಿ ಮಾಡಿದ್ದಾರೆ. ಆದ್ದರಿಂದ ಬ್ಯಾಕ್‌ವರ್ಡ್‌ಕ್ಲಾಸ್ ಯಾರೆಂದು ಗೊತ್ತಿಲ್ಲ. ಮಂಡಲ್ ಕಮಿಷನ್‌ನಲ್ಲಿ ರಾಷ್ಟ್ರೀಯವಾಗಿ ಶೇಕಡ 52ರಷ್ಟು ಹಿಂದುಳಿದವರು ಇದ್ದಾರೆಂದು ಹೇಳುತ್ತಾರೆ. ಅದರ ದಾಮಾಷ ಅರ್ಧ ಶೇಕಡ 27ರಷ್ಟು ರಾಜ್ಯಾಂಗದ 15(4) ಮತ್ತು 16(4) ವಿಧಿಯಂತೆ ಹಿಂದುಳಿದವರಿಗೆ ಮೀಸಲಾತಿ. ಚಿನ್ನಪ್ಪರೆಡ್ಡಿ ಆಯೋಗದಲ್ಲಿ ಕರ್ನಾಟಕದಲ್ಲಿ ಶೇಕಡ 38ರಷ್ಟು ಹಿಂದುಳಿದವರು ಇದ್ದಾರೆಂದು ಹೇಳಿದ್ದಾರೆ. ಆ ವರದಿಯನ್ನು ನಾವಿನ್ನೂ ಒಪ್ಪಿಕೊಂಡಿಲ್ಲ. All these figures are subject to correction. I am quoting out of my memory. If I am correct, ಶೇಕಡ 52 ರಾಷ್ಟ್ರೀಯ ಸರಾಸರಿ. ಕರ್ನಾಟಕದ ಚಿನ್ನಪ್ಪರೆಡ್ಡಿ ಆಯೋಗದ ವರದಿಯಂತೆ ಶೇಕಡ 38. ಈಗಿರತಕ್ಕ ಮೀಸಲಾತಿ ಶೇಕಡ 68. ಶೇಕಡ 92 ಮೀಸಲಾತಿ ಏನಿದೆ, ಅದು ಬೇರೆ.

Sri M. Y. Ghorpade : Don't confuse. SC/ST and OBC, take separately. Then there will be no confusion. The comparison should be for OBC and not including SC/ST.

ಶ್ರೀ ಡಿ. ಬಿ. ಚಂದ್ರೇಗೌಡ : ಇರಲಿ. ಒಂದು ಕಡೆ ತಾವು ಸಂಖ್ಯೆಯನ್ನು ಆಧರಿಸಿ ಏನು ಮೀಸಲಾತಿಯನ್ನು ಇಟ್ಟಿದ್ದೀರಿ ಅದನ್ನು ನಾನೀಗ ಓದಿದಹಾಗೆ, ಸೆಕ್ಷನ್(5) ಸಬ್ ಸೆಕ್ಷನ್ (1) ಈ ಆಧಾರದ ಮೇಲೆ ಕೆಲವು ಕ್ಷೇತ್ರಗಳಲ್ಲಿ ಷೆಡ್ಯೂಲ್ಡ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್‌ಟ್ರೈಬ್ ಮೀಸಲಾತಿ ಶೇಕಡ 35ನ್ನು ತಲುಪಬಹುದು. ಆದರೆ ಮಿನಿಮಂ 18 ಇರುತ್ತದೆ. ಹೀಗೆ ಅದು ತಲುಪಿದರೆ ಮುಂದೆ ನೀವು ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿಯನ್ನು ಗಮನದಲ್ಲಿಟ್ಟುಕೊಂಡು ಬ್ಯಾಕ್‌ವರ್ಡ್ ಕ್ಲಾಸಸ್‌ದ್ದೂ ಕೂಡ ಗಮನದಲ್ಲಿಟ್ಟುಕೊಂಡರೆ, ಈ ಮೀಸಲಾತಿಯು ಎಲ್ಲಿಗೆ ನಿಲುತ್ತದೆ? ಸರ್ವೋಚ್ಚ ನ್ಯಾಯಾಲಯ ಇತ್ತೀಚೆಗೆ ಮಂಡಲ್ ಕಮಿಷನ್ ಬಗ್ಗೆ ತೀರ್ಪು ಕೊಡುವಾಗ, ಶೇಕಡ 22ರಷ್ಟು ಎಸ್‌ಸಿ ಎಸ್‌ಟಿಗೆ, ಶೇಕಡ 27ರಷ್ಟು ಹಿಂದುಳಿದ ವರ್ಗಗಳಿಗೆ, ಹೀಗೆ ಒಟ್ಟು 49ರಷ್ಟು ಆಗಬೇಕು - ಆ ಕಾರಣ ಇದು 50ಕ್ಕೆ ಮೀರಬಾರದು. ಅದೇ ಕಾರಣಕ್ಕಾಗಿ ಆರ್ಥಿಕ ಮೀಸಲಾತಿಯ ಚರ್ಚೆ, ಸರ್ವೋಚ್ಚ ನ್ಯಾಯಾಲಯದಲ್ಲಿ ಆಗಲಿಲ್ಲ. ಈಗ ನೀವು ಬ್ಯಾಕ್‌ವರ್ಡ್‌ಕ್ಲಾಸಸ್‌ಗೆ ರಿಸರ್ವೇಶನ್ ಶೇಕಡ 33ರಷ್ಟು ಎಂದು ಹೇಳುತ್ತೀರಿ.

ಶ್ರೀ ಎಂ. ವೈ. ಘೋರ್ಪಡೆ : ಈ ಬಗ್ಗೆ ತಮ್ಮೆಲ್ಲರ ಕಡೆಯಿಂದ ಸ್ಪಷ್ಟವಾದಂಥ ಒಂದು ಮಾರ್ಗದರ್ಶನ ಬರಬೇಕೆಂಬ ದೃಷ್ಟಿಯಿಂದ ಒಂದು ಮಾತನ್ನು ಕೇಳುತ್ತಾ ಇದ್ದೇನೆ. ಏನೆಂದರೆ, ಎಸ್‌ಸಿ ಎಸ್‌ಟಿ ಮೀಸಲಾತಿಯು ಏನಿದೆ, ಇನ್‌ಪ್ರಪೋರ್ಶನ್ ಟು ದಿ

ಪಾಪ್ಯುಲೇಶನ್ ಡಿಫರೆಂಟ್ ಏರಿಯಾದಲ್ಲಿ ಕೆಲವು ಕಡೆ 23 ಪರ್‌ಸೆಂಟ್‌ನಷ್ಟು ಆಗಬಹುದು. ಆದರೆ ನಾವು ಇದರಲ್ಲಿ ಸೇರಿಸಿರತಕ್ಕಂಥಾದ್ದು ಮಿನಿಮಂ ಇಟ್ಟಿದ್ದೇವೆ. ಅದೇ ಇಡೀ ರಾಜ್ಯದಲ್ಲಿ ಸರಾಸರಿ ತೆಗೆದುಕೊಂಡರೆ 23 ಪರ್‌ಸೆಂಟ್ ಆಗುತ್ತದೆ. ನಾವು ಎಲ್ಲಾ ಕ್ಷೇತ್ರಗಳಲ್ಲಿ 15ರ ಬದಲು 23 ಪರ್‌ಸೆಂಟ್ ಮಾಡಿದ್ದರೆ ಅದು ಬೇರೆ ರೀತಿಯಲ್ಲಿ ಆಗುತ್ತಿತ್ತು. ಅದನ್ನು ಮಾಡಬಹುದಾಗಿತ್ತು. ನಮಗೆ ಇರುವ ತೊಂದರೆ ಅಂದರೆ ರಾಜ್ಯಾಂಗದ ಅಮೆಂಡ್‌ಮೆಂಟ್‌ನಲ್ಲಿ ಆಯಾಯ ಭಾಗದಲ್ಲಿ ಏನು ಪ್ರಪೋರ್ಶನ್ ಇದೆ, ಅದರ ಪ್ರಕಾರವೇ ಮಾಡಬೇಕು, ಇಲ್ಲದೇ ಹೋದರೆ 18 ಇದ್ದುದನ್ನು 23 ಎಂದು ಮಾಡಿದರೆ ಮುಗಿದು ಹೋಯಿತು. ಆದ್ದರಿಂದ ಅದರ ಪ್ರಕಾರವೇ ನಾವು ಹೋಗುವುದಾದರೆ ಕೆಲವು ಕ್ಷೇತ್ರಗಳಲ್ಲಿ 23ಕ್ಕೂ ಜಾಸ್ತಿ ರಿಸರ್ವೇಶನ್ ಮಾಡಬೇಕಾಗುತ್ತದೆ. ಅದರ ಜೊತೆಗೆ ನಾವು ಮಿನಿಮಮ್ ಏನು ಇಟ್ಟಿದ್ದೇವೆ, ಅದು ಎಕ್ಸ್‌ಟ್ರಾ. ಎಲ್ಲೆಲ್ಲಿ 18 ಪರಸೆಂಟ್‌ಗಿಂತ ಕಡಿಮೆ ಇದೆ, ಅಷ್ಟರ ಮಟ್ಟಿಗೆ ಹೆಚ್ಚಿಗೆ ರಿಸರ್‌ವೇಶನ್‌ನ್ನು ಎಸ್‌ಸಿಎಸ್‌ಟಿಗೆ ಕೊಟ್ಟ ಹಾಗೆ ಆಯಿತು. 23 ಪರ್‌ಸೆಂಟ್‌ನ ಪ್ರಪೋರ್ಶನ್ ಏನಿದೆ ಅದನ್ನು ಕೊಡಲೇಬೇಕು. ಆದರೆ ಮಿನಿಮಮಂ 18 ಏನು ನಾವು ಇಟ್ಟಿದ್ದೇವೆ, ಆ ಭಾಗದಲ್ಲಿ ಎಸ್‌ಸಿಎಸ್‌ಟಿ 18ಕ್ಕಿಂತ ಕಡಿಮೆ ಇದ್ದರೆ ಅಷ್ಟರಮಟ್ಟಿಗೆ ನಾವು ಅವರಿಗೆ ಎಕ್ಸ್‌ಟ್ರಾ ರಿಸರ್ವೇಶನ್ ಮಾಡಿದ ಹಾಗೆ ಆಯಿತು. ಇದನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು. ಈಗ ಎಕ್ಸ್‌ಟ್ರಾ ರಿಸರ್ವೇಶನ್‌ನನ್ನು ಮಾಡಬೇಕೇ ಬೇಡವೇ ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ಇದನ್ನು ನಾವು ಬಿಲ್‌ನಲ್ಲಿ ಹಾಕಲು ಕಾರಣ ಏನೆಂದರೆ, ಅವರ ಜನಸಂಖ್ಯೆ ಎಷ್ಟೇ ಇದ್ದರೂ 18 ಪರ್‌ಸೆಂಟ್ ಪ್ರಕಾರ ನಾವು ಇಲ್ಲಿಯವರೆಗೂ ನಡೆದುಕೊಂಡು ಬಂದಿದ್ದೇವೆ. ಅವರಿಗೆ ಅಭ್ಯಾಸವಾಗಿದೆ, ಆದಕಾರಣ ನಾವು ಅದನ್ನು ತಪ್ಪಿಸಿದರೆ ಅಥವಾ ಏಕಾಏಕಿ ನಿಲ್ಲಿಸಿದರೆ ಅಥವಾ 5 ಪರ್‌ಸೆಂಟ್‌ಗೆ ಇಳಿಸಿದರೆ, ಏನು ಆಗಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕು. ನಾವು ಈಗ ಸಲಹೆ ಮಾಡಿದ ಪ್ರಕಾರ 23 ಪರ್‌ಸೆಂಟ್‌ಗಿಂತ ಜಾಸ್ತಿ ಕೊಡುವುದು ಎಲ್ಲಿ ಅಂದರೆ, ಯಾವ ಕ್ಷೇತ್ರದಲ್ಲಿ ಮಿನಿಮಮ್ ಅನ್ವಯವಾಗುತ್ತದೆ ಮತ್ತು ಮಿನಿಮಮ್‌ಗಿಂತ ಕಡಿಮೆ ಜನಸಂಖ್ಯೆ ಇದೆ, ಅಷ್ಟು ಮಾತ್ರ. ಅದೇ ರೀತಿಯಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್ ರಿಸರ್‌ವೇಶನ್ ತೆಗೆದುಕೊಂಡಾಗ, ಚಿನ್ನಪ್ಪರೆಡ್ಡಿ ಕಮಿಶನ್ ವರದಿ ಪ್ರಕಾರ 38 ಪರ್‌ಸೆಂಟ್‌ನಷ್ಟು ಇದೆ ಎಂದು ನೀವೇ ಹೇಳಿದಿರಿ. ನಮ್ಮಲ್ಲಿ ಸದ್ಯಕ್ಕೆ ಓಬಿಸಿ 50 ಪರ್‌ಸೆಂಟ್ ಇದೆ. ಹೀಗೆ ಎಸ್‌ಸಿಎಸ್‌ಟಿ ಎಲ್ಲಾ ಸೇರಿಸಿದರೆ ಅದು ಒಟ್ಟು 68ಕ್ಕೆ ಹೋಗುತ್ತದೆ. ಓಬಿಸಿ ಬಗ್ಗೆ ಮಾತ್ರ ಹೇಳುವುದಾದರೆ, 50 ಪರ್ಸೆಂಟ್ ಆಗುತ್ತದೆ. ಚಿನ್ನಪ್ಪರೆಡ್ಡಿ ವರದಿ ಪ್ರಕಾರ 38 ಪರ್‌ಸೆಂಟ್ ಈಗ ಜಾರಿಯಲ್ಲಿ ಇಲ್ಲ: ಮುಂದೆ ಏನಾಗುತ್ತದೆ ಅದು ನಮಗೆ ಗೊತ್ತಿಲ್ಲ.

ಆದಕಾರಣ ಏನೇ ಆದರೂ ಕೂಡ 33 ಪರ್‌ಸೆಂಟ್ ಆದರೂ ಓಬಿಸಿ ಇರುತ್ತಾರೆ, ಈ ಒಂದು ಅಸಂಶನ್ ಮೇಲೆ ನಾವು ಆ ಒಂದು ರಿಸರ್ವೇಶನ್ ಸಜೆಶನ್ ಇಟ್ಟಿದ್ದೇವೆ. ಅದರಲ್ಲಿ ಇವೊತ್ತು ನಾವು ಐಡೆಂಟಿಫಿಕೇಶನ್ ಮಾಡಲು ಹೋಗಿಲ್ಲ. ಹೋಗಲು ಬರುವುದೂ ಇಲ್ಲ. ಏಕೆಂದರೆ, ಎರಡೆರಡು ಡೆಫಿನಿಷನ್ ನಾವು ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಕೊಡಲು ಬರುವುದಿಲ್ಲ. ಆದಕಾರಣ ಸಂಪೂರ್ಣವಾಗಿ ನಾವು ಬ್ಯಾಕ್‌ವರ್ಡ್‌ಕ್ಲಾಸ್ ರಿಸರ್ವೇಶನ್ ಕೈಬಿಟ್ಟರೆ ಆಗ ಕೂಡ ನಾವೆಲ್ಲರೂ ಆ ಒಂದು ಅಪವಾದಕ್ಕೆ ಗುರಿಯಾಗಲು ಸಾಧ್ಯವಾಗುತ್ತದೆ. ಈಗ ರಿಸರ್‌ವೇಶನ್ ಕೊಡುವುದಾದರೆ ಎಷ್ಟು ಕೊಡಬೇಕೆಂಬುದು ಇದೆ. ಆದ ಕಾರಣ, 33 ಪರ್‌ಸೆಂಟ್ ಏನಿದೆ, ಅದು ಯಾವ ಡೆಫಿನಿಷನ್ ಪ್ರಕಾರವಾದರೂ ಅದಕ್ಕಿಂತ ಕಡಿಮೆ ಆಗಲಿಕ್ಕಿಲ್ಲ ಎಂದು ಒಂದು ಬೇಸಿಸ್‌ನ ಮೇಲೆ ನಾವು ಇಟ್ಟಿದ್ದೇವೆ.

4.45 ಪಿ. ಎಂ.

ಇದನ್ನು ಎಸ್.ಸಿ., ಎಸ್.ಟಿ ರಿಸರ್ವೇಶನ್ಸ್‌ಗೆ ನಾವು ಜಂಟಿ ಮಾಡುವುದು ಬೇಡ. ಮತ್ತೆ ಯಾವುದೋ ಒಂದು ಭಾಗದಲ್ಲಿ ಜಾಸ್ತಿ ಎಸ್‌ಸಿ ಎಸ್‌ಟಿ ರಿಸರ್ವೇಷನ್ಸ್ ಕೊಡಬೇಕಾದರೆ, ಇಲ್ಲಿ ಇದನ್ನು ಸೇರಿಸಿ ಜಾಸ್ತಿಯಾಗುತ್ತದೆ ಎಂಬ ಒಂದೇ ವಾದದ ಮೇಲೆ ನಾವು ಇದನ್ನು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ನಾನು ಸ್ಪಷ್ಟ ಪಡಿಸುತ್ತಿರುವುದೇನೆಂದರೆ, ನಮ್ಮ ಸಲಹೆ ಪ್ರಕಾರ, ಇಲ್ಲಿ ಆ ಮಿನಿಮಂ ಇಡಬೇಕೇ ಬೇಡವೇ ಎಂಬ ಪ್ರಶ್ನೆ ಇದೆ ನೀವು ಹೇಳಬಹುದು, ಆ ಮಿನಿಮಂ ಇಡುವುದು ಬೇಡ, ಅಲ್ಲಿ ಎಷ್ಟು ಪರ್ಸೆಂಟೇಜ್ ಇದೆಯೋ ಅದರ ಪ್ರಕಾರ ಕೊಡಿ ಎಂದು ಹೇಳಬಹುದು. You may take that stand and say give according to the proportion. ಅಂದರೆ, 35 ಪರ್ಸೆಂಟ್ ಇದ್ದಕಡೆ 35 ಕೊಡಿ, 5 ಪರ್ಸೆಂಟ್ ಇದ್ದಕಡೆ 5 ಪರ್ಸೆಂಟ್ ಕೊಡಿ ಎಂದು ಹೇಳಬಹುದು. ಈಗ ಕೆಲವರು ಹರಿಜನರೇ ಇಲ್ಲ, ಅಂತಹ ಕಡೆ ಏನು ಹೇಳುತ್ತೀರಿ ಎಂದು ಕೇಳುತ್ತಾರೆ. ಹರಿಜನರು ಇಲ್ಲ ಎನ್ನುವ ಪ್ರಶ್ನೆ, ನನಗೆ ತಿಳಿದಮಟ್ಟಿಗೆ ಬರುವುದೇ ಇಲ್ಲ. ಏನಿದ್ದರೂ ಪರ್ಸೆಂಟೇಜ್ ಹೆಚ್ಚೂ ಕಡಿಮೆ ಇರಬಹುದು. The question is in addition to the proportion. ನಾವು ಈ ವಾದಕ್ಕೆ ಒಳಪಡಬೇಕಾದ್ದಿಲ್ಲ. ಏಕೆಂದರೆ, ಅದು ಸಂವಿಧಾನದ ತಿದ್ದುಪಡಿಯಲ್ಲಿದೆ. ಅದರ ಜೊತೆಗೆ 18 ಪರ್ಸೆಂಟ್ ರಿಸರ್ವೇಷನ್ ಏನು ಕೊಡುತ್ತಿದ್ದೇವೆ, ಅದನ್ನು ಮಾಡುವುದರಲ್ಲಿ, ಏನು ಸಾಧಕ ಭಾದಕಗಳಿವೆ ಎನ್ನುವುದರ ಬಗ್ಗೆ ಹೇಳಿ.

ಶ್ರೀ ಕೆ. ಶಿವಮೂರ್ತಿ : ರಿಸರ್ವೇಷನ್ ಕೊಡಬೇಕಾದರೆ, 15 ಪರ್ಸೆಂಟ್, 18 ಪರ್ಸೆಂಟ್, ಇತರೇ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಕೊಡಬೇಕಾದರೆ, ಪಾಪ್ಯುಲೇಷನ್ ನೋಡಿ ಕೊಡಬೇಕಾಗುತ್ತದೆ, ಇದಕ್ಕೆ 5 ಪರ್ಸೆಂಟ್ ಇಳಿಸಬೇಕಾಗುತ್ತದೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದರು. ನಾನು ಕೇಳುತ್ತಿದ್ದೇನೆ. ಏನೆಂದರೆ, ಸಂವಿಧಾನದಲ್ಲಿ ಇಷ್ಟು ಎಂದು ನಿಖರವಾಗಿ ಹೇಳಿದ್ದಾರೆ. ತಾವು ಯಾವ ಲೆಕ್ಕದ ಆಧಾರದ ಮೇಲೆ ಹೇಳುತ್ತಿದ್ದೀರಿ. ಸಂವಿಧಾನದ ಪ್ರಕಾರ ಹೇಳುತ್ತಿದ್ದೀರೋ, ಕ್ಷೇತ್ರಾವಾರು ರಿಸರ್ವೇಷನ್ ಹೇಳುತ್ತಿದ್ದೀರೋ ಅಥವಾ ಯಾವ ರಿಸರ್ವೇಷನ್ ಹೇಳುತ್ತೀರಿ. ತಾವು ಹೇಳುವುದನ್ನು ನಿಖರವಾಗಿ ಹೇಳಬೇಕಾಗುತ್ತದೆ. Reservation cannot be based on presumption or assumption.

Sri M. Y. Ghorpade : The difficulty is areawise. Constituency wise ನಾವು ಕೊಡಬೇಕಾಗುತ್ತದೆ, Statewise ಕೊಡುವುದಾದರೆ, ತೊಂದರೆ ಇಲ್ಲ. 18 ಇದ್ದದ್ದು 23 ಮಾಡುತ್ತೇವೆ.

ಶ್ರೀ ಕರಿಯಣ್ಣ : ಅವರು ಹೇಳಿದ್ದು ಸರಿ.

ಶ್ರೀ ಕೆ. ಶಿವಮೂರ್ತಿ : ನಾನು ಒಪ್ಪುತ್ತೇನೆ. ಆದರೆ, ಹಿಂದೆ ಜಿಲ್ಲಾಪರಿಷತ್ತಿನವರು ಎಸ್‌ಸಿ ಎಸ್‌ಟಿ ಕ್ಷೇತ್ರ ಎಂದು ಮಾಡಿದ್ದಾರೆ. ಆದರೆ, ಎಸ್‌ಸಿ ಕ್ಷೇತ್ರದಲ್ಲಿ , ಎಸ್.ಟಿ.ಯವರು ಕಂಟೆಸ್ಟ್ ಮಾಡಿದ್ದಾರೆ. SCs are different, STS are different. If you want to earmark the Constituency, You must earmark the constituency to the SC alone and SC alone can contest. If you want to earmark the constituency for STs, you have to earmark for STs alone. ಅವರಿಬ್ಬರಿಗೂ ಜಗಳ ಬಂದಿದೆ. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತಿಯಲ್ಲಿ ಯಾವುದು ಎಸ್‌ಟಿ ಕ್ಷೇತ್ರ,

ಯಾವುದು ಎಸ್‌ಸಿ ಕ್ಷೇತ್ರ ಎಂದು ದೊಡ್ಡದಾದ ಇದೆ. ಮಾನ್ಯ ರಂಗನಾಥ ಸಾಹೇಬರು ಇಲ್ಲಿದ್ದಾರೆ, ದಯಮಾಡಿ ಅವರು ಹೇಳಬೇಕು. ಈ ಮಸೂದೆ ಬಗ್ಗೆ ಚರ್ಚೆ ನಡೆಯತಕ್ಕ ಸಂದರ್ಭದಲ್ಲಿ ಇದನ್ನು ಕ್ಲಾರಿಫೈ ಮಾಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ಎಸ್.ಟಿ. ಡಯಾಗ್ನಲ್ ಎಸ್.ಟಿ ಎಂದು ಇದೆ. ಅವರವರ ಜನಸಂಖ್ಯೆ ಪ್ರಕಾರ ರಿಸರ್ವ್ ಮಾಡುವುದರಲ್ಲಿ ಏನೂ ತೊಂದರೆ ಇಲ್ಲ.

ಶ್ರೀ ಕೆ. ಶಿವಮೂರ್ತಿ : ಎಸ್‌ಸಿ ಕ್ಷೇತ್ರದಲ್ಲಿ ಎಸ್‌ಟಿಯವರು ಬಂದು ಕಂಟೆಸ್ಟ್ ಮಾಡುವುದಕ್ಕೆ ನಿಂತಿದ್ದಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಕೋರ್ಟ್ ಅಪೆಲ್ಡ್ ಮಾಡಿದೆ. ತುಮಕೂರಿನಲ್ಲಿ ಇದು ಆಗಿದೆ.

ಶ್ರೀ ಎಸ್. ಹೆಚ್. ಕೌಜಲಗಿ : ಕೋರ್ಟ್ ತೀರ್ಮಾನವಾಗಿದೆ, ನೀವು ಕೋರ್ಟ್ ತೀರ್ಮಾನ ನೋಡುವುದಕ್ಕೂ ತಯಾರಿಲ್ಲ ಎಂದರೆ, ನಾನು ಏನು ಮಾಡುವುದು.

ಶ್ರೀ ಕೆ. ಹೆಚ್. ರಂಗನಾಥ್(ಲೋಕೋಪಯೋಗಿ ಸಚಿವರು) : ಏನೆಂದು ಅಪೆಲ್ಡ್ ಮಾಡಿದ್ದಾರೆ. ಅವರು ಹೇಳುವುದು ಸರಿ. ಹೊಸ ಬಿಲ್‌ನಲ್ಲಿ ಬೇರೆ ರೀತಿ ಇದೆ. ಎಸ್‌ಟಿನಲ್ಲಿ ಸಂಖ್ಯೆ ಇಲ್ಲದವರು, ಎಸ್‌ಸಿ ಎಂದು ರಿಸರ್ವ್ ಮಾಡಿದರೆ ಸುಮ್ಮನೆ ಇರುತ್ತಾರೆಯೇ. ಎಸ್‌ಸಿ ಬಾರ್ ಎಸ್‌ಟಿ ಎಂದು ಹಾಕಿ, ತೊಂದರೆ ಬಂತು ಎಂದು ಹೇಳುವುದು. ಈಗ ಆ ರೀತಿ ಆಗುವುದಿಲ್ಲ. ಎಸ್‌ಟಿ ಕ್ಷೇತ್ರವೇ ಬೇರೆಯಾಗುತ್ತದೆ, ಎಸ್‌ಸಿ ಕ್ಷೇತ್ರವೇ ಬೇರೆ ಆಗುತ್ತದೆ. ಇದಕ್ಕೆ ತೊಂದರೆ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ತೊಂದರೆ ಏನೆಂದರೆ, ಸೆಕ್ಷನ್ 5ನ್ನು ಓದುತ್ತೇನೆ. ಗ್ರಾಮಪಂಚಾಯ್ತಿಯಲ್ಲಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗಾಗಿ ಸ್ಥಾನಗಳನ್ನು ಮೀಸಲಿಡತಕ್ಕದ್ದು ಮತ್ತು ಪಂಚಾಯ್ತಿ ಪ್ರದೇಶದಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆ ಯಾವ ಅನುಪಾತದಲ್ಲಿದೆಯೋ ಹಾಗೆಯೇ ಮೀಸಲಾತಿಯೂ ಕೂಡ. ಸ್ಥಾನಗಳ ಸಂಖ್ಯೆ ಗ್ರಾಮಪಂಚಾಯ್ತಿಯ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಅದೇ ಅನುಪಾತದಲ್ಲಿರುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ. ಶೃಂಗೇರಿ ಮತ್ತು ತೀರ್ಥಹಳ್ಳಿ ಕ್ಷೇತ್ರದಲ್ಲಿ, SC percentage is below 5%. Is it the reservation? In Mudigere the SC population is more than 28 or 30%. Should there be reservation of 30%? ಈ ಕ್ಲಾರಿಫಿಕೇಷನ್ ನಮಗೆ ಸಿಕ್ಕುತ್ತಾ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್ : ವಿರೋಧಪಕ್ಷದ ನಾಯಕರ ಜಿಲ್ಲೆಯಲ್ಲಿ ಎಸ್‌ಸಿ 9 ಪರ್ಸೆಂಟ್ ಇದೆ. ಅಲ್ಲಿ ರಿಸರ್ವೇಷನ್ ಆಗಿದೆ; ಮೊದಲು ಇರಲಿಲ್ಲ. 1962ರ ಡೀಲಿಮಿಟೇಷನ್ ಕಮಿಷನ್ ನಿರ್ಣಯದಲ್ಲಿ ಎಲ್ಲಾ ಜಿಲ್ಲೆಗೂ ಇರಬೇಕೆಂದು ಆಗಿ, ಎಲ್ಲಾ ಜಿಲ್ಲೆಗಳಿಗೂ ಆಗಿದೆ. ಮಾಡಬಾರದೆಂದು ಹೇಳುವುದೇ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ಇಲ್ಲಿ ಏನಾಗಿದೆ ಎಂದರೆ, ಇದು ಕ್ಲಿಯರ್ ಇಲ್ಲ. ಕ್ಷೇತ್ರಾವಾರು ಅಂದರೆ ಒಂದು ಪಂಚಾಯ್ತಿ ಕ್ಷೇತ್ರದಲ್ಲಿ ಎಷ್ಟು ಎಸ್‌ಸಿ ಜನಸಂಖ್ಯೆ

ಇದೆಯೋ, ಆ ಪ್ರಪೋರ್ಷನೇಟ್‌ನಲ್ಲಿ ಸೀಟು ಮೀಸಲಾತಿ ಇದೆ. ಒಟ್ಟಾರೆ ರಾಜ್ಯದಲ್ಲಿ 1991ರ ಜನಗಣತಿ ಪ್ರಕಾರ, 23 ಪರ್ಸೆಂಟ್‌ಗೆ ಹೋಗಿದೆ. ಸಂವಿಧಾನದಲ್ಲಿ ಶೇಕಡ 18 ಪರ್ಸೆಂಟ್ ಇದೆ. ತಾವು ಹೇಳಿದಹಾಗೆ, ಕೆಲವು ಕ್ಷೇತ್ರಗಳಲ್ಲಿ 9 ಪರ್ಸೆಂಟ್‌ಗಿಂತ ಕಡಿಮೆ ಬರುತ್ತದೆ, ಅಲ್ಲಿ ಎಷ್ಟು ಇಡಬೇಕು.

ಶ್ರೀ ಕೆ. ಹೆಚ್. ರಂಗನಾಥ್ : ನಾರ್ತ್ ಕೆನರಾದಲ್ಲಿ ಒಂದೇ ಸೀಟು ಬಂದಿದೆ, ಕೆಲವು ಕಡೆ ಎರಡೇ ಸೀಟು ಬಂದಿದೆ. ನಮ್ಮ ಜಿಲ್ಲೆಯಲ್ಲಿ ಎರಡು ರಿಸರ್ವೇಷನ್ ಸೀಟು ಬಂದಿದೆ. ಕೋಲಾರಕ್ಕೆ ಹೋದರೆ ಮೂರು ಬರುತ್ತದೆ.

ಶ್ರೀ ಎಸ್. ಹೆಚ್. ಕೌಜಲಗಿ : ರಿಸರ್ವೇಷನ್‌ಗೆ ಎಷ್ಟು ಪರ್ಸೆಂಟೇಜ್ ಇರಬೇಕು?

ಶ್ರೀ ಕೆ. ಹೆಚ್. ರಂಗನಾಥ್ : ನಾರ್ತ್-ಈಸ್ಟ್ ರೀಜನ್‌ನಲ್ಲಿ, 90 ಪರ್ಸೆಂಟ್‌ಗಿಂತಲೂ ಜಾಸ್ತಿ ಎಸ್‌ಟಿ ರಿಸರ್ವೇಷನ್ಸ್ ಬರುತ್ತಿದೆ. ಕಾನೂನು ಪ್ರಕಾರ ಏನೂ ಮಾಡುವುದಕ್ಕೆ ಬರುವುದಿಲ್ಲ. ಈಗ ವಿರೋಧ ಪಕ್ಷದ ನಾಯಕರ ಜಿಲ್ಲೆಯದು ಏಕೆ ಹೇಳಿದೆ ಎಂದರೆ, 1962ರ ವರೆಗೂ ಅಲ್ಲಿ ರಿಸರ್ವೇಷನ್ ಇರಲಿಲ್ಲ. 1967ರ ಚುನಾವಣೆಗೆ ಮಾತ್ರ ರಿಸರ್ವೇಷನ್ ಬಂತು, ನಾರ್ತ್ ಕೆನರಾದಲ್ಲಿ ಇದೇ ಮೊದಲ ಸಲ ಬಂದಿದೆ. ಮುಂಚೆ ಇರಲಿಲ್ಲ. ಏಕೆಂದರೆ Delimitation Commission took a decision that there should be reserved constituencies in every district. Because of that decision only, North Kanara got the reserved constituency. The percentage of population was less than 9%. Even now, it is not more than 11%.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಅದನ್ನೇ ಹೇಳಿದ್ದು. ಪ್ರತಿ ಮಂಡಲದಲ್ಲಿ ಕನಿಷ್ಟ ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ ಸದಸ್ಯರು ಇರಬೇಕು ಎಂದು ಹೇಳಿ. ತಾವು ಪ್ರತಿ ಜಿಲ್ಲೆಯಲ್ಲಿ ಇರಬೇಕೆಂದು ಏನು ಹೇಳುತ್ತೀರಿ.....

Sri K. H. Ranganath : You give a positive suggestion that way. You put it that way. That is a different matter.

ಶ್ರೀ ಡಿ. ಬಿ. ಚಂದ್ರೇಗೌಡ : ಹೀಗೆ ambiguous ಆಗಿ ಶಾಸನ ಪಾಸ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ. ಹೆಚ್. ರಂಗನಾಥ್ : ಅಲ್ಲಿ ambiguity ಇಲ್ಲ. ಅಲ್ಲಿ ambiguity ಬಗ್ಗೆ ಪ್ರಶ್ನೆ ಬರುವುದೇ ಇಲ್ಲ.

Sri M. Y. Ghorpade : The question is that if we give according to the proportion of population then the State as a whole it cannot exceed 23%. State as a whole, it cannot exceed 23% if we give reservation strictly according to the proportion of SC/ST population in each of the constituency. But in addition to that if we have a minimum, then in such areas where the SC/ST population is less than minimum, to that extent we would have given more than 23% reservation when you take the stae as a whole.

So, that is likely to be a very marginal figure. But the convenience of giving a minimum reservation consistent with the experience of the people in Karnataka so far in spite of variations in SC/ST population, we have lived with 18% reservation. Therefore, from that human, social justice point of view and convenience point of view it may not be such a blunder to combine 18% minimum reservation along with proportionate reservation in all other constituencies. But definitely the satisfaction of the people will be much more than slightly exceeding the reservation over and above 23% when you take the State as a whole. This is the point.

ಶ್ರೀ ಡಿ. ಬಿ. ಚಂದ್ರೇಗೌಡ : ನನಗೆ ನಿಮ್ಮ ಸರ್ಕಾರದ ಆಲೋಚನೆ ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕು. Till such time I reserve my comments.

ಶ್ರೀ ಕರಿಯಣ್ಣ : ತಾವು ಬಹಳ ಬುದ್ಧಿವಂತರಿದ್ದೀರಿ. Overall percentage -ಇಡೀ ರಾಜ್ಯದಲ್ಲಿ ಒಂದು ಪರ್ಸೆಂಟ್ ಹೆಚ್ಚಾಗಬಹುದೋ ಏನೋ. ಅಕಸ್ಮಾತ್ ಒಂದು ಪರ್ಸೆಂಟ್ ಹೆಚ್ಚು ಆಗಬಹುದು ಅಥವಾ ಕಡಿಮೆಯಾಗಬಹುದು. ಇದರ ಬಗ್ಗೆ ಬಹಳವಾದ ಚರ್ಚೆ ಏಕೆ?

ಶ್ರೀ ಡಿ. ಬಿ. ಚಂದ್ರೇಗೌಡ : ಇದು ಯಾರೂ ಭಿಕ್ಷೆ ಕೇಳಬೇಕಾದ್ದೂ ಇಲ್ಲ, ಕೊಡಬೇಕಾದ್ದೂ ಇಲ್ಲ. It is a constitutional mandate. Therefore, it should be clear. I would like to know the thinking of the government on this question positively and clearly.

ಶ್ರೀ ಕೆ. ಶಿವಮೂರ್ತಿ : ಇದನ್ನು ತಂದವರು ತಮ್ಮ ಪಾರ್ಟಿಯವರೇ ಆದರೂ ಅದನ್ನು ಯಾವ ರೀತಿ ಇನ್‌ಕಾರ್ಪೋರೇಟ್ ಮಾಡಬೇಕು ಎನ್ನುವುದರ ಬಗ್ಗೆ ದಯಮಾಡಿ ಬೆಳಕು ಚೆಲ್ಲಿ.

ಶ್ರೀ ಡಿ. ಬಿ. ಚಂದ್ರೇಗೌಡ : ನನ್ನ ಮೂಲತಃ ಪ್ರಶ್ನೆ ಏನೆಂದರೆ, ಸರ್ಕಾರದ ಆಲೋಚನೆಗಳ ಮೇಲೆ ನಾವು ಮುಂದೆ ಹೇಳತಕ್ಕಂಥ ಪ್ರಯತ್ನಗಳನ್ನು ಮಾಡುತ್ತೇವೆ. ಸದಸ್ಯತ್ವ ಬೈ ರೊಟೇಶನ್ ಆಯಿತು. ಅದನ್ನು ಇನ್‌ಕಾರ್ಪೋರೇಟ್ ಮಾಡಿದೆ. ಇಲ್ಲಿ ಸದಸ್ಯತ್ವ ಅಂದರೆ ಏನಾಗಿದೆ ಅಂದರೆ, for example reservation was introduced in 1952. From then till today, about more than 40-45 years. ಮೂಡಿಗೆರೆ ಕ್ಷೇತ್ರ ಮೀಸಲು ಕ್ಷೇತ್ರ, ಬೇಲೂರು ಕ್ಷೇತ್ರ ಮೀಸಲು ಕ್ಷೇತ್ರ, ಹೀಗಾಗಿ ಇದು ಏನಾಗಿದೆ ಅಂದರೆ.

ಶ್ರೀ ಕೆ. ಹೆಚ್. ರಂಗನಾಥ್ : ಅದು 1952, 1957ರಲ್ಲಿ ಡಬಲ್‌ಮೆಂಬರ್ ಕಾನ್ಸಿಟಿಟ್ಯೂಯನ್ಸಿ ಆಗಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ : ಆದ್ದರಿಂದ ಈ ಒಂದು ಅತಂತ್ರ ತಪ್ಪಬೇಕು. It should be by rotation. ಅಲ್ಲಿ ಏನು ಮಾಡಿದ್ದಾರೆ ಅಂದರೆ, ಎಸ್‌ಸಿಎಸ್‌ಟಿಗೆ ಮಿನಿಮಂ ಮತ್ತು ಮ್ಯಾಕ್ಸಿಮಮ್ ಎಂದು ಮಾಡಿದ್ದಾರೆ. ಇಲ್ಲಿ ಮೊದಲು ಮ್ಯಾಕ್ಸಿಮಮ್ ಎಂದು ಹೇಳಿದ್ದಾರೆ. ಆ ಮೇಲೆ ದಾಮಾಶ, ರೊಟೇಶನ್ ಪ್ರಕಾರ ಎಂದು ಮಾಡಿದ್ದಾರೆ. ಹಾಗೆಯೇ ರೊಟೇಷನ್‌ನ್ನು ನೀವು ನಿಗದಿ ಮಾಡುವಾಗಲೇ ಮಾಡಿಬಿಡಬೇಕು. ಇನ್ನು ಹಿಂದುಳಿದ

ವರ್ಗಗಳ ಬಗ್ಗೆ ವಿಚಾರ ಮಾಡುವುದಾದರೆ ರಾಜ್ಯಾಂಗದ 73ನೇ ತಿದ್ದುಪಡಿಯಲ್ಲಿ ಎಸ್‌ಸಿ ಎಸ್‌ಟಿ ಹಾಗೂ ಹೆಣ್ಣುಮಕ್ಕಳ ಮೀಸಲಾತಿಯನ್ನು ಕಡ್ಡಾಯ ಮಾಡಿದ್ದಾರೆ. ಆದರೆ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ರಾಜ್ಯಗಳ ಡಿಸ್ಕ್ರಿಶನ್‌ಗೇ ಬಿಟ್ಟಿದ್ದಾರೆ. ಅವರು ಬೇಕಾದರೆ ಮಾಡಬಹುದು, ಮಾಡದೆಯೂ ಇರಬಹುದು. ಪರಿಸ್ಥಿತಿಗೆ ಅನುಗುಣವಾಗಿ ಎಷ್ಟು ಮಾಡಬೇಕು, ಏನು ಮಾಡಬೇಕು ಎನ್ನುವುದನ್ನು ಇವರಿಗೆ ಬಿಟ್ಟಿದ್ದಾರೆ. ಆದರೆ ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳು ಯಾವುವು ಎಂಬುದೇ ಇನ್ನೂ ನಿರ್ಣಯವಾಗಿಲ್ಲ. ಚಿನ್ನಪ್ಪರೆಡ್ಡಿ ವರದಿಯನ್ನು ಒಪ್ಪಿಕೊಳ್ಳುತ್ತೇವೆ ಎಂದು ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಜೂನ್ ತಿಂಗಳ ಕೊನೆಯೊಳಗಾಗಿ ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಜೂನ್ ಎಂಡ್ ಒಳಗಾಗಿ ಅದನ್ನು ತಾವುಗಳು ಒಪ್ಪಿಕೊಂಡಿದ್ದೀರಿ ಎಂಬ ಭಾವನೆಯಿಂದ ನಾವು ಮಾತನಾಡುವುದಾದರೆ, ಚಿನ್ನಪ್ಪ ರೆಡ್ಡಿ ವರದಿಯಲ್ಲಿ ಬಂದಿರತಕ್ಕಂಥ ಶೇಕಡ 38ರಷ್ಟು ಜನಕ್ಕೂ ಮೀಸಲಾತಿಯನ್ನು ಕೊಡಬೇಕಾಗುತ್ತದೆ. ಇದಕ್ಕೆ ಯಾವುದಾದರೂ ಒಂದು ಆಯಾಮ ಬೇಕು. ಚಿನ್ನಪ್ಪ ರೆಡ್ಡಿ ವರದಿ, ಅದರ ರೆಕಮಂಡೇಶನ್ಸ್ ಒಂದು ಕಡೆ, ರಾಷ್ಟ್ರೀಯ ಮೀಸಲಾತಿಗಾಗಿ ಮಂಡಲ್ ಕಮಿಷನ್‌ನಿಂದ ಬಂದಂಥ ವರದಿಯು ಮತ್ತೊಂದು ಕಡೆಯಲ್ಲಿ ಇದೆ. ಮಂಡಲ್ ಕಮಿಶನ್ ವರದಿಯಲ್ಲಿ ಕರ್ನಾಟಕದಲ್ಲಿ 333 ಜಾತಿಗಳನ್ನು ಹಿಂದುಳಿದ ಜಾತಿಗಳು ಎಂದು ಗುರುತಿಸಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ : ನಿಮ್ಮ ಓಲ್ಡ್ ಆಕ್ಟ್‌ನ ಪ್ರಕಾರ, ಕೂಡ "Provided that such reservation shall not be less than 18% of the total number of seats in mandal panchayat". Even according to the existing Act there is a minimum 18%. Section - 5(4) "Seats shall be reserved in a mandal panchayat for SC/STs, the number such seats bearing as nearly as may be the same proportion of the total number of seats in the mandal panchayat as the population of Scheduled Cases and Tribes in the Mandal bears to the total population of the Mandal ; Provided that such reservation shall not be less than 18% of the total number of seats in the mandal panchayat."

Even if the population is minimum that reservation is there. Therefore, if you want to discontinue that practice you should give serious thought. Merely because the population has gone up now from 18% to 23% taking the State as a whole, whether we should give up the idea of that minimum. After all even in areas where according to you the SC/ST is 9% or even less, this works out. Therefore, for the sake of continuity we should go with this. After all our intention, as you said, is not to bring something abruptly different, but there has to be as much continuity as possible irrespective of whether you are responsible or I am responsible. It is in that spirit only we are proceeding. Therefore, since you are speaking as the fist speaker from the opposition side, it would help us if you express clearly what is your idea regarding this minimum for SC/ST and also backward classes.

ಶ್ರೀ ಡಿ. ಬಿ. ಚಂದ್ರೇಗೌಡ : ಆ ಕಾರಣಕ್ಕಾಗಿಯೇ ನಾನು ಹೇಳಿದೆ, ದಯಮಾಡಿ ತಾವುಗಳು ನನ್ನನ್ನು ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. ನೀವು ಇಲ್ಲಿ ಬರೆದಿರತಕ್ಕಂಥ ಸೆಕ್ಷನ್ 5 ರಲ್ಲಿ ಕ್ಷೇತ್ರದ ಜನಸಂಖ್ಯೆಯನ್ನು ಆಧರಿಸಿ ಮೀಸಲಾತಿ ಆದರೆ ಇದನ್ನು ರಾಜ್ಯಾಂಗದತ್ತವಾಗಿ ಅದಕ್ಕೆ ಶೇಕಡ 18ಕ್ಕೆ ಕಡಿಮೆ ಇಲ್ಲದ ಹಾಗೆ ಮಾಡಬೇಕಾಗುತ್ತದೆ. ಇಲ್ಲಿ 18 ಮಿನಿಮಮ್ ಎಂದು ಆದರೆ, ಎಲ್ಲಿ ಶೇಕಡಾ 5,8,9 ರಷ್ಟು ಇದೆಯೋ, ಅಲ್ಲಿಯೂ ಇದನ್ನು ಇಡಬೇಕಾಗುತ್ತದೆ. ಎಲ್ಲಿ ಶೆಡ್ಯೂಲ್‌ಕಾಸ್ಟ್ ಜನಸಂಖ್ಯೆ ಜಾಸ್ತಿ ಬರುತ್ತದೋ ಅಲ್ಲಿ ಶೇಕಡ 30ಕ್ಕೆ ಮೀರಬಹುದು. ಆಗ ನಿಮಗೆ ಒಟ್ಟು ಮೀಸಲಾತಿಯಿಂದ ಬಂದ ಸಂಖ್ಯೆ ಎಷ್ಟು ? ಇದರ ಲೆಕ್ಕ ಸಿಗಬೇಕು. 50ಕ್ಕೆ ಮೀರದಂತೆ ಒಟ್ಟು ಮೀಸಲಾತಿ ಇರಬೇಕು. ಸರ್ವೋಚ್ಚ ನ್ಯಾಯಾಲಯ ಮಂಡಲ್ ಕಮಿಶನ್‌ನ, ಆರ್ಟಿಕಲ್ 15-4 ಮತ್ತು 16-4ನಲ್ಲಿ ಸೋಶಿಯಲಿ ಮತ್ತು ಎಜುಕೇಶನಲಿ ಬ್ಯಾಕ್‌ವರ್ಡ್‌ಗೆ, ಹಿಂದುಳಿದ ವರ್ಗಕ್ಕೆ ಕೊಡತಕ್ಕಂಥ ಕಾಲದಲ್ಲಿ ಮೀಸಲಾತಿಯು ಶೇಕಡಾ 50ಕ್ಕೆ ಮೀರಬಾರದು ಎಂದು ಹೇಳಿದ್ದಾರೆ. ಶೆಡ್ಯೂಲ್ಡ್‌ಕಾಸ್ಟ್ ಮತ್ತು ಟ್ರೈಬ್ಸ್‌ಗೆ ಎಷ್ಟು ಮೀಸಲಾತಿ ಬರುತ್ತದೆ ಎಂಬುದು ಗೊತ್ತಿಲ್ಲದೆ ಬ್ಯಾಕ್‌ವರ್ಡ್‌ಕ್ಲಾಸ್ ಮೀಸಲಾತಿ ಎನ್ನುವುದನ್ನು ಒಂದು ಜೊತೆಗೆ ಸೇರಿಸಿ, ಈಗಿರುವ ಲೆಕ್ಕದಲ್ಲಿಯೇ ಮಂಡಲ್ ಕಮಿಶನ್ ವರದಿ ಒಂದು ಕಡೆ ಇರಲಿ, ಎಸ್‌ಸಿ ಎಸ್‌ಟಿ ನೀವು ಹೇಳಿದ ಹಾಗೆ 23 ಪರ್‌ಸೆಂಟ್ ಆದರೆ, ಚಿನ್ನಪ್ಪರೆಡ್ಡಿ ಆಯೋಗದ ವರದಿಯಲ್ಲಿನ 33 ಪರ್‌ಸೆಂಟ್‌ನ್ನು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಸೇರಿಸಿದರೆ, ಮೀಸಲಾತಿಯು ಶೇಕಡ 61ನ್ನು ದಾಟುತ್ತದೆ. Will it stand the scrutiny of law ? is my question.

ಶ್ರೀ ಎಂ. ವೈ. ಘೋರ್ಪಡೆ : ನಮ್ಮ ಸುಪ್ರೀಂಕೋರ್ಟ್ ಏನು ಹೇಳಿದೆ, ಮಂಡಳ್ ಕಮಿಶನ್ ಬಗ್ಗೆ ಹೇಳುವಾಗ ಹೇಳಿರತಕ್ಕಂಥ ಮಾತು, ಮಂಡಳ್ ವರದಿಯಾಗಲೀ, ಅಥವಾ ಈಗ ಕರ್ನಾಟಕದಲ್ಲಿ ಇರುವಂಥ ಓಬಿಸಿ ಆಗಲಿ, ಅದು ಆರ್ಟಿಕಲ್ 16-4 ಮತ್ತು 15-4 ಪ್ರಕಾರ ಕೊಟ್ಟಿರತಕ್ಕಂಥಾದ್ದು. Mandal Commission, 27% or something they have said. Here we already have 50% OBC. Automatically, our reservation is not cancelled because some opinions have been expressed. The reservations in Karnataka has stood the test of time on 16(4) and 15(4). Now what we are doing is not under 16(4) or 15(4). It is reservation in an election taking against the background of the constitutional Amendment 73 which has an enabling provision. It says that every state may reserve seats for OBCs. So whatever may have been the pronouncements regarding 16(4) and 15(4) either with regard to Karnataka or Government of India it doesn't suo moto apply here. And even with regard to 16(4) and 15(4) how is that we are having a total reservation, if you take the reservation of OBC plus 18% SC/ST, it is 68%. It has not been struck down by any court of law. They may have recommended something, they might have expressed the view regarding mandal reservation which has similar reservation at the Central level. But at the State level, whatever reservation we have today, OBC plus SC/ST is of the order of 68%, it has not been struck down and questioned in a court of law.

Therefore, we need not assume that any reservation wherever we made, i.e., the total reservation OBC plus SC/ST exceeds 50%, it is

automatically illegal. That is not an assumption which is realistic. Therefore, let us not say anything about reservation, when it exceeds 50%, it is automatically illegal. That is all I am trying to point out.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಮಂತ್ರಿಗಳಲ್ಲಿ ನನ್ನ ಮನವಿ ಇಷ್ಟೆ; ನಮ್ಮ ಉದ್ದೇಶಿತ ಮಸೂದೆ ಸಾಧ್ಯವಾದಷ್ಟು ಬೇಗ ಅಸ್ತಿತ್ವಕ್ಕೆ ಬರಬೇಕು. ಅಸ್ತಿತ್ವಕ್ಕೆ ಬರುವುದಕ್ಕೆ ಬೇಕಾದಂತಹ ಎಲ್ಲಾ ಶಾಸನಬದ್ಧವಾದಂಥ ಜವಾಬ್ದಾರಿಯನ್ನು ನೀವು ತೆಗೆದುಕೊಳ್ಳಿ, ಇದರ ವ್ಯಾಪ್ತಿಯೊಳಗೆ ಇಟ್ಟುಕೊಂಡು ಕೆಲಸ ಮಾಡಿ ಎನ್ನುವಂತಹ ದೃಷ್ಟಿಯಿಂದ ಹೇಳಿದೆ. ಈ ಕಾರಣಕ್ಕಾಗಿ ಹಿಂದೆ ಆಗಿಲ್ಲ ಮುಂದೆ ಆಗುವುದಿಲ್ಲ ಅನ್ನುವಂತಹ ಅಭಿಪ್ರಾಯಗಳನ್ನು ಇಟ್ಟುಕೊಳ್ಳತಕ್ಕಂಥದ್ದು ಸರಿಯಲ್ಲ. I am trying to caution you so that the purpose of the bill is to take this to the people. ಅದು ಡಿಲೇ ಆಗಬಾರದು ಎನ್ನತಕ್ಕ ದೃಷ್ಟಿಯಿಂದ ಶಾಸನಗಳನ್ನು ರಚನೆ ಮಾಡತಕ್ಕಂಥ ಪ್ರಯತ್ನವನ್ನು ಮಾಡಿ ಎನ್ನುವುದು ನನ್ನ ಅನಿಸಿಕೆ.

Sri M. Y. Ghorpade : But, still we have to take some decisions we cannot run away from taking a decision ; right or wrong we have to take some decision. That is why I am seeking specific guidance from you. The point is, what you would have done, if you were to be in my place.

Sri D.B. Chandre Gowda : I will come back to you. But, I would like to know what is the thinking of the man who pilots the Bill.

Sri M. Y. Ghorpade : That is in the bill.

Sri D.B. Chandre Gowda : It is not clear. ಮಂಡಲ ಪಂಚಾಯತಿಗಳಿಗೆ ರಾಜಕೀಯ ಪಕ್ಷದ ಸೋಂಕು ಇಲ್ಲದೆ ಇರುವುದರಿಂದ I do not want to go into the anti-defection law. ಆದರೆ ತಾಲ್ಲೂಕ್ ಮತ್ತು ಜಿಲ್ಲಾ ಮಟ್ಟದಲ್ಲಿ ರಾಜಕೀಯ ಪ್ರವೇಶವಾಗುವುದರಿಂದ Anti-defection law will certainly come into operation. ನಮ್ಮ ಪಕ್ಷದ ಆಲೋಚನೆಗಳು ಈ ಬಗ್ಗೆ ಏನಿದೆಯೋ ಏನೋ ಎಂದು ನಾವು ಚರ್ಚೆ ಮಾಡಬೇಕು. ಕೆಳಗಡೆಯ ಹಂತದಲ್ಲಿ ಈ ರಾಜಕೀಯ ಪಕ್ಷಗಳಿಂದ ಹೊರತಾದ ಚುನಾವಣೆ ಆಗಬೇಕೆನ್ನತಕ್ಕ ನಿಮ್ಮ ಆಲೋಚನೆಗೆ ನನ್ನ ವ್ಯಕ್ತಿಗತವಾದಂತಹ ಸಹಮತ ಇದೆ. ನಂತರ ಇಲ್ಲಿ ಏನಾಗುತ್ತದೆ ಅಂದರೆ, vote of no confidence ಪ್ರಾವಿಜನ್ ಏನಿದೆ ಶಾಸನ ಸಭೆಯಲ್ಲಿ ಮುಖ್ಯಮಂತ್ರಿಯ ವಿರುದ್ಧ ಕನಿಷ್ಟ ಆರು ತಿಂಗಳುಗಳ ಸಮಯ ಇದೆ. ಒಂದು ಸಾರಿ vote of no confidence ತಂದರೆ ಪುನಃ ಆರು ತಿಂಗಳುಗಳ ಒಳಗೆ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ. ಪುರಸಭೆಯ ಶಾಸನದಲ್ಲಿ ಇದಕ್ಕೆ ಒಂದು ವರ್ಷದವರೆಗೆ ಪುನಃ ಅವಕಾಶ ಇಲ್ಲ. ಆದರೆ ಮಂಡಲ ಪಂಚಾಯತಿಯಲ್ಲಿ ನೀವು ಇದನ್ನು ನಿಗದಿಪಡಿಸುವುದಿಲ್ಲ. Refer to the vote of no confidence against the President or the vice President. ಆದ್ದರಿಂದ ನೀವು ಇದನ್ನು ನಿಗದಿ ಪಡಿಸಬೇಕು. 2/3 ಮೆಜಾರಿಟಿ ತೆಗೆಯಬಹುದು. ಆದರೆ ಒಂದು ಸಾರಿ vote of no confidence. ತಂದಮೇಲೆ ಪುನಃ ಇನ್ನೊಂದು ವರ್ಷದವರೆಗೆ ತರುವುದಕ್ಕೆ ಅವಕಾಶ ಇರಕೂಡದು. ಇಲ್ಲದಿದ್ದರೆ ಯಾವಾಗಲೂ

ಇದೇ ಕೆಲಸವಾಗುತ್ತದೆ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು . ನಾನು ಪ್ರಾರ್ಥನೆಯನ್ನು ಮಾಡುತ್ತೇನೆ. ಪಂಚಾಯತಿಗಳ ಬಗ್ಗೆ ನಾನು ಕೊನೆಯ ಮಾತು ಏನು ಹೇಳಿದ್ದೇನೆ, ಆರು ತಿಂಗಳಿಗೆ ಒಂದು ಸಾರಿ ಅಥವಾ ಒಂದು ವರ್ಷಕ್ಕೆ ಒಂದು ಸಾರಿ ಎಂದು ಇದು ಯಾವುದನ್ನೂ ನಿಗದಿ ಮಾಡಿಲ್ಲ. You have not specified it. ತಾಲ್ಲೂಕ್ ಪಂಚಾಯತಿಯಲ್ಲಿ ಕೆಳಗಡೆ ಗ್ರಾಮ ಪಂಚಾಯತಿಯಲ್ಲಿ ಮತ್ತು ಜಿಲ್ಲಾ ಪಂಚಾಯತಿಯಲ್ಲಿ ಕೆಲವು ದ್ವಂದ್ವಗಳು ಇವೆ, ಅದನ್ನು ಹೇಳುತ್ತೇನೆ. ಆದಕ್ಕೆ ಮುಂಚೆ ಚುನಾಯಿತ ಸದಸ್ಯರ ಸಂಖ್ಯೆ 10 ಸಾವಿರ ಎಂದು ಇದೆ. ಒಟ್ಟು 10 ಸಾವಿರ ಜನ ಸಂಖ್ಯೆಗೆ ಚುನಾಯಿತ ಸದಸ್ಯರ ಸಂಖ್ಯೆ 10 ಆಗಬೇಕು, ಫ್ಲಸ್ 1 ಎಂದು ಹೇಳುತ್ತೀರಿ, ಸರಾಸರಿ ಒಂದು ಲಕ್ಷ ಜನಸಂಖ್ಯೆ ಒಂದು ತಾಲ್ಲೂಕಿನಲ್ಲಿ, ಅಸೆಂಬ್ಲಿ ಕ್ಷೇತ್ರದಲ್ಲಿ ಜಾಸ್ತಿಯಾಗುತ್ತದೆ. ತಾಲ್ಲೂಕಿನಲ್ಲಿ ಒಂದು ಲಕ್ಷ. ಅದರಲ್ಲಿ ತಾವು ಗಮನಿಸಬೇಕಾದ್ದು ಏನು ಅಂದರೆ, ಕೊಪ್ಪ, ನರಸಿಂಹರಾಜಪುರ, ಶೃಂಗೇರಿ ಎಂದು ಮೂರು ತಾಲ್ಲೂಕ್‌ಗಳಿವೆ. ಒಂದು ತಾಲ್ಲೂಕಿನ ಜನಸಂಖ್ಯೆ , subject to corrections, is not more than 30000-40000. ಚುನಾವಣೆಗೆ 4 ಜನ ಸಂದಸ್ಯರೇ? 11 ಮಿನಿಮಂ ಎಂದು ಹೇಳಿದ್ದೀರಿ, ಅಲ್ಲಿಯೂ ಸಂಖ್ಯೆ ಕಡಿಮೆಯಾಯಿತು. ಇಲ್ಲಿ ನೀವು ಏನಾದರೊಂದು ನಿಯಮವನ್ನು ಹಾಕಿಕೊಳ್ಳಬೇಕು. ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಬೇರೆ ರೂಪದಲ್ಲಿ ಬರತಕ್ಕಂಥವರ ಸಂಖ್ಯೆಗಿಂತ ಇದು ಹೆಚ್ಚಿರಬೇಕು. ನಾನು ನಿಮಗೆ ಅದಕ್ಕಾಗಿಯೇ ಹೇಳಿದ್ದು. 46 ಪಂಚಾಯತಿಗಳು ಆಗುತ್ತದೆ ಎಂದು ಇಟ್ಟುಕೊಳ್ಳೋಣ. ನನ್ನ ಲೆಕ್ಕದಲ್ಲಿ ನೀವು ಎರಡು ಸಾವಿರ ಮಾಡಿದರೆ 50 ಪಂಚಾಯತಿಗಳಾಗುತ್ತವೆ. ಅಥವಾ 18 ಇದ್ದಿದ್ದು ಕನಿಷ್ಟ 36 ಆಗುತ್ತವೆ. 36ರಲ್ಲಿ ಐದನೆ ಒಂದು ಭಾಗದಷ್ಟು ಪಂಚಾಯತಿಯ ಸದಸ್ಯರು ತಾಲ್ಲೂಕ್ ಪಂಚಾಯತಿಯ ಸದಸ್ಯರಾಗುತ್ತಾರೆ, ಅರ್ಥಾತ್ 7 ಜನ. ಇದುವರೆಗೂ ಶಾಸಕರು, ಪರಿಷತ್ತಿನ ಸದಸ್ಯರು - ಇವರು ಸದಸ್ಯರು. ಜೊತೆಗೆ ಹಿಂದೆ ಟಿ.ಎ.ಸಿ.ಎಂ.ಎಸ್ ಮತ್ತು ತಾಲ್ಲೂಕ್ ಪಿ.ಎಲ್.ಡಿ ಬ್ಯಾಂಕಿನ ಸದಸ್ಯರುಗಳು ಈಗಿನ ಟಿ.ಎ.ಪಿ.ಎಂ.ಎಸ್‌ನಲ್ಲಿ ಸದಸ್ಯರು . ಈ ಒಟ್ಟು ವ್ಯವಸ್ಥೆಯಲ್ಲಿ ಸಹಕಾರಿ ಸಂಸ್ಥೆಗಳನ್ನೇ ಎತ್ತಿ ಹೊರಗೆ ಹಾಕಿದ್ದೀರಿ, ನನಗೆ ಕಾರಣ ಗೊತ್ತಾಗಲಿಲ್ಲ. ಜಿಲ್ಲಾ ಮಟ್ಟದಲ್ಲಿಯೂ ಅವರನ್ನು ಹೊರಗೆ ಹಾಕಿದ್ದೀರಿ, ತಾಲ್ಲೂಕ್ ಮಟ್ಟದಲ್ಲಿಯೂ ಅವರನ್ನು ಹೊರಗೆ ಹಾಕಿದ್ದೀರಿ. ಒಟ್ಟು ಈ ವ್ಯವಸ್ಥೆಯಿಂದ ಸಹಕಾರಿ ಸಂಸ್ಥೆಗಳನ್ನು ಹೊರಗೆ ಇಡುವಂತಹ ಪಿತೂರಿ ಏನಾದರೂ ನಡೆದಿದೆಯೋ! ಇದಕ್ಕೆ ನನಗೊಂದು ವಿವರಣೆ ಬೇಕು.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಇಲ್ಲಿ ಪಿತೂರಿಯ ಪ್ರಶ್ನೆ ಇಲ್ಲ. ಇದರಲ್ಲಿ ನೀವೇ ಹೇಳಿದ ಪ್ರಕಾರ ಎಕ್ಸ್‌ಅಫಿಶಿಯೋ ಮೆಂಬರ್ಸ್ ಸಂಖ್ಯೆ ಎಲೆಕ್ಟೆಡ್ ಮೆಂಬರ್ಸ್‌ಗಿಂತ ಆದಷ್ಟು ಮಟ್ಟಿಗೆ ಜಾಸ್ತಿ ಇರಕೂಡದು. ಏಕೆಂದರೆ, ಓಟಿಂಗ್ ರೈಟ್ಸ್ ಎಲ್ಲರಿಗೂ ಇದೆ. ಸಾಮಾನ್ಯವಾಗಿ ನಮ್ಮ ಕಡೆ ಒಂದು ತಾಲ್ಲೂಕಿನ ಜನಸಂಖ್ಯೆ ಎರಡು ಲಕ್ಷ ಇರುತ್ತದೆ. 2 ಲಕ್ಷ ಅಂದರೆ 20 ಜನ ಸದಸ್ಯರು. 10 ಸಾವಿರಕ್ಕೆ ಒಬ್ಬ ಮೆಂಬರ್ ಅಂದರೆ ನಮ್ಮ ಕಡೆಯಲ್ಲಿ 20. ಮಲೆನಾಡು ಭಾಗದಲ್ಲಿ ಈ ಪ್ರಶ್ನೆ ಬರುತ್ತದೆ. ಒಂದೊಂದು ತಾಲ್ಲೂಕಿನಲ್ಲಿ ಒಂದು ಲಕ್ಷ ಜನಸಂಖ್ಯೆ ಅಥವಾ 70-80 ಸಾವಿರ ಇದ್ದರೆ ಈ ತೊಂದರೆ ಬರುತ್ತದೆ. ಅಲ್ಲಿ ಹತ್ತು ಸಾವಿರದ ಪ್ರಕಾರ 7-8 ಸದಸ್ಯರು ಆಗಬಹುದು. ಅದಕ್ಕೋಸ್ಕರ ನಾವು Talukas with less than one lakh population ಮಿನಿಮಂ 11 ಮೆಂಬರ್ಸ್ ಇರಬೇಕೆಂದು ಹೇಳಿದ್ದೇವೆ.

5.15 ಪಿ.ಎಂ.

ಈಗ ಶೇಕಡ 20 ಗ್ರಾಮ ಪಂಚಾಯತಿಗಳ ಛೇರ್‌ಮನ್ಸ್ ಎಕ್ಸ್ ಅಫಿಷಿಯೋ ಮೆಂಬರ್ಸ್ ಆದರೆ ಎಂಟು ಜನರು ಆಗಬಹುದೆಂದು ನೀವು ಹೇಳಿದ್ದೀರಿ. ಅದರ ಜೊತೆಗೆ ಎಂ.ಎಲ್.ಎ. ಎಕ್ಸ್ ಅಫಿಶಿಯೋ ಮೆಂಬರ್ ಆಗಿರುತ್ತಾರೆ. ಬೇರೆ ಜನ ಏನು ಇದ್ದಾರೆ, ಅವರನ್ನು

ಎಕ್ಸ್ ಅಫಿಷಿಯೋ ಮೆಂಬರ್ ಮಾಡಿ ಓಟಿಂಗ್ ರೈಟ್ಸ್ ಕೊಟ್ಟರೆ ಆಗ ಅವರ ಸಂಖ್ಯೆ ಎಲೆಕ್ಟೆಡ್ ಮೆಂಬರ್ಸ್‌ಗಿಂತ ಜಾಸ್ತಿಯಾಗುತ್ತದೆ. ಇದೇ ಕಾರಣಕ್ಕಾಗಿ ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿಯಲ್ಲಿ ಎಂ.ಎಲ್.ಎ ಮತ್ತು ಎಂ.ಎಲ್.ಸಿಯನ್ನು ಪರ್ಮನೆಂಟ್ ಇನ್‌ವೈಟೀಸ್ ಎಂದು ಮಾಡಿದ್ದೇವೆ. ಯಾರನ್ನಾದರೂ ಇನ್‌ವೈಟ್ ಮಾಡುವ ಹಕ್ಕು ಯಾರೂ ಸಹ ಕಸಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ಹಕ್ಕು ಇದ್ದೇ ಇರುತ್ತದೆ. ಸಂಬಂಧಪಟ್ಟ ಜನರನ್ನು ಮೀಟಿಂಗ್‌ಗಳಿಗೆ ಇನ್‌ವೈಟ್ ಮಾಡುವುದಕ್ಕೆ ಆ ವ್ಯವಸ್ಥೆಯನ್ನು ಮಾಡೋಣ. ಆದರೆ ಆಟೋಮೆಟಿಕ್‌ಕ್ಕಾಗಿ ಅವರೆಲ್ಲಾ ಎಕ್ಸ್ ಅಫಿಷಿಯೋ ಮೆಂಬರ್ ಆಗಿ ಬಂದು ಈ ವ್ಯತ್ಯಾಸವನ್ನು ಜಾಸ್ತಿ ಮಾಡುವುದು ಬೇಡ. We can always get them as special invitees. Invitees, in one form or the other. That is a sort of adjustment. Elected members and ex-officio members, there should be a balance.

ಶ್ರೀ ಡಿ. ಬಿ. ಚಂದ್ರೇಗೌಡ : ಇಲ್ಲಿ ಏನಾಗಿದೆ ಎಂದರೆ, ಸಹಕಾರಿ ಸಂಸ್ಥೆಗಳನ್ನೇ ಹೊರಗಡೆ ಇಟ್ಟಹಾಗೆ ಇದೆ. ಇದು ನೀವು ಹೇಳಿದಷ್ಟು ಸುಲಭವಾಗಿ ಕ್ಲಾರಿಫೈ ಆಗುವುದಿಲ್ಲ. Please examine the matter once again. ಎರಡನೆಯದು ತಾಲ್ಲೂಕು ಪಂಚಾಯಿತಿ ಸಮಿತಿ ಸಭೆಗೆ .

Sri M. Y. Ghorpade : You will have to creat a third category who have no voting right.

ಶ್ರೀ ಡಿ. ಬಿ. ಚಂದ್ರೇಗೌಡ : ಈಗ How do you creat is you have to think. ಇರುವ ಸ್ಥಿತಿಯನ್ನು ಹೇಳಿದೆ. ಜಿಲ್ಲಾ ಪರಿಷತ್ತಿನ ಸದಸ್ಯರು ತಾಲ್ಲೂಕು ಸಮಿತಿಯ ಸದಸ್ಯರಲ್ಲ. ತಾವು ನೋಡಬೇಕಾದ್ದು ಏನೆಂದರೆ, ಈಗ ಮಂಡಲ್ ಪಂಚಾಯಿತಿಯಲ್ಲಿ ಪ್ರಧಾನಪಾತ್ರ ಜಿಲ್ಲಾ ಪರಿಷತ್ತಿನ ಸದಸ್ಯರು. ಈಗ ನೀವು ಮಾಡಿರುವ ವ್ಯವಸ್ಥೆಯಲ್ಲಿ ತಾಲ್ಲೂಕು ಸಮಿತಿಯಲ್ಲಿ ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾದ ಸದಸ್ಯರು ಅವರು ಸದಸ್ಯರಲ್ಲ. ಜಿಲ್ಲಾ ಪಂಚಾಯತ್‌ಗೆ ಆಯ್ಕೆಯಾದ ಸದಸ್ಯರು ಈಗ ಮಾಡಿರುವಂತಹ ತಾಲ್ಲೂಕಿನ ವ್ಯವಸ್ಥೆಯಲ್ಲಿ ಅವರೂ ಸದಸ್ಯರಲ್ಲ. ಜಿಲ್ಲಾ ಪಂಚಾಯತ್ ಸದಸ್ಯರು ತಾಲ್ಲೂಕಿನಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ಜಿಲ್ಲಾ ಪರಿಷತ್ತಿನಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಎಂ. ವೈ. ಘೋರ್ಪಡೆ : ಛೇರ್ಮನ್ ಎಕ್ಸ್-ಅಫಿಷಿಯೋ ಮೆಂಬರ್.

ಶ್ರೀ ಡಿ. ಬಿ. ಚಂದ್ರೇಗೌಡ : ಛೇರ್ಮನ್ ಎಕ್ಸ್-ಅಫಿಷಿಯೋ ಮೆಂಬರ್ ಆಗುತ್ತಾರೆ. ಹಾಗಿದ್ದರೆ ಜಿಲ್ಲಾ ಪರಿಷತ್ತಿನ ಸದಸ್ಯರನ್ನು ಏಕೆ ಇಟ್ಟುಕೊಳ್ಳುತ್ತೀರಿ. ಅವರು ಎಲ್ಲಿ ಕೋಆರ್ಡಿನೇಟ್ ಮಾಡುತ್ತಾರೆ. Where does he go? ತಾಲ್ಲೂಕು ಪಂಚಾಯತ್ ಅಧ್ಯಕ್ಷ ಜಿಲ್ಲಾ ಪರಿಷತ್ತಿನ ಸದಸ್ಯನಾಗುವುದಕ್ಕೆ ಸಾಧ್ಯವಾಗುವುದಾದರೆ, ಜಿಲ್ಲಾ ಪರಿಷತ್ತಿನ ಸದಸ್ಯ ತಾಲ್ಲೂಕು ಪಂಚಾಯತಿಯ ಸದಸ್ಯನಾಗುವುದಿಲ್ಲ. ಶಾಸಕರು, ಎಂ.ಎಲ್.ಸಿಗಳು ಅಧ್ಯಕ್ಷರ ಚುನಾವಣೆಗೆ ಪಾಲುಗಾರರಾಗುವುದಿಲ್ಲ. ಉಳಿದ ಎಲ್ಲಾ ಪ್ರಕ್ರಿಯೆಗಳನ್ನು ಮಾಡಬಹುದು. ನಾವೂ ಒಬ್ಬ ಸಾಮಾನ್ಯ ಸದಸ್ಯರಾಗೇ ಇರಬಹುದು. I donot want to comment about that. ಆದರೆ ಜಿಲ್ಲಾ ಪರಿಷತ್ತಿನ ಸದಸ್ಯರು ಆ ತಾಲ್ಲೂಕಿನಿಂದ ಆಯ್ಕೆಯಾದಾಗ ಅದೇ ತಾಲ್ಲೂಕಿನಲ್ಲಿ ಅವರು ಪಾಲುಗೊಳ್ಳದೆ ಇರತಕ್ಕದ್ದು ಸರಿಯಾದ ಕ್ರಮವಲ್ಲ. ನಾನು ಎಷ್ಟು ದೂರಕ್ಕೆ ಹೋಗುತ್ತೇನೆ ಎಂದರೆ, ಅವರು ಮತದಾರರು ಆದರೂ ಅಪರಾಧವಾಗುತ್ತದೆ.

ಆದ್ದರಿಂದ ದಯಮಾಡಿ ಇದನ್ನು You kindly examine this. ಪುನಃ ಬಹಳ ಮುಖ್ಯವಾದಂತಹ ಒಂದು ಪ್ರಶ್ನೆಯನ್ನು ತಾವು ಇಲ್ಲಿ ಆಲೋಚನೆ ಮಾಡಬೇಕು. ಅದು ಮಸೂದೆಯಿಂದ ಹೊರತಾಗಿರತಕ್ಕದ್ದು. ಮಂಡಲ್‌ದ ಸದಸ್ಯರಾದವರು ಈಗಿರುವಂತಹ ಶಾಸನದಂತೆ ಜಿಲ್ಲಾ ಪರಿಷತ್ತಿನ ಸದಸ್ಯರಾಗುವುದಿಲ್ಲ; ತಾಲ್ಲೂಕು ಪಂಚಾಯತಿಯ ಸದಸ್ಯನಾಗುವುದಕ್ಕೆ ಸಾಧ್ಯವಿಲ್ಲ. ಏಕಕಾಲದಲ್ಲಿ ಈ ಮೂರು ಹಂತದ ವ್ಯವಸ್ಥೆಯಲ್ಲಿ ಅವನು ಸದಸ್ಯನಾಗಿರುವುದಕ್ಕೆ ಸಾಧ್ಯವೇ ಅಥವಾ ಅದಕ್ಕೆ ಏನಾದರೂ ಶಾಸನದಲ್ಲಿ ನೀವು ನಿರ್ದಿಷ್ಟವಾದಂತಹ ಆಲೋಚನೆಯನ್ನು ಮಾಡಿದ್ದೀರಾ? May I draw the attention of the Hon.Minister? ಏಕಕಾಲದಲ್ಲಿ ಮೂರು ಹಂತದ ವ್ಯವಸ್ಥೆಯಲ್ಲಿಯೂ ಸದಸ್ಯನಾಗುವುದಕ್ಕೆ ಅವಕಾಶವಿದೆಯೇ? ಇಲ್ಲವೆಂದರೆ ಸ್ಪೆಷಿಫೈ ಮಾಡಿ. Suppose I am a member of Gramapanchayat. ಆಗ ನಾನು ತಾಲ್ಲೂಕು ಪಂಚಾಯತ್ ಸದಸ್ಯನಾಗಬಹುದೆ, ತಾಲ್ಲೂಕು ಪಂಚಾಯತ್ ಸದಸ್ಯನಾಗಿ ನಾನು ಜಿಲ್ಲಾ ಪರಿಷತ್ತಿಗೆ ಸ್ಪರ್ಧೆ ಮಾಡಿ ಸದಸ್ಯನಾಗಬಹುದೆ? This question came up, went to the court. Therefore, I appeal to the Hon'ble Minister, ಈಗಲೇ ಸ್ಪೆಸಿಫಿಕ್ ಆಗಿ ಡಿಬಾರ್ ಮಾಡಿ. Member elected from one State shall not be the Member of the other. It has been specified in the Old Act. ಸೆಷನ್ 13ರಲ್ಲಿ ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಮತ್ತೆ ಸಭೆ 2 ತಿಂಗಳಿಗೆ ಒಮ್ಮೆ....

ಶ್ರೀ ಎಂ. ವೈ. ಘೋರ್ಪಡೆ : ಎರಡು ತಿಂಗಳಿಗೆ ಒಮ್ಮೆ ಅಲ್ಲ atleast once in two months ಎಂದು ಇದೆ. ಪ್ರತಿ ತಿಂಗಳು ಮಾಡಬಾರದು ಎಂದು ಏನೂ ಇಲ್ಲ. ಆದರೆ ಕಡ್ಡಾಯವಾಗಿ ಏನು ಇದೆ ಎಂದರೆ,...

ಶ್ರೀ ಡಿ. ಬಿ. ಚಂದ್ರೇಗೌಡ : ಸ್ವಾಮಿ, ಇದನ್ನು ಪ್ರತಿ ತಿಂಗಳು ಮಾಡಿ ಎಂದರೆ ಮೂರು ಮೂರು ತಿಂಗಳಿಗೆ ಮಾಡುತ್ತಾರೆ; ಕನಿಷ್ಟ 2 ತಿಂಗಳಿಗೆ ಒಮ್ಮೆ ಮಾಡಿ ಎಂದರೆ 4 ತಿಂಗಳಿಗೆ ಮಾಡುತ್ತಾರೆ. You have repeated the same thing. ಮಂಡಲದಲ್ಲಿ ಹೇಳಿದ ಹಾಗೆ ಇಲ್ಲೂ ಹೇಳಿದ್ದೀರಿ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೇ, A Zilla Parishat Member can participate in the Taluk Panchayat Meeting. ತಾವು ತಮ್ಮ ಪ್ರಕಾರ ಹೇಳಿದ್ದೀರಿ. ಈಗ ನಾವು ಇಲ್ಲಿ ಏನು ತ್ರೀ ಟೈರ್ ಸಿಸ್ಟಂ ಮಾಡಿದ್ದೇವೋ ಇದರಲ್ಲಿ ಪವರ್ಸ್ ಏನು ಇದೆ ಎಂದು ನನಗೆ ಗೊತ್ತಿಲ್ಲ. ಆದರೆ ಒಂದು ಏನೆಂದರೆ, What is the use of a Zilla Parishat member attending a Taluk panchayat meeting ? These powers...

ಶ್ರೀ ಡಿ. ಬಿ. ಚಂದ್ರೇಗೌಡ : ಇಲ್ಲಾ, ಅಡ್ವಾಂಟೇಜ್ ಏನೆಂದರೆ, ಅವನು ತಾಲ್ಲೂಕಿನ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಜಿಲ್ಲಾಪರಿಷತ್ತಿನಿಂದ ಬರತಕ್ಕಂತಹ ಎಲ್ಲಾ ಪ್ರಕ್ರಿಯೆಗಳಲ್ಲಿ ನಿಮ್ಮ ಪರವಾದ ಸದಸ್ಯನಾಗುತ್ತಾನೆ. ಅವನಿಗೆ ಇಲ್ಲಿ ಮಾಹಿತಿ ಸಿಕ್ಕದಿದ್ದರೆ ಅವನು ಅವನ ಕ್ಷೇತ್ರಕ್ಕೆ ಸದಸ್ಯನಾಗುತ್ತಾನೆ; ತಾಲ್ಲೂಕಿಗೆ ಸದಸ್ಯನಾಗುವುದಿಲ್ಲ. ಈಗ ಡಿಪಿಎಸ್‌ನಲ್ಲಿ ಇದ್ದಾನಲ್ಲ, ನಿಮ್ಮ ತಾಲ್ಲೂಕಿನ ಪಂಚಾಯಿತಿಯಲ್ಲಿ ಜಿಲ್ಲಾಪರಿಷತ್ತಿನ ಸದಸ್ಯನು ಸದಸ್ಯ.

ಶ್ರೀ ಕೆ. ಶಿವಮೂರ್ತಿ : ಸ್ವಾಮಿ, ಸ್ಪೆಸಿಫಿಕ್ ಆಗಿ ಒಂದೊಂದು ಪವರ್ಸ್ ಕೊಡಿ. ಹೀಗೆ ಎಕ್ಸ್‌ಅಫಿಷಿಯೋ ಸದಸ್ಯರಾಗಿ ಮಾಡಿಕೊಂಡು ಅಲ್ಲಿ ಮಾತನಾಡಿಕೊಂಡು

ಬರುವುದಕ್ಕಿಂತ ಮೊದಲು, ಏನು ಪ್ರಕ್ರಿಯೆಗಳಲ್ಲಿ ಭಾಗವಹಿಸಿ ತೀರ್ಮಾನಗಳಲ್ಲಿ ವೋಟು ಮಾಡತಕ್ಕಂತಹ ಶಕ್ತಿ ಅವನಿಗೆ ತಾಲ್ಲೂಕು ಪಂಚಾಯಿತಿ ಮೀಟಿಂಗ್‌ನಲ್ಲಿ ಇದೆಯೇ ? ಇಲ್ಲಾ. ತಾವು ನೋಡಿ, ತಮ್ಮ ಇದರಲ್ಲಿ ನೋಡಿ. ಅಲ್ಲಿ ಮಂಡಲ್ ಪಂಚಾಯತ್ ಬಜೆಟ್ ಬೇರೆ ಆಗುತ್ತದೆ. ಜಿಲ್ಲಾಪರಿಷತ್ ಬಜೆಟ್ ಬೇರೆ ಆಗುತ್ತದೆ. ಅವರವರ ಬಜೆಟ್‌ನಲ್ಲೇ ಅವರವರು ಕ್ಷೇತ್ರವಾರು ಪ್ಲಾನ್ ತಯಾರು ಮಾಡುತ್ತಾರೆ.

ಶ್ರೀ ಜಿ. ರಾಜೂಗೌಡ : ಮೂರು ಹಂತಗಳಲ್ಲಿ ಯಾರೋ ಒಬ್ಬನು ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬಾರದು ಎನ್ನುವಂತಹ ಭಾವನೆ ಮಾನ್ಯ ಮಂತ್ರಿಗಳಿಗೆ ಇದೆ; ಅದು ಅವರ ಅಭಿಪ್ರಾಯ. ನಾನು ಈಗ ಒಬ್ಬ ಶಾಸಕನಾಗಿದ್ದೇನೆ. ಜಿಲ್ಲಾಪರಿಷತ್ತಿನ ಅಧ್ಯಕ್ಷ ಚುನಾವಣೆಯಲ್ಲಿ ಮತ ಹಾಕಲಿಕ್ಕೆ ನನಗೆ ಅಧಿಕಾರ ಇಲ್ಲ. ಆದರೂ ನಾನು ಜಿಲ್ಲಾ ಪರಿಷತ್ ಸದಸ್ಯನಾಗಿ ಆಯ್ಕೆಯಾಗುತ್ತೇನೆ. ಆಯ್ಕೆ ಆಗಿ ನಾನು ಜಿಲ್ಲಾಪರಿಷತ್ತಿನ ಸದಸ್ಯರ ಕೆಪಾಸಿಟಿಯಲ್ಲಿ ಇರುವ ಅಧ್ಯಕ್ಷತೆಗೆ ಕಂಟೆಸ್ಟ್ ಮಾಡಬಹುದು. ಆಗ ಓಟು ಮಾಡುವುದಕ್ಕೆ ಆಗುವುದಿಲ್ಲವೇ? ಅದರ ಬಗ್ಗೆ ತಾವು ಏನು ಹೇಳುತ್ತೀರಿ.

ಶ್ರೀ ಡಿ. ಬಿ. ಚಂದ್ರೇಗೌಡ : ಚುನಾವಣೆಗೆ ಸ್ಪರ್ಧೆ ಮಾಡುವುದಕ್ಕೆ ಯಾರನ್ನು ಯಾರೂ ತಡೆಯುವುದಕ್ಕೆ ಸಾಧ್ಯವಿಲ್ಲ. ಚುನಾವಣೆ ಆದ ಮೇಲೆ ನೀವು ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು. ಪಾರ್ಲಿಮೆಂಟಿಗೆ ಮತ್ತು ಅಸೆಂಬ್ಲಿಗೆ ಗೆದ್ದುಬಿಟ್ಟಿದ್ದೇವೆ ಎಂದು ಕೊಳ್ಳೋಣ. ನಾನೇ ಕೌನ್ಸಿಲ್ ಸದಸ್ಯನಾಗಿದ್ದೆ.

ಶ್ರೀ ಜಿ. ರಾಜೂಗೌಡ : ಅದಕ್ಕೂ ಇದಕ್ಕೂ ಸ್ವಲ್ಪ ವ್ಯತ್ಯಾಸ ಇದೆ. ಏಕೆಂದರೆ ಜಿಲ್ಲಾಪರಿಷತ್ತಿನ ಸಭೆಯಲ್ಲಿ ನಾನು ಶಾಸಕನಾಗಿ ಎಲ್ಲಾ ಪ್ರಕ್ರಿಯೆಗಳಲ್ಲೂ ಮತ ಹಾಕಬಹುದು. Except for the Election of President. ಆದರೆ ಅದು ಲೋಕ ಸಭೆಗೂ ವಿಧಾನ ಸಭೆಗೂ ಹಾಗೆ ಬರುವುದಿಲ್ಲ. ನಾನು ಭಾಗವಹಿಸುವುದು, ಎಲ್ಲಾ ವಿಧದಲ್ಲೂ ಭಾಗಿಯಾಗಬಹುದು. ಮತದಾರರನ್ನು ಭೇಟಿ ಮಾಡಬಹುದು. ಆದರೆ ಒಂದೇ ಒಂದು ನಿರ್ಬಂಧ ಏನೆಂದರೆ, ಅಧ್ಯಕ್ಷ ಚುನಾವಣೆಗೆ ಮಾತ್ರ ಓಟು ಹಾಕಬಾರದು ಎಂದು ಇದೆ. ನಾನು ಶಾಸಕನಾಗಿ ಇರುತ್ತೇನೆ. ಜಿಲ್ಲಾಪರಿಷತ್ತಿನ ಸದಸ್ಯನಾಗಿಯೂ ಆಯ್ಕೆ ಆಗುತ್ತೇನೆ. ಜಿಲ್ಲಾಪರಿಷತ್ತಿನ ಸದಸ್ಯನಾಗಿ ಆಯ್ಕೆ ಆದ ಕೆಪಾಸಿಟಿಯಲ್ಲಿ ನಾನು ಅಧ್ಯಕ್ಷ ಸ್ಥಾನಕ್ಕೆ ನಿಂತುಕೊಳ್ಳಬಹುದೇ ಅಥವಾ ಓಟು ಹಾಕಬಹುದೇ ಎನ್ನುವುದು ಒಂದು ಪ್ರಶ್ನೆ.

ಶ್ರೀ ಡಿ. ಬಿ. ಚಂದ್ರೇಗೌಡ : ಅದಕ್ಕೆ ಅದೇ ಪ್ರಕ್ರಿಯೆ. ಏಕಕಾಲಕ್ಕೆ ಈ ಮೂರು ಹಂತದ ವ್ಯವಸ್ಥೆಯಲ್ಲಿ ಸದಸ್ಯನಾಗುವುದಕ್ಕೆ ಹೀಗೆ ಬಾಹಿರವಾಗುತ್ತದೋ ಹಾಗೆಯೇ ಶಾಸನಸಭೆಯ ಸದಸ್ಯ ಹಾಗೂ ಜಿಲ್ಲಾಪರಿಷತ್ತಿನ ಸದಸ್ಯನಾಗಿ ಆಯ್ಕೆ ಆಗುವುದಕ್ಕೂ ಕೂಡ ಅದೇ ನಿಯಮ ಬಾಹಿರ ಮಾಡುತ್ತದೆ. It is a good point for debate. ಈಗಿರತಕ್ಕಂತಹ ಪರಿಸ್ಥಿತಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆಯೆಂದು ಹೇಳಿದೆ. ಇಲ್ಲಿ ತಾಲ್ಲೂಕು ಪಂಚಾಯಿತಿಯಲ್ಲಿಯೂ ಅಷ್ಟೆ, ಜಿಲ್ಲಾ ಪಂಚಾಯಿತಿಯಲ್ಲಿಯೂ ಅಷ್ಟೆ ಮತ್ತು ಮಂಡಲ ಪಂಚಾಯಿತಿಯಲ್ಲಿ ರುವುದೂ ಅಷ್ಟೆ, ತಾವು ಸಾಮಾನ್ಯ ಸಭೆ ಕರೆಯುವುದಕ್ಕೆ 2 ತಿಂಗಳ ನಿಯಮವನ್ನು ಒಂದು ಇಟ್ಟಿದ್ದೀರಿ. ಇನ್ನೊಂದು ಸಾಮಾನ್ಯ ಸಭೆ ಕರೆಯುವುದಕ್ಕೆ 10 ದಿನ, ಪೂರ್ಣ ಅವಧಿಗಳು.

Sri M. Y. Ghorpade : He has to choose one body within 15 days. ಅದನ್ನು ಈಗಾಗಲೇ ಸೇರಿಸಿದ್ದೇವೆ. If he happens to be elected to two bodies he must choose one of these two within fifteen days. That has been provided.

Sri D. B. Chandre Gowda : ಅದು ಸರಿ. Within fourteen days if he does not resign, whichever is earlier, will go, automatically. ಅದು ಕಾನ್ಸಿಟಿಟ್ಯೂಷನಲ್ ಪ್ರಾವಿಷನ್. ಆದರೆ ನಿಮ್ಮದು ಆ್ಯಕ್ಟ್‌ನಲ್ಲಿ ಸೈಲೆಂಟ್ ಆಗಿದೆ. I have not gone through. It is silent on that. Please try to incorporate. If it is there, it is alright. ಇಲ್ಲಿ ಬಹಳ ಮುಖ್ಯವಾದುದು ಇನ್ನೊಂದು ವಿಚಾರ ಅಂದರೆ, ಎಲ್ಲಾ ಸಂಘಸಂಸ್ಥೆಗಳಲ್ಲೂ ಒಂದು ಸಭೆಯನ್ನು ಕರೆಯುವುದಕ್ಕೆ ಏಳು ದಿವಸಗಳ ನೋಟಿಸ್ ಇರುವುದು. ಎಮರ್ಜೆನ್ಸಿ ಮೀಟಿಂಗ್‌ಗೆ ಐದು ದಿನ. ಆದರೆ ಇಲ್ಲಿ ಹತ್ತು ದಿನ ಇದೆ. ಏತಕ್ಕೆ ಸ್ವಾಮಿ? ಹತ್ತು ದಿನ, ಎಮರ್ಜೆನ್ಸಿ ಮೀಟಿಂಗ್ ಅಂದರೆ ಏಳು ದಿನ, ಎಮರ್ಜೆನ್ಸಿ ಮೀಟಿಂಗನ್ನು 24 ಗಂಟೆಯೊಳಗಾಗಿ ಕರೆಯತಕ್ಕಂಥ ಅವಕಾಶ ನಮಗೆ ಇರಬೇಕು. ಎಂಥ ಸಂದರ್ಭ ಬರಬಹುದೋ? ಈಗ ಇದ್ದ ಐದು ದಿನವನ್ನು ವಿಸ್ತರಿಸಿದ್ದೀರಿ. It is better you go back. ಬಹಳ ಮುಖ್ಯವಾದುದು ಮತ್ತೊಂದು ಏನೆಂದರೆ. ಅಧಿಕಾರಿಗಳನ್ನು ಸಭೆಗೆ ಕರೆಯಬೇಕು ಎಂದಾದರೆ 15 ದಿವಸದ ನೋಟೀಸನ್ನು ಕೊಡಬೇಕು. ಚುನಾಯಿತ ಸದಸ್ಯರಿಗೆ ಹತ್ತು ದಿನ, ಅಧಿಕಾರಿಗಳಿಗೆ 15 ದಿವಸ ನೋಟೀಸ್ ಕೊಟ್ಟು ಕಾಯಬೇಕು. Officers should be summoned within 24 hours either to the Zilla Parishad or to the Taluka Panchayat. He is paid for that. 15 days clear notice is there in the Old Act as well as in the new Act. Please see that the officers... ಅದರ್ ಆಫೀಸರ್ಸ್ ಎಂದರೆ ಜಿಲ್ಲೆ ಒಳಗಡೆ ತಾನೆ. ಜಿಲ್ಲೆ ಹೊರಗಡೆಯಿಂದ ನಾವೇನು ಕರೆಯುವುದಿಲ್ಲ. ತಾಲ್ಲೂಕಿನವರನ್ನು ಜಿಲ್ಲೆಯವರನ್ನು ಕರೆಯಬಹುದು.

Sri M. Y. Ghorpade : He must have some time to go.

ಶ್ರೀ ಕೆ. ಶಿವಮೂರ್ತಿ : ಡೆಫೆನಿಷನ್ ಸರಿಯಿಲ್ಲ. ಎಮರ್ಜೆನ್ಸಿ ಮೀಟಿಂಗ್ ಎಂದು ಇದೆಯಲ್ಲ, ಅದು ಡೆಫನಿಷನ್ ಹತ್ತು ಹದಿನೈದು ದಿವಸ ಆದರೆ ಅದು ಸರಿಯಿಲ್ಲ. We have to define what is emergency meeting.

Sri D. B. Chandregowda : That is my point.

Sri K. Shivamurthy : Your point is right.

ಶ್ರೀ ಡಿ. ಬಿ. ಚಂದ್ರೇಗೌಡ : ಇದನ್ನು ದಯಮಾಡಿ ಕ್ಲಿಯರ್ ಮಾಡಿ. ಹತ್ತು ದಿನ ಇರುವುದನ್ನು ಏಳು ದಿವಸಕ್ಕೆ ಎಲ್ಲಾ ಕಡೆ ಇರುವ ಹಾಗೆ ಮಾಡತಕ್ಕಂಥದ್ದು ಹಾಗೂ ಅಧಿಕಾರಿಗಳಿಗೆ 15 ದಿವಸ ಕಾಲಾವಧಿ ಕೊಡತಕ್ಕಂಥದ್ದು, ಚುನಾಯಿತ ಪ್ರತಿನಿಧಿಗಳಿಗೆ ಹತ್ತು ದಿವಸ ಕೊಡತಕ್ಕಂಥದ್ದು ಇದು ಸರಿಯಿಲ್ಲ. ಚುನಾಯಿತ ಪ್ರತಿನಿಧಿಗಿಂತಲೂ ಕಡಿಮೆ ಅವಧಿಯಲ್ಲಿ ಅಧಿಕಾರಿಗಳು ಸಭೆಗೆ ಬರತಕ್ಕಂಥ ವ್ಯವಸ್ಥೆ ಇರಬೇಕು. This is my point. That is under section 143. Again Section 155, sub-clause(i) ಸರ್ಕಾರಿ ನೇಮಕ, ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ಸರ್ಕಾರಿ ನೇಮಕ, ಹತೋಟಿ ಇರುವುದಿಲ್ಲ. ಜಿಲ್ಲೆಯಲ್ಲೂ ಅವರ ಮೇಲೆ ಹತೋಟಿ ಇಲ್ಲ, ತಾಲ್ಲೂಕಿನಲ್ಲೂ ಹತೋಟಿ ಇಲ್ಲ. ಪಂಚಾಯಿತಿಯಲ್ಲೂ ಹತೋಟಿ ಇಲ್ಲ. ಸ್ವಾಮಿ, ಎಲ್ಲಾ ಸಂಪೂರ್ಣ ಜುಟ್ಟು ಜನಿವಾರ ನೀವು ಇಟ್ಟುಕೊಂಡು ಉಳಿದದ್ದು ಡಿ-ಸೆಂಟ್ರಲೈಜೇಷನ್ ಎಂದು ಶಾಸನದಲ್ಲಿ ಹೇಳಿದ್ದೀರಿ. This is not decentralisation. ಅದಕ್ಕಾಗಿ ಹಿಂದಿನ ಶಾಸನದಲ್ಲಿ ಯಾವುದೇ

ಅಧಿಕಾರಿಯ ಪ್ರಶ್ನೆ ಬಂದಾಗ ಅವನು ಜಿಲ್ಲಾ ಪರಿಷತ್ತಿನ ಅಧಿಕಾರಿ ಎಂದು ಸ್ಪಷ್ಟಪಡಿಸಿದ್ದಾರೆ. ಜಿಲ್ಲಾಪರಿಷತ್ತಿನ ಅಧಿಕಾರಿಯಾದ್ದರಿಂದ ಅವರು ಹತೋಟಿಗೆ ಸಿಗುತ್ತಾರೆ. ಈಗ ಇವನು ಸರ್ಕಾರ ಅಧಿಕಾರಿ ನಾಮಕಾವಸ್ಥೆಗೆ ಜಿಲ್ಲಾ ಪಂಚಾಯಿತಿ. ತಾವು ಹೇಳಿದ ಹಾಗೆ ಫಂಕ್ಷನ್ಸ್ ಬಗ್ಗೆ ನಾನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. Because it requires little bit of study. ದಯವಿಟ್ಟು ಸೆಕ್ಷನ್ 155(i) ನೋಡಿ. ತಾವು ಕತ್ತು ಹಾಕಿಬಿಡುತ್ತೀರಿ, ನನಗೆ ಕಷ್ಟವಾಗುತ್ತದೆ. " ಸರ್ಕಾರಿ ಅಸಿಸ್ಟೆಂಟ್ ಕಮಿಷನರ್ ದರ್ಜೆಯ ಅಥವಾ ಅದಕ್ಕೆ ಸಮಾನವಾದ ರಾಜ್ಯಸರ್ಕಾರಿ ಸೇವೆಯ ಒಬ್ಬ ಗ್ರೂಪ್-ಎ ಅಧಿಕಾರಿಯನ್ನು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ನೇಮಕ ಮಾಡತಕ್ಕಂಥದ್ದು." ಈಗ ಆಫೀಸ್ ಆಫ್ ದಿ ಅಸಿಸ್ಟೆಂಟ್ ಕಮಿಷನರ್ ಇರಬೇಕೆ ಬೇಡವೇ ಎನ್ನುವ ಬಗ್ಗೆ ಒಂದು ಚರ್ಚೆ ಇದೆ. We are trying to dispense them. ಎಲ್ಲಾ ಅಧಿಕಾರ ತೆಗೆದುಕೊಂಡು ಮತ್ತೆ ಅಸಿಸ್ಟೆಂಟ್ ಕಮಿಷನರ್, ವಿಭಾಗಾಧಿಕಾರಿ ಇರಬೇಕೊ ಬೇಡವೋ ಎನ್ನುವ ಪ್ರಶ್ನೆ ಇದೆ; ಆತನಿಗೆ ಅಧಿಕಾರ ಕೊಡುವುದಕ್ಕೆ ಹೋಗುತ್ತಿದ್ದೀರಿ. The permanent officers are only two according to me i.e., the District and the Taluk. ಈ ಮಧ್ಯಸ್ಥರನ್ನು ನೀವು ಇಲ್ಲಿ ತರುತ್ತೀರಿ. ನೇಮಕಾತಿ ಮತ್ತೊಂದಕ್ಕೆ ಬರುವುದಕ್ಕೆ ಮುಂಚೆ.....

Sri. M. Y. Ghorpade: He should be of the rank of the Assistant Commissioner.

Sri D.B.Chandregowda: Rank of the Assistant Commissioner ಅಂದರೆ ತಹಶೀಲ್ದಾರ್ ಅವರನ್ನು ಅದಕ್ಕೆ ಏರಿಸುವುದಕ್ಕಾಗುವುದಿಲ್ಲ. ಡೆಪ್ಯುಟಿ ಕಮಿಷನರನ್ನು ಇಳಿಸುವುದಕ್ಕಾಗುವುದಿಲ್ಲ. ಬೇರೆ ಯಾರಿದ್ದಾರೋ ಅಸಿಸ್ಟೆಂಟ್ ಕಮಿಷನರ್ ರ್‍ಯಾಂಕ್, ನನಗೆ ಗೊತ್ತಿಲ್ಲ.

Sri. M.Y. Ghorpade : The Government shall appoint a Group-A Officer of the State Civil Services, of or equal to the rank of the Assistant Commissioner ಎಂದು ಇದೆ. ಅಂದರೆ ಈಗ ಇರುವ ಬಿ.ಡಿ.ಓಗಳು ಏನಿದ್ದಾರೆ, ಅದನ್ನು ಸ್ವಲ್ಪ ಅಪ್‌ಗ್ರೇಡ್ ಮಾಡಬೇಕು ಎಂದು, Better grade of officer ಇರಬೇಕು ಎಂದು ಇದೆ. Atleast he should be Group-A officer of Assistant Commissioner Rank. ಆ ರ್‍ಯಾಂಕಿನ ಆಫೀಸರ್ ಅನ್ನು ನಾವು ತಾಲ್ಲೂಕಾ ಲೆವಲ್‌ನಲ್ಲಿ ಎಕ್ಸಿಕ್ಯುಟೀವ್ ಆಫೀಸರ್ ಎಂದು ನೇಮ್ಮಿಸಬೇಕು. I thought you would welcome it because we have better administration at the taluka level.

Sri D.B. Chandre Gowda : Administrative control is another thing.

(ಗೊಂದಲ)

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ಈ ಅಸಿಸ್ಟೆಂಟ್ ಕಮಿಷನರ್ ಗ್ರೇಡ್‌ನವರು ಇರಬೇಕು ಎಂದು ಇದೆಯಲ್ಲಾ, ಏನು ಬಿ.ಡಿ.ಓ ಅವರು ಮಾಡುವುದಕ್ಕೆ ಆಗುವುದಿಲ್ಲವೇ ಒಂದು ತಾಲ್ಲೂಕಿನ ಅಡ್ಮಿನಿಸ್ಟ್ರೇಷನ್ ಅನ್ನು.

ಶ್ರೀ ಡಿ. ಬಿ. ಚಂದ್ರೇಗೌಡ : ಬಹಳ ಡೀಟೇಲ್ಸ್‌ಗೆ ಹೋಗಬೇಕಾಗುತ್ತದೆ. ಇದರ ಪರಿಣಾಮ ರಾಜ್ಯದ ಉದ್ಯಗಲಕ್ಕೆ ಇರುವುದರಿಂದ ನಾವು ಪ್ರತಿ ಸೆಕ್ಷನ್ ಅನ್ನು ಕುರಿತು ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಕೆ. ಶಿವಮೂರ್ತಿ : ಈಗ ಅವರು ಏನು ಹೇಳಿದರು, ಅಸಿಸ್ಟೆಂಟ್ ಕಮಿಷನರ್ ಅವರನ್ನು ನಾವು ಅಧಿಕಾರಿಯಾಗಿ ಮಾಡುತ್ತಿದ್ದೇವೆ ಎಂದು. ಈಗ ಏನು ಆಗಿದೆ ಎಂದರೆ ನಮ್ಮ ರೆವಿನ್ಯೂ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾ ಪರಿಷತ್ತಿನ ಅಡ್ಮಿನಿಸ್ಟ್ರೇಷನ್ ಕೆಲಸದ ವಿಚಾರವೇ ಗೊತ್ತಿಲ್ಲ. ಅವರಿಗೆ ಡೆವಲಪ್‌ಮೆಂಟಲ್ ವರ್ಕ್ ಬಗ್ಗೆ ಟಚ್ ಇಲ್ಲ. ಬರೇ ರೆವಿನ್ಯೂ ಕಲೆಕ್ಷನ್ ಬಗ್ಗೆ ಮಾತ್ರ ಗೊತ್ತಿರುವುದು. ಹಾಗಾಗಿ ಅವರವರಲ್ಲಿ ಡಿಫರೆನ್ಸ್ ಆಗಿದೆ. ನಮಗೆ ಇದೊಂದು ತರಹ ಅರಿಸ್ಟೋಕ್ರಟಿ, ಸೆಲ್ಫ್ ಸ್ಟೈಲ್ಡ್ ಇಲಾಖೆಯ ತರಹ ಇದೆ. ಅದಕ್ಕೋಸ್ಕರ ಜಿಲ್ಲಾ ಪರಿಷತ್‌ನವರಿಗೆ ರೆವಿನ್ಯೂ ಇಲಾಖೆಯನ್ನಾಗಲಿ ಅಥವಾ ಬೇರೆ ಇಲಾಖೆಯನ್ನಾಗಲಿ ಮಾತನಾಡಿಸುವ ಅಧಿಕಾರವೇ ಇಲ್ಲ, ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ. ಆದ್ದರಿಂದ ದಯಮಾಡಿ ಹೊಸ ಆಕ್ಟ್‌ನಲ್ಲಿ ಎಲ್ಲ ಇಲಾಖೆಗಳನ್ನು ಸೇರಿಸಿ ಡೆವಲಪ್‌ಮೆಂಟಲ್ ಮೈಂಡ್ ಇರತಕ್ಕ ಆಫೀಸರ್‌ಗಳನ್ನು ನೇಮಕ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತಿದ್ದೇನೆ. ಅದೇ ಗ್ರೇಡ್ ಇರಬಹುದು; ಆದರೆ ಅಲ್ಲಿ ಡೆವಲಪ್‌ಮೆಂಟಲ್ ಮೈಂಡ್ ಬರಬೇಕು. ಅಸಿಸ್ಟೆಂಟ್ ಕಮಿಷನರ್ ಎಷ್ಟೋ ಜನ ಬಂದರು.

ಶ್ರೀ ಜಿ. ರಾಜೂಗೌಡ : ಬಿಡಿಓ ಅವರಿಗೆ ಡೆವಲಪ್‌ಮೆಂಟಲ್ ಮೈಂಡ್ ಇಲ್ಲವೇ? ಅವರಿಗೆ ಇರುತ್ತದೆ ಬಿಡಿ.

ಶ್ರೀ ಕೆ.ಶಿವಮೂರ್ತಿ : ಎಲ್ಲರಿಗೂ ಮೈಂಡ್ ಇದೆ. ಆದರೆ ಕೆಲಸ ಮಾಡಲಿಕ್ಕೆ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಪುನಃ ಡೀಸೆಂಟ್ರಲೈಸೇಷನ್ ಹೆಸರಿನಲ್ಲಿ ಈ ತಾಲ್ಲೂಕು ಪಂಚಾಯತಿಗಳು ಕೂಡ ಸರ್ಕಾರದ ಅಧೀನದಲ್ಲಿ ಕೆಲಸ ಮಾಡಬೇಕಾಗಿದೆ. ಇಲ್ಲಿ ತಾಲ್ಲೂಕು ಪಂಚಾಯತಿಗೆ ಅವಶ್ಯಕ ಎಷ್ಟು ಎಂದು ಕಂಡು ಬರುತ್ತದೋ ಅಷ್ಟು ಸಂಖ್ಯೆಯ ಎ, ಬಿ, ಸಿ ಮತ್ತು ಡಿ ಸೇವಾ ನೌಕರರನ್ನು ಮತ್ತು ಸಿಬ್ಬಂದಿಗಳನ್ನು ಸರ್ಕಾರವೇ ನಿಯುಕ್ತಗೊಳಿಸತಕ್ಕದ್ದು ಎಂದಿದೆ. ಒಬ್ಬ ಜವಾನನನ್ನು ಅಪಾಯಿಂಟ್ ಮಾಡುವ ಅಧಿಕಾರ ಕೂಡ ತಾಲ್ಲೂಕು ಪಂಚಾಯತಿಗೆ ಇಲ್ಲ, ಜಿಲ್ಲಾ ಪರಷತ್ತಿಗೆ ಇಲ್ಲ ಮತ್ತು ಗ್ರಾಮ ಪಂಚಾಯತಿಗೆ ಇಲ್ಲ. and you call this as decentralisation of power.

ಶ್ರೀ ಜಿ. ರಾಜುಗೌಡ : ತಮ್ಮ ಹಿಂದಿನ ಆಕ್ಟ್‌ನಲ್ಲಿ ಕೂಡ ಹಾಗೆಯೇ ಇತ್ತು. ಅಪಾಯಿಂಟ್ ಮಾಡಿಕೊಳ್ಳತಕ್ಕ ಶಕ್ತಿ ಮೊದಲೂ ಇರಲಿಲ್ಲ. ಐದು ರೂಪಾಯಿನದೂ ಕೂಡ ಕೆಲಸ ಮಾಡುವುದಕ್ಕೆ ಆಗುತ್ತಿರಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ನೀವು ಶಾಸನದಲ್ಲಿ ಸರ್ಕಾರೀ ನೇಮಕ ಎಂದು ಹೇಳಿದ ಮೇಲೆ ಅವನು ಸರ್ಕಾರಕ್ಕೆ ಅಷ್ಟೇ ಆನ್ಸರಬಲ್ ಆಗುತ್ತಾನೆಯೇ ಹೊರತು ಜಿಲ್ಲಾ ಪರಿಷತ್ತಿಗೆ, ಮಂಡಲ ಪಂಚಾಯತಿಗೆ ಅಥವಾ ತಾಲ್ಲೂಕು ಪಂಚಾಯತಿಗೆ ಆನ್ಸರಬಲ್ ಆಗುವುದಿಲ್ಲ. ನಾವು ನೀವು ಕುಳಿತುಕೊಂಡು ನಮ್ಮ ಉತ್ತರ ಕೇಳುವಂತೆ ಕೇಳುವುದಕ್ಕೆ ಆಗುವುದಿಲ್ಲ. ಜಿಲ್ಲಾ ಪರಿಷತ್ತಿನ ಅಧಿಕಾರಿ ಎಂದು ಹೇಳಿದರೆ ಅಲ್ಲಿ ಕೇಳತಕ್ಕ ಅಧಿಕಾರ ಬರುತ್ತದೆ. ಆ ದೃಷ್ಟಿಯಿಂದ ......

ಶ್ರೀ ಕೆ. ಶಿವಮೂರ್ತಿ : This is very dangerous. ತಾವು ವಾದ ಮಾಡತಕ್ಕದ್ದು ಇದೆಯಲ್ಲಾ, ಇದು.

ಶ್ರೀ ಜಿ. ಎಸ್. ಶಿವನಂಜಪ್ಪ : ಜಿಲ್ಲಾ ಪರಿಷತ್‌ನಲ್ಲಿ ಅಪಾಯಿಂಟ್ ಮಾಡುತ್ತೀರಾ? ಯಾರು ಅಪಾಯಿಂಟ್ ಮಾಡಬೇಕಾಗಿರುವುದು ಎಂದರೆ, ಸರ್ಕಾರದವರೇ ಚೀಫ್ ಸೆಕ್ರಟರಿಯನ್ನು ಯಾವುದೋ ಗ್ರೇಡ್‌ನಲ್ಲಿರುವವರನ್ನು ಅಪಾಯಿಂಟ್ ಮಾಡಬೇಕಾಗಿರುವುದು. ಇಂತಹದನ್ನು ಸರ್ಕಾರದಲ್ಲಿ ಇಟ್ಟುಕೊಂಡು ಬಿಟ್ಟಿದ್ದೀರಿ, ನಿಮ್ಮ ಅಧೀನಕ್ಕೆ ಬರುತ್ತಾರೆಂದು ಹೇಳಿದರೆ ನನಗೆ ಅರ್ಥ ಆಗಲಿಲ್ಲ. ಅದಕ್ಕೋಸ್ಕರವಾಗಿ ನಾನು ಕಾಯುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ನನ್ನನ್ನು ಅರ್ಥ ಮಾಡಿಕೊಳ್ಳಿ.

Sri K. Shiva Murthy : I am just comming to your resume only. ಈಗ ನಮಗೆ ಡೇಂಜರಸ್ ಪಾಯಿಂಟ್ ಇಲ್ಲೇ, ತಾವು ಆರ್ಗ್ಯೂ ಮಾಡಬೇಕಾದರೆ ನಮಗೆ ಬರತಕ್ಕದ್ದು. ಸರ್ಕಾರಕ್ಕೆ ಕುತ್ತು ಬರತಕ್ಕದ್ದು ಏನು ಅಂದರೆ, ಹಲವಾರು ಜಿಲ್ಲಾ ಪರಿಷತ್ತುಗಳಲ್ಲಿ, ಮಂಡಲ್ ಪಂಚಾಯತಿಗಳಲ್ಲಿ ಅಪಾಯಿಂಟ್‌ಮೆಂಟ್ ಆಗಿ ಹೋಗಿಬಿಟ್ಟಿದೆ. ಇವರಿಗೆ ಸ್ಯಾಲರಿ ಕೊಡುವವರು ಯಾರು? ಅಲ್ಲಿ ಸ್ಯಾಲರಿ ಕೊಡುವುದಕ್ಕೆ ದುಡ್ಡು ಇದೆಯೇ? ಅಲ್ಟಿಮೇಟ್ ಆಗಿ ಇವರು ಬರ್ಡನ್ ಯಾರಿಗೆ ಹಾಕುತ್ತಾರೆ? ಯಾವ ಬೇಸಿಸ್ ಮೇಲೆ ಅಪಾಯಿಂಟ್‌ಮೆಂಟ್ ಮಾಡಬೇಕಾಗುತ್ತದೆ. ಇದನ್ನು ಗವರ್ನಮೆಂಟ್ ಕ್ಲಿಯರ್ ಕಟ್ ಮಾಡಬೇಕು. ಈ ಜವಾಬ್ದಾರಿ ತೆಗೆದುಕೊಳ್ಳುವವರು ಯಾರು? ಈಗ ವಾಟರ್ ಮ್ಯಾನ್ ಅಪಾಯಿಂಟ್ ಮಾಡಿದಿರಿ, ತೋಟಿ ತಳವಾರನ್ನು ಅಪಾಯಿಂಟ್ ಮಾಡಿದಿರಿ, ಇನ್ನೂ ಕ್ಲಾಸ್ ಫೋರ್, ಬಿಲ್ ಕಲೆಕ್ಟರ್ ಅಪಾಯಿಂಟ್ ಮಾಡಿದಿರಿ. ಇವರೆಲ್ಲಾ ಪರ್ಮನೆಂಟ್ ಎಂಪ್ಲಾಯಿಸ್ ಎಂದು. ಆದರೆ ಇವರಿಗೆ ಸಂಬಳ ಮಂಡಲ್ ಪಂಚಾಯತಿಯಿಂದ ಕೊಡುತ್ತಾರೋ ಜಿಲ್ಲಾ ಪರಿಷತ್ತಿನಿಂದ ಕೊಡುತ್ತಾರೋ? ಏನು ಸರ್ಕಾರ ಅದನ್ನು ಹೊತ್ತು ಕೊಳ್ಳಬೇಕಾಗುತ್ತದೋ? ಯಾರೋ ಅಪಾಯಿಂಟ್ ಮಾಡಿದ್ದಕ್ಕೆ ಯಾರೋ ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲ. ದಯಮಾಡಿ ಇದನ್ನು ಸ್ವಲ್ಪ ಕ್ಲಿಯರ್ ಮಾಡಿಕೊಳ್ಳಿ. ಏಕೆಂದರೆ ಅವರೆಲ್ಲ ಸಂಘ ಮಾಡಿಕೊಂಡು ಕೊನೆಗೆ ನಮ್ಮಲ್ಲಿಯೇ ಬಂದು ಸ್ಟ್ರೈಕ್ ಮಾಡುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಎಲ್ಲಾ ಮಾಹಿತಿಯನ್ನು ಇಟ್ಟಿದ್ದೇನೆ. ಯಾವ್ಯಾವ ಬಾಬಿನಲ್ಲಿ ಎಷ್ಟೆಷ್ಟು ದುಡ್ಡು ಕೊಡುತ್ತಾರೆ ಎನ್ನುವುದನ್ನು ನಿಮಗೆ ಹೇಳುತ್ತೇನೆ. ಜಿಲ್ಲಾ ಪರಿಷತ್ತು ಯಾವ ಬಾಬಿನಲ್ಲಿ ದುಡ್ಡು ಕೊಟ್ಟಿದೆ ಎಂದು ಹೇಳುತ್ತೇನೆ. ಯಾವ ಬಾಬಿನಲ್ಲಿ ಉಳಿಸಿ ಎಲ್ಲಿ ಕೊಟ್ಟಿದೆ ಎನ್ನುವುದೂ ನನಗೆ ಗೊತ್ತು. ನೀವು ಸಂಬಳ ಎಲ್ಲಾ ಸರ್ಕಾರ ಕೊಡುತ್ತದೆ ಎಂದು ತಿಳಿಯಬೇಡಿ. ಜಿಲ್ಲಾ ಪರಿಷತ್ತಿನ ಅಕೌಂಟ್‌ನಲ್ಲಿ ಪ್ರತಿತಿಂಗಳು ಎಷ್ಟು ದುಡ್ಡು ಹೋಗುತ್ತದೆ ಎನ್ನುವುದು ಗೊತ್ತೇ?

ಶ್ರೀ ಕೆ. ಶಿವಮೂರ್ತಿ : ಯಾರ್‍ಯಾರು ಟ್ಯಾಕ್ಸ್ ಕಟ್ಟಿಲ್ಲ; ರಿಸೋರ್ಸ್ ಮೊಬಿಲೈಸೇಷನ್ ಎಲ್ಲಿ ಇದೆ, ನನಗೆ ತೋರಿಸಿಕೊಡಿ. ಇವತ್ತು ಯಾರು ಟ್ಯಾಕ್ಸ್ ಕಟ್ಟುತ್ತಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ಹೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಇದನ್ನು ಸುಮ್ಮನೆ ಬರ್ಡನ್ ಆಗಿ ಮಾಡುವುದಕ್ಕಿಂತ ಕ್ಲಿಯರ್ ಆಗಿ ಒಂದು ತೀರ್ಮಾನ ಮಾಡಿ. ಏಕೆ ಅವರನ್ನು ಸುಮ್ಮನೆ ಬಿಲ್ ಕಲೆಕ್ಟರ್ ಆಗಿ ಮಾಡಿ, ನೀರನ್ನು ಬಿಡುವವರನ್ನು ತೋರಿಸಿ, 50 ರೂಪಾಯಿ ಕೊಡುತ್ತೇವೆ, ಬಿಲ್ ಇಲ್ಲವೆಂದು ಹೇಳತಕ್ಕಂಥಾದ್ದು ಆಗಬಾರದು. You must say clearly from which source you are going to make payment ಅದನ್ನು ಹೇಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ : ಈ ವಿಚಾರಗಳ ಬಗ್ಗೆ ಅವರು ಕೇಳಿದ ಹಾಗೆ ನಾನೂ ಸಹ ಪ್ರಶ್ನೆ ಕೇಳಬಹುದು. ಆದರೆ, ಉತ್ತರ ಹೇಳುವ ಸ್ಥಾನದಲ್ಲಿ ನಾನು ಇಲ್ಲ.

ಶ್ರೀ ಕೆ. ಶಿವಮೂರ್ತಿ : ತಾವು ಮಾತನಾಡಬೇಕಾದರೆ ಅನುಭವದ ಮೇಲೆ ಮಾತನಾಡಬೇಕು, ತಾವು ಸಹ ಸರ್ಕಾರ ನಡೆಸಿರತಕ್ಕಂಥವರು ; ತಾವು ಇದರ ಬಗ್ಗೆ ಸಲಹೆ - ಸೂಚನೆಗಳನ್ನು ಪ್ರಾಕ್ಟಿಕಲ್ ಆಗಿ ಇಡಬೇಕು. ಇವೊತ್ತು ಜಿಲ್ಲಾ ಪರಿಷತ್ತುಗಳ ಪರಿಸ್ಥಿತಿ ಏನಾಗಿದೆಯೆಂದರೆ, ಸುಮ್ಮನೆ ಮೀಟಿಂಗ್ ಕರೆಯುತ್ತಾರೆ, ತಿಂಗಳಲ್ಲಿ 29 ದಿವಸ ಅಧಿಕಾರಿಗಳು ಆ ಮೀಟಿಂಗ್‌ಗೆ ಹಾಜರಾಗುತ್ತಾರೆ.

Sri D. B. Chandre Gowda : I will come back to the financial details.

ಶ್ರೀ ಕೃಷ್ಣಪ್ಪ (ತೋಟಗಾರಿಕಾ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀಮಾನ್ ಚಂದ್ರೇಗೌಡರು ಏನೋ ಹೇಳುತ್ತಿದ್ದಾರೆ. ಈ ಬಗ್ಗೆ ಅವರು ಸಮಯ ತೆಗೆದುಕೊಂಡು ಅಪ್ಪಣೆ ಪಡೆದು ಸವಿಸ್ತಾರವಾಗಿ ಸರ್ಕಾರಕ್ಕೆ ಏನೇನು ಹೇಳಬೇಕೋ, ಅದನ್ನು ಹೇಳಬಹುದು. ಈಗ ಅವರ ಸಮಯವೂ ಹೋಗುತ್ತದೆ, ಜೊತೆಗೆ ಅವರು ಏನು ಹೇಳುತ್ತಿದ್ದಾರೆ, ಅದು ನಮಗೆ ಅರ್ಥವಾಗಬೇಕಲ್ಲ. ಅದಕ್ಕೆ ಅವರು ಒಂದು ಕನ್‌ಸ್ಟ್ರಕ್ಟೀವ್ ಸಜೆಷನ್ ಏನಾದರೂ ಕೊಟ್ಟು, ಅದರ ಮೇಲೆ ಭಾಷಣ ಮಾಡುವವರಿದ್ದರೆ ಶ್ರೀಮಾನ್ ಚಂದ್ರೇಗೌಡರು ಆದ ನಂತರ ಇನ್ನಿತರ ಮಾನ್ಯ ಸದಸ್ಯರು ಮಾಡಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ : ನನ್ನ ಉದ್ದೇಶವಿಷ್ಟೆ; Decentralisation in terms of administration ಆಗಿಲ್ಲ. Sub and substance ಅಷ್ಟೆ; ನಾನು ಹೇಳುವುದಿಲ್ಲ. ಎಲ್ಲಿ ಅಡ್ಮಿನಿಸ್ಟ್ರೇಷನ್ ಡಿಸೆಂಟ್ರಲೈಸೇಷನ್ ಆಗುವುದಿಲ್ಲವೋ, ಆಗ ಹತೋಟಿಯೆಲ್ಲಾ ಸರ್ಕಾರದ ಕೈಗೆ ಬೀಳುತ್ತದೆ, ಕೆಳಗಡೆ ಕೆಲಸ ಮಾಡತಕ್ಕಂಥ ವ್ಯವಸ್ಥೆಗಳೇನಿವೆ, ಆ ವ್ಯವಸ್ಥೆಗಳ ಹತೋಟಿಗೆ ಅಧಿಕಾರಿಗಳು ಬರುವುದಿಲ್ಲ, ಅವರು ಸರ್ಕಾರದ ಅಧಿಕಾರಿಗಳಾಗಿಯೇ ಉಳಿಯುತ್ತಾರೆ, ನಾಮಕಾವಸ್ಥೆಗೆ ವಿಕೇಂದ್ರೀಕರಣವಾಗುತ್ತದೆ. ಇಲ್ಲಿನ ಸೆಕ್ಷನ್ 149 ಬಹಳ ಆಸಕ್ತಿದಾಯಕವಾಗಿದೆ. ಇದರ ಕನ್ನಡದಲ್ಲಿರುವ ಸೆಕ್ಷನ್ ಅನ್ನು ನೀವು ಓದಬೇಕು, ಇಂಗ್ಲೀಷಿನಲ್ಲಿರುವುದನ್ನು ಮತ್ತೊಬ್ಬರು ಓದಬೇಕು. ಆಗ ಸರಿಯಾಗಿ ಅರ್ಥವಾಗುತ್ತದೆ! ಕನ್ನಡ ಆ್ಯಕ್ಟ್‌ನಲ್ಲಿ 'ಜನಸಂಖ್ಯೆ' ಎಂಬುದು 159ನೇ ಸೆಕ್ಷನ್ ಅಡಿ ಬರುತ್ತದೆ. ಪುಟ ಸಂಖ್ಯೆ 100ರಲ್ಲಿ 160ನೇ ಸೆಕ್ಷನ್ ಅಡಿ ಕೊನೇ ಸಾಲಿನಲ್ಲಿ ಬರುತ್ತದೆ. ಎಷ್ಟು ಗಂಭೀರವಾಗಿ ಈ ವಿಧೇಯಕವನ್ನು ತಯಾರಿಸಿದ್ದಾರೆನ್ನುವುದಕ್ಕೆ ಇದೊಂದು ಉದಾಹರಣೆ. ಏನೆಂದರೆ, 'ಪ್ರತಿಯೊಂದು ತಾಲ್ಲೂಕಿನಿಂದ ಚುನಾಯಿತರಾಗತಕ್ಕ ಸದಸ್ಯರ ಸಂಖ್ಯೆಯನ್ನು ನಲವತ್ತು ಸಾವಿರ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯನಂತೆ ನಿಗದಿಪಡಿಸಲಾಗಿದೆ. ಹಾಗೆಯೇ ಇಂಗ್ಲೀಷಿನಲ್ಲಿರುವ ಸೆಕ್ಷನ್ 160 ಅನ್ನು ಓದಿಬಿಡುತ್ತೇನೆ.

Sri M. Y. Ghorpade: 50,000 or part therefore, it is like that.

Sri D.B. Chandre Gowda : I will read the section. "The elected member of a Zilla Panchayat shall consist of persons from the Taluks in the district, the number of members to be elected from each taluk being fixed in accordance with the scale of one member for fifty thousand or part thereof" ಇಂಗ್ಲೀಷಿನಲ್ಲಿ ಐವತ್ತು ಸಾವಿರ ಎಂದರೆ ಕನ್ನಡದಲ್ಲಿ ನಲವತ್ತು ಸಾವಿರ ಎಂದೇ? ಇಂಗ್ಲೀಷಿನಲ್ಲಿ 50 ಸಾವಿರ ಎನ್ನುತ್ತಾರೆ, ಕನ್ನಡದಲ್ಲಿ 40 ಸಾವಿರ ಎನ್ನುತ್ತಾರೆ, ಇದರಲ್ಲಿ ಯಾವುದು ಸರಿ ಎಂದು ಗೊತ್ತು ಮಾಡಿದರೆ ನಮಗೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. 50 ಸಾವಿರ ಎಂದರೆ ಇಡೀ ತಾಲ್ಲೂಕಿಗೆ ಜಿಲ್ಲಾ ಪರಿಷತ್ ಪ್ರತಿನಿಧಿ ಮಲೆನಾಡಿನಲ್ಲಿ ಎರಡಕ್ಕಿಂತ ಹೆಚ್ಚು ಇರುವುದಿಲ್ಲ. ನಮ್ಮ ತಾಲ್ಲೂಕಿಗೆ ಎರಡು. ಇದರಲ್ಲಿ ಎಸ್.ಸಿನವರಿಗೆ ಒಂದು ಮೀಸಲಾತಿ, ಹಿಂದುಳಿದ ವರ್ಗದವರಿಗೆ ಒಂದು ಮೀಸಲಾತಿ, ಹೆಣ್ಣುಮಕ್ಕಳಿಗೆ ಒಂದು ಮೀಸಲಾತಿ, ಈ ರೀತಿಯಲ್ಲಿ ನಾಲ್ಕು ವರ್ಗದವರಿಗೆ ಒಂದು ಜಿಲ್ಲೆಯಲ್ಲಿ ಹೇಗೆ ಹಂಚುತ್ತೀರಿ? ಅದನ್ನು ಹಂಚುವುದು ಹೇಗೆ ? ಅದಕ್ಕಾಗಿಯೇ ಅದರ ಬಗ್ಗೆ ಸ್ವಲ್ಪ ವಿವರವಾದಂಥ ಅಭ್ಯಾಸ ಬೇಕಾಗುತ್ತದೆ. ಆದ್ದರಿಂದ ಇದು 50 ಸಾವಿರವೋ ಅಥವಾ 40 ಸಾವಿರವೋ ಎನ್ನುವ ಬಗ್ಗೆ ಖಚಿತವಾಗಿ ಹೇಳಬೇಕು. ಹಿಂದೆ ಜಿಲ್ಲಾ ಪರಿಷತ್ತಿನ ಸದಸ್ಯರಾಗತಕ್ಕಂಥ ಸಂದರ್ಭದಲ್ಲಿ 28 ಸಾವಿರ ಎಂದು ಇತ್ತು, ಮಲೆನಾಡು ಪ್ರದೇಶಗಳಲ್ಲಿ ಅದು 12 ರಿಂದ 15 ಸಾವಿರ ಎಂದು ಇತ್ತು. ಈಗ ದಾಮಾಶ ಮಲೆನಾಡಿನ ಪ್ರದೇಶವನ್ನು ಕಡಿಮೆ ಮಾಡಿದ್ದಾರೆ. ಈಗ ಶಿವಮೊಗ್ಗ ಜಿಲ್ಲೆಯನ್ನು ಮಲೆನಾಡಿನ ಪ್ರಾತಿನಿಧ್ಯದಿಂದ ಹೊರಗೆ ಹಾಕಿದ್ದಾರೆ. ಈಗ ಮಲೆನಾಡಿನ ಪ್ರದೇಶದ ಅಡಿಯಲ್ಲಿ ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು ಬರುತ್ತದೆ, ಇವೆರಡು ಆ್ಯಕ್ಟ್‌ನಲ್ಲಿರತಕ್ಕ ತೊಂದರೆಗಳು.

ಶ್ರೀ ಎಂ. ವೈ. ಘೋರ್ಪಡೆ : ಈ 50 ಸಾವಿರ ಮತ್ತು 40 ಸಾವಿರ ಏನಿದೆ ಇದರ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ನಾನು ಮಾತನಾಡುವಾಗ ಸಹ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಮತ್ತು ಇದರ ಬಗ್ಗೆ ನಾವು ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳಿದ್ದೇನೆ. ಈಗ 40 ಸಾವಿರ ಇರಲಿ ಎಂದು ನೀವು ಹೇಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಇದರ ಬಗ್ಗೆ ತೀರ್ಮಾನ ಆಗಬೇಕಾಗುತ್ತದೆ. Apart from the typographical error. ಕನ್ನಡದಲ್ಲಿ 40 ಸಾವಿರ ಎಂದು ಇದೆ, ಅದನ್ನೇ ಜಾರಿ ಮಾಡುವುದಾದರೆ ತಪ್ಪೇನೂ ಇಲ್ಲ. ಆದರೆ ಇದರ ಬಗ್ಗೆ ಅಂತಿಮವಾದ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇದು 40 ಸಾವಿರ ಇರಬೇಕೆ, 50 ಸಾವಿರ ಇರಬೇಕೆ ಎನ್ನುವ ಬಗ್ಗೆ ನಾವೇ ಸಾಕಷ್ಟು ಚರ್ಚೆ ಮಾಡಿದ್ದೇವೆ, ವಾದ ಮಾಡಿದ್ದೇವೆ. ಅದಕ್ಕೋಸ್ಕರ ಆ ತೊಂದರೆ ಉಂಟಾಗಿದೆ; ಮುದ್ರಣದಲ್ಲಿ ತಪ್ಪಾಗಿದೆ, ಕನ್ನಡದಲ್ಲಿ 40 ಸಾವಿರ ಎಂದು ಇದೆ, ಇಂಗ್ಲೀಷ್‌ನಲ್ಲಿ 50 ಸಾವಿರ ಎಂದು ಇದೆ. ತಾವು ಕನ್ನಡದಲ್ಲಿ ಇರುವುದನ್ನೇ ಒಪ್ಪಿಕೊಳ್ಳುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ.

Sri D. B. Chandre Gowda : I am sorry if I use the language. Please forgive me. The Minister who is piloting the Bill himself is not sure. How do we discuss further?

Sri M. Y. Ghorpade: I fail to understand honestly why this error has taken place. We ourselves were discussing. Now, it is 40,000 in Kannada version and you want me to answer. I would say 40,000.

ಶ್ರೀ ವಾಟಾಳ್ ನಾಗರಾಜ್ : ಈಗ ಒಂದು ತೀರ್ಮಾನಕ್ಕೆ ಬಂದುಬಿಡಿ. ಮುದ್ರಣದಲ್ಲಿ ವ್ಯತ್ಯಾಸವಾಗಿದೆ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಬೇರೆ ಬೇರೆ ರೀತಿಯಲ್ಲಿ ಬಂದಿದೆಯಲ್ಲಾ, ಅದರಲ್ಲಿ ಯಾವುದಾದರೊಂದನ್ನು ಇಟ್ಟುಕೊಳ್ಳೋಣವೆಂದು ಹೇಳುವುದು ಬೇಡ, ಇದರಲ್ಲಿ ಒಂದು ನಿರ್ದಿಷ್ಟವಾದ ನಿಲುವು ಇರಲಿ.

ಶ್ರೀ ಎಂ. ವೈ. ಘೋರ್ಪಡೆ : ಕನ್ನಡದಲ್ಲಿ 40 ಸಾವಿರವೆಂದು ಇದೆ, ಅದನ್ನೇ ಇಟ್ಟುಕೊಳ್ಳೋಣ.

ಶ್ರೀ ಡಿ. ಬಿ. ಚಂದ್ರೇಗೌಡ : ನಾವು ಒಪ್ಪಿಕೊಳ್ಳುವುದಲ್ಲ, ನಿಮ್ಮ ಸರ್ಕಾರ, ನಿಮ್ಮ ಪಕ್ಷ ಒಪ್ಪಿಕೊಳ್ಳಬೇಕಲ್ಲ?

ಶ್ರೀ ಎಂ. ವೈ. ಘೋರ್ಪಡೆ : ಅದಕ್ಕೆ ನಾನು ಜವಾಬ್ದಾರಿ, ಅಷ್ಟೊಂದು ಕಾಳಜಿ ನಿಮಗೇಕೆ? ನಾವು 40 ಸಾವಿರವನ್ನೇ ಒಪ್ಪಿಕೊಳ್ಳುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ : ಕಾಳಜಿ ಏಕೆ ಬೇಕೆಂದು ಹೇಳುತ್ತೇನೆ. I would now say that the entire bill is your thinking and not of your party.

Sri M. Y. Ghorpade : I am a Member of my party. I cannot be separated from the Party.

Sri D. B. Chandre Gowda : If that is the case....

Sri M. Y. Ghorpade : It is with the support of the Party, it is with the support of the cabinet, it is with the support of the Chief Minister, that I am able to place this Bill. Would I do it as an individual? I would not.

(INTERRUPTIONS)

Sri D. B. Chandre Gowda : Then you must be clear. If it is the decision of the Cabinet, then you must be clear.

Sri M. Y. Ghorpade : Apart from this typographical error, I had posed this question, if I remember in the morning. If they want a decision, I would say, let us have 40,000. One member for 40,000 population at Zilla Panchayat level.

5.45 ಪಿ. ಎಂ.

ಶ್ರೀ ಡಿ. ಬಿ. ಚಂದ್ರೇಗೌಡ : ಕನ್ನಡದ ತೀರ್ಪು ಸರಿಯೆ?

ಶ್ರೀ ಎಂ. ವೈ. ಘೋರ್ಪಡೆ : ಕನ್ನಡದಲ್ಲಿರುವುದು ಸರಿ.

ಶ್ರೀ ಡಿ. ಬಿ. ಚಂದ್ರೇಗೌಡ : ಹಾಗಾದರೆ ಇಂಗ್ಲೀಷ್‌ನಲ್ಲಿರುವುದನ್ನೆಲ್ಲಾ ಸುಟ್ಟು ಹಾಕೋಣವೆ?

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಮಂತ್ರಿಗಳು ಏನು ಹೇಳಿದರು ಅದು ಎಷ್ಟರ ಮಟ್ಟಿಗೆ ಸರಿ ಎಂಬುದು ನಮಗೆ ಗೊತ್ತಾಗಬೇಕು. ಇವತ್ತು ಬೆಳಿಗ್ಗೆ ಮಸೂದೆಯನ್ನು ಸಭೆಯ ಮುಂದೆ ಮಂಡಿಸುತ್ತಾ ಕೆಲವು ವಿವರಗಳನ್ನು ಮಾನ್ಯ ಮಂತ್ರಿಗಳು ಕೊಟ್ಟರು. ಸರ್ಕಾರ ಓಪನ್ ಮೈಂಡ್ ಆಗಿದೆ ಎನ್ನತಕ್ಕ ಮಾತನ್ನು ಹೇಳಿರುವಾಗ ಇದರ ಅರ್ಥವೇನು? ಯಾವುದಾದರೊಂದು ವಿಧೇಯಕವನ್ನು ಸಭೆಯ ಮುಂದೆ ಮಂಡಿಸುವಾಗ ಯಾವುದೇ ಪಕ್ಷದ ಸರ್ಕಾರವಿರಲಿ ಅದು ಒಂದು ನಿರ್ಧಿಷ್ಟ ನೀತಿಯ ಆಧಾರದ ಮೇಲೆ ಮಂಡಿಸಬೇಕು, ಇದು ನಮ್ಮ ಅಭಿಪ್ರಾಯವೆಂದು ಹೇಳಬೇಕು. ಅದನ್ನು ಬಿಟ್ಟು ಸರ್ಕಾರ ಓಪನ್ ಮೈಂಡ್ ಆಗಿದೆ ನೀವು ಏನಾದರೂ ಹೇಳಿ, ಆನಂತರ ಚರ್ಚೆ ಮಾಡೋಣ ಎಂದು ಹೇಳುವುದಾದರೆ ಅಂಥ ಚರ್ಚೆ ಮಾಡುವ ಜಾಗ ಈ ವಿಧಾನ ಸಭೆ ಅಲ್ಲ. ವಿಧಾನ ಸಭೆಯಿಂದ ಹೊರಗೆ ಇಂಥ ಚರ್ಚೆಗಳನ್ನು ಮಾಡಬೇಕಾಗುತ್ತದೆ. ಸರ್ಕಾರದವರು ವಿಧಾನ ಸಭೆಯ ಮುಂದೆ ಒಂದು ವಿಧೇಯಕವನ್ನು ತಂದಾಗ ತಮ್ಮ ನೀತಿಯ ಪ್ರತಿಪಾದನೆಯ ಆಧಾರದ ಮೇಲೆ ಈ ವಿಧೇಯಕವನ್ನು ಸಿದ್ಧಪಡಿಸಬೇಕಾಗುತ್ತದೆ. ಅದನ್ನು ಬಿಟ್ಟು, ಸರ್ಕಾರ ಓಪನ್ ಮೈಂಡ್ ಆಗಿದೆ, 40-50 ಸಾವಿರ ಆದರೂ ಆಗಲಿ ಎಂದು ಹೇಳುವುದು ಸರಿಯಲ್ಲ. ಮಾನ್ಯ ಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ಒಂದು ಸಾರಿ ಸದನದ ಮುಂದೆ ವಿಧೇಯಕವನ್ನು ಮಂಡಿಸಿದ ಮೇಲೆ ಅದಕ್ಕೆ ಒಂದು ನಿರ್ದಿಷ್ಟ ನೀತಿ ಇರಬೇಕು. ಆಗ ಮಾತ್ರ ನಾವು ಚರ್ಚೆ ಮಾಡುವುದಕ್ಕೆ, ಟೀಕೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಾವು ಓಪನ್ ಮೈಂಡೆಡ್ ಆಗಿದ್ದೇವೆಂದು ತಾವು ಹೇಳುವುದಾದರೆ ನಾವು ಏನನ್ನು ಚರ್ಚೆ ಮಾಡಬೇಕು?

ಶ್ರೀ ಜಿ. ರಾಜುಗೌಡ : ನಾವು ಯಾವುದೇ ಪ್ರತಿಷ್ಠೆಯ ಅಂಶದಮೇಲೆ ಕುಳಿತಿಲ್ಲ. ರಚನಾತ್ಮಕ ಸಲಹೆಗಳು ಬಂದಾಗ ನಾವು ಸ್ವೀಕರಿಸುತ್ತೇವೆ ಎನ್ನತಕ್ಕ ಮಾತು ಅದು.

ಶ್ರೀ ಹೆಚ್. ಏಕಾಂತಯ್ಯ : ವಿಧಾನ ಸಭೆಯ ಹೊರಗೆ ಚರ್ಚೆಮಾಡುವುದಾದರೆ ಆಗ ತಾವು ಹೇಳತಕ್ಕದ್ದು ಸರಿ.

ಶ್ರೀ ಎಂ.ವೈ. ಘೋರ್ಪಡೆ : ಇದನ್ನು ಅವರು ಸ್ವಾಗತಿಸುತ್ತಾರೆಂದು ನಾನು ತಿಳಿದಿದ್ದೆ. ಏಕೆಂದರೆ, ಡೈರೆಕ್ಟ್ ಎಲೆಕ್ಷನ್ ಗ್ರಾಮಪಂಚಾಯಿತಿಗೆ ಇರಬೇಕೇ, ಬೇಡವೇ ಎನ್ನತಕ್ಕ ಪ್ರಶ್ನೆ ಬಂದಾಗ ನಾವು ಓಪನ್ ಮೈಂಡ್, ಇಲ್ಲಿ ಚರ್ಚೆ ಆದ ಮೇಲೆ ನಾವು ಒಂದು ತೀರ್ಮಾನಕ್ಕೆ ಬರುತ್ತೇವೆಂದು ಹೇಳಿದ್ದು ತಪ್ಪೇನೂ ಇಲ್ಲ. I think it is very democratic. You should have welcomed it. ಅದನ್ನು ಬಿಟ್ಟು We should not criticise it. ಇದರಲ್ಲಿ ಏನಿದೆ. ಇದು typographical error in english ಎಂದು ಇಟ್ಟುಕೊಂಡರೆ, ನಾನು ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ, 40 ಸಾವಿರ ಎಂದೇ ಇಟ್ಟುಕೊಳ್ಳೋಣ. ಇದರಲ್ಲಿ ತಪ್ಪೇನೂ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಇಲ್ಲಿ ಪುನಃ ಮಲೆನಾಡು ಎನ್ನುವಂಥ ಅರ್ಥದಲ್ಲಿ ಮಂಡಲ ಪಂಚಾಯಿತಿಯ ವ್ಯಾಪ್ತಿಗೆ ಬಂದಂಥ ಮಲೆನಾಡು ಜಿಲ್ಲೆಗಳು , ತಾಲ್ಲೂಕು ಪಂಚಾಯಿತಿಯ ವ್ಯಾಪ್ತಿಗೆ ಬಂದಂಥ ಮಲೆನಾಡು ಜಿಲ್ಲೆಗಳು ಮತ್ತು ಜಿಲ್ಲಾ ಪರಿಷತ್ತಿಗೆ ಬಂದವುಗಳ ಬಗ್ಗೆ ಹೇಳುವುದಾದರೆ ನೀವು ಜನಸಂಖ್ಯೆಯನ್ನು ಮಲೆನಾಡಿಗೆ ಸೀಮಿತಗೊಳಿಸಿರುವುದರಿಂದ ಶಿವಮೊಗ್ಗ ಜಿಲ್ಲೆಯನ್ನು ತಾಲ್ಲೂ

ಪಂಚಾಯಿತಿಯಲ್ಲಿ ಕೈ ಬಿಟ್ಟಿದ್ದೀರಿ; ಜಿಲ್ಲಾ ಪಂಚಾಯಿತಿಯಲ್ಲಿ ಕೈಬಿಟ್ಟಿದ್ದೀರಿ. ಮಂಡಲದ ಚುನಾವಣೆ ತೆಗೆದುಕೊಂಡಾಗ ನಾವು ಮಲೆನಾಡಿನವರು. ಜಿಲ್ಲಾ ಪರಿಷತ್ತಿನ ಚುನಾವಣೆ ತೆಗೆದುಕೊಂಡಾಗ ನಾವು ಬಯಲು ಸೀಮೆಯವರು. ಇದು ಹೇಗೆ? ಕೆಲವು ಜಿಲ್ಲೆಗಳಿಗೆ 40 ಸಾವಿರ ಜನಸಂಖ್ಯೆ ಒಂದು ಕ್ಷೇತ್ರವೆಂದು ಏನು ಹೇಳಿದ್ದೀರಿ, ಅದು ಮಲೆನಾಡಿನ ಜಿಲ್ಲೆಗಳಿಗೆ 30 ಸಾವಿರ ಜನಸಂಖ್ಯೆ ಆಗುತ್ತದೆ. ಮಲೆನಾಡು ಜಿಲ್ಲೆಗೆ ನೀವು ಸೇರಿಸಿರುವ ಜಿಲ್ಲೆಗಳು ಯಾವುವು ಎಂದರೆ ಚಿಕ್ಕಮಗಳೂರು, ಉತ್ತರ ಕನ್ನಡ ಮತ್ತು ಕೊಡಗು. ಶಿವಮೊಗ್ಗಾ ಜಿಲ್ಲೆಯನ್ನು ಮಲೆನಾಡು ಜಿಲ್ಲೆಯಿಂದ ಕೈಬಿಟ್ಟಿದ್ದೀರಿ. ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕ ಮಲೆನಾಡು ಪ್ರದೇಶಗಳು ಏನಿವೆ...

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ಮಲೆನಾಡು ಡೆವಲಪ್‌ಮೆಂಟ್ ಬೋರ್ಡನ್ನು ಮಾಡಿದ್ದೇವೆ. ಅದಕ್ಕೆ ಮಲೆನಾಡು ತಾಲ್ಲೂಕುಗಳು ಇಂಥಿಂಥವು ಎಂದು ಗುರ್ತು ಮಾಡಿದ್ದೇವೆ. ಕೇವಲ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗುಗಳನ್ನು ಸೇರಿಸುವುದರಿಂದ ಅದು ಮಲೆನಾಡು ಅಲ್ಲ ; ಮಲೆನಾಡಿನ ತಾಲ್ಲೂಕುಗಳು ಬಹಳ ಇವೆ.

ಶ್ರೀ ಡಿ. ಬಿ. ಚಂದ್ರೇಗೌಡ : ನನಗೂ ಅದೇ ಪಾಯಿಂಟ್. ಮುಂದೆ ನಾನು ಹೇಳಬೇಕೆಂದಿರುವ ಅಂಶವೂ ಅದೇ. ಮಲೆನಾಡು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರತಕ್ಕ ಎಲ್ಲ ತಾಲ್ಲೂಕುಗಳೂ ಏನಿವೆ ಅಲ್ಲಿಗೇ ಒಂದು ನಿಯಮ, ಇಲ್ಲಿಗೆ ಒಂದು ನಿಯಮ ಎಂದರೆ ಹೇಗೆ? ತಾಲ್ಲೂಕಿನ ಚುನಾವಣೆಗೆ ಒಂದು ನಿಯಮ, ಜಿಲ್ಲಾ ಪರಿಷತ್ತಿಗೇ ಒಂದು ನಿಯಮ ಆಗುವುದಿಲ್ಲ. ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳನ್ನು ಯಾವ ಯಾವ ಜಿಲ್ಲೆಗಳ ವ್ಯಾಪ್ತಿಗೆ ತಂದಿದ್ದೀರೋ ಅದೇ ಜಿಲ್ಲಾ ಪಂಚಾಯಿತಿ ಚುನಾವಣೆಗಳಿಗೂ ಆ ಜಿಲ್ಲೆಗಳ ವ್ಯಾಪ್ತಿಗೆ ತನ್ನಿ. ಹಾಗೇನಾದರೂ ನೀವು ಜಿಲ್ಲೆಗಳನ್ನೇ ಗುರ್ತಿಸುವುದು ಕಷ್ಟವೆಂದು ಹೇಳುವುದಾದರೆ, ಮಲೆನಾಡು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯಾವ ಯಾವ ತಾಲ್ಲೂಕುಗಳು ಸೂಚಿತವಾಗಿವೆ ಅವುಗಳಿಗೆ ಈ ಜನಸಂಖ್ಯೆಯ ವಿನಾಯಿತಿಯನ್ನು ಕೊಡಿ. I don't think this would pass the scrutiny of law. ಇದಕ್ಕಿಂತ ಹೆಚ್ಚಿನದಾಗಿ ನಾನು ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಅಧ್ಯಕ್ಷರ ಚುನಾವಣೆಗೂ ಕೂಡ ರಾಜ್ಯಾಂಗದ ತಿದ್ದುಪಡಿಯೇ ಆಧಾರ. ರಾಜ್ಯಾಂಗದ ತಿದ್ದುಪಡಿಯಲ್ಲಿ ಚುನಾಯಿತ ಸದಸ್ಯರಿಗೆ ಸೀಮಿತಗೊಳಿಸಿದ್ದಾರೆ. ಆದುದರಿಂದ ಚುನಾಯಿತ ಸದಸ್ಯರಿಗಷ್ಟೇ ಸೀಮಿತಗೊಳಿಸಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಯುತ್ತದೆ. ಆದರೆ ಇಲ್ಲಿ ಜಿಲ್ಲಾಮಟ್ಟದ ಸಹಕಾರಿ ಸಂಘಗಳನ್ನು ಕೈಬಿಟ್ಟಿದ್ದೀರಿ. ತಾಲ್ಲೂಕಿನಲ್ಲೂ ಇಲ್ಲ, ಜಿಲ್ಲಾಮಟ್ಟದಲ್ಲೂ ಇಲ್ಲ. ಸಹಕಾರಿ ಸಂಸ್ಥೆಗಳನ್ನು ಯಾವ ಕಾರಣಕ್ಕಾಗಿ ಸೇರಿಸಿದ್ದೇವೆ, ಆ ಕಾರಣ ಅರ್ಥವಾದರೆ ಅದನ್ನು ಸೇರಿಸಬೇಕು. ಇಲ್ಲಿ ಸಂಖ್ಯೆ ಜಾಸ್ತಿಯಾಗುತ್ತದೆಂದು ಇಲ್ಲವೇ ಕಡಿಮೆಯಾಗುತ್ತದೆಂದು ಬಿಡುವುದಕ್ಕಾಗುವುದಿಲ್ಲ. ಸಹಕಾರಿ ಸಂಸ್ಥೆಗಳು ಜಿಲ್ಲಾಮಟ್ಟದವು, ತಾಲ್ಲೂಕ್ ಮಟ್ಟದವು, ಜಿಲ್ಲೆಯ ಅಭಿವೃದ್ಧಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ನನ್ನ ಅನಿಸಿಕೆ. ಮುಖ್ಯವಾಗಿ ಸ್ಟೇಟಸ್ ಆಫ್ ದಿ ಪ್ರೆಸಿಡೆಂಟ್. ಮಾನ್ಯ ಅಧ್ಯಕ್ಷರೆ, ಹಿಂದಿನ ಶಾಸನದಲ್ಲಿ ಅಧ್ಯಕ್ಷನಾಗಿರತಕ್ಕಂಥವನಿಗೆ ಸ್ಟೇಟ್ ಮಿನಿಸ್ಟರ್ ಸ್ಟೇಟಸ್, ಉಪಾಧ್ಯಕ್ಷನಿಗೆ ಡೆಪ್ಯುಟಿ ಮಿನಿಸ್ಟರ್ ಸ್ಟೇಟಸ್ ಇತ್ತು. ಈಗ ಈ ಇಬ್ಬರ ಸ್ಟೇಟಸ್ ಏನು ಅನ್ನುವುದಿಲ್ಲ. ಡೀಸೆಂಟ್ರಲೈಸೇಷನ್ ವ್ಯವಸ್ಥೆಯೊಳಗೆ ಸ್ಪಷ್ಟೀಕರಣ ಹಿಂದಿನ ಮಸೂದೆಯಲ್ಲೇ ಆಗಿದೆ. ಈಗ ಅದನ್ನೂ ಕೈಬಿಟ್ಟಿದ್ದಾರೆ. ಕೊಡುವುದಿಲ್ಲವೆಂದು ಹೇಳಿ ಆಲ್‌ರೈಟ್. ಕೊಡುವುದಿಲ್ಲವೆಂದಾದರೂ ತಿಳಿಸೋಣ. ಆಮೇಲೆ ನಮ್ಮ ಸ್ನೇಹಿತರು ನೇರವಾದ ಚುನಾವಣೆಗೆ ಎರಡೆರಡು ಕೋಟಿ ಖರ್ಚುಮಾಡುತ್ತಾರೆ. ಯಾರು ನಿಲ್ಲುತ್ತಾರೆ ನೋಡೋಣವೆಂದು ಹೇಳುತ್ತಿದ್ದರು. ಏನೋ ಫೆಸಿಲಿಟೀಸ್ ಸಿಗಲಿ ಎಂದು ಒಂದು ಅಟ್ರಾಕ್ಷನ್,

ಯಾವುದಾದರೂ ಆಕರ್ಷಣೆಗೆ ಒಂದು ಅಯಸ್ಕಾಂತ ಬೇಕು. ಇದು ಒಂದು ರೀತಿಯ ಅಯಸ್ಕಾಂತವಾಗಿ ಕೆಲಸ ಮಾಡಿದೆ. ಈಗ ಕೆಲವು ಕಾರಣಗಳಿಗಾಗಿ ಉಪಾಧ್ಯಕ್ಷರಿಗೆ ಇಷ್ಟೊಂದು ಫೆಸಿಲಿಟೀಸ್‌ನ ಅಗತ್ಯವಿಲ್ಲ ಎನ್ನತಕ್ಕಂಥಾದ್ದರ 'ಬಗ್ಗೆ ಬಹಳ ದೀರ್ಘವಾಗಿ ಚರ್ಚೆಯಾಯಿತು. ಆದ್ದರಿಂದ ನೀವು ಏನ್ನೂ ಸೂಚನೆ ಮಾಡದೆ ಇದ್ದರೆ ನಾವು ಚರ್ಚೆ ಏನು ಮಾಡುವುದು. What is his status, please tell us. ಅವನಿಗೆ ಸಂಬಳ ಕೊಡುತ್ತಿರೋ, ಸಾರಿಗೆ ಕೊಡುತ್ತೀರೋ, ವೇತನ, ಭತ್ಯೆ ಕೊಡುತ್ತೀರೋ ಇಲ್ಲವೋ, ಕಾರು ಕೊಡುತ್ತಿರೋ ಇಲ್ಲವೋ, ಈಗಿರುವಹಾಗೆ ಅವನಿಗೆ ಸೆಕ್ರೆಟರಿಗಳು ಮತ್ತೊಬ್ಬರು ಇರುತ್ತಾರೋ ಇಲ್ಲವೋ ಹೀಗೆ ಏನೂ ಹೇಳುವುದಿಲ್ಲ ; ಸುಮ್ಮನಿದ್ದೀರಿ. ಆದ್ದರಿಂದ ಕೊಡುವುದಿಲ್ಲವೆನ್ನುವುದರ ಅರ್ಥ; ಅದಕ್ಕಾಗಿಯೇ ನಾನು ಇದನ್ನು ವಿಕೃತವಾದ ಶಾಸನವೆಂದು ಕರೆಯುತ್ತೇನೆ. ಹಾಗೆಯೇ ಎರಡು ತಿಂಗಳಿಗೆ ಒಂದು ಸಭೆ.

ಶ್ರೀ ಕೆ. ಹೆಚ್. ರಂಗನಾಥ್ : ಅದನ್ನು ಆ್ಯಕ್ಟ್‌ನಲ್ಲಿಯೇ ಹೇಳಬೇಕೆ? ನೋಟಿಫಿಕೇಷನ್ ಇಸ್ಯೂ ಮಾಡಿದರೆ ಆಗುವುದಿಲ್ಲವೇ?

ಶ್ರೀ ಡಿ. ಬಿ. ಚಂದ್ರೇಗೌಡ : ಅದಕ್ಕೆ ಗಳ ಮತ್ತು ಹೆಂಚನ್ನು ಇರಿದುಕೊಂಡು ಬಂದುಬಿಟ್ಟಿದ್ದೀರಿ. ನಿಮ್ಮ ಸರ್ಕಾರ ಬಂದ ಮೇಲೆ ಯಾವುವೂ ಇಲ್ಲ. ನೀವು ಕೊಡುವುದನ್ನಾದರೂ ಇಂಥದ್ದನ್ನು ಕೊಡುತ್ತೇವೆ, ಇಂಥಾದ್ದು ಇಲ್ಲ ಎಂದು ಹೇಳಿ. ಶಾಸನದಲ್ಲಿ ಸ್ಪಷ್ಟಪಡಿಸಿ ಹಿಂದೆ ಇತ್ತು. ನೀವು ನೋಟಿಫಿಕೇಷನ್‌ನಲ್ಲಿ ಕೊಡತಕ್ಕಂಥ ಅಧಿಕಾರವನ್ನು ನೀವು ಇಟ್ಟುಕೊಂಡು ಡೀಸೆಂಟ್ರಲೈಸ್ ಮಾಡಿದ್ದೇವೆ ಎಂದರೆ ಏನು ಅರ್ಥ.

ಶ್ರೀ ಕೆ. ಹೆಚ್. ರಂಗನಾಥ್ : ಆ್ಯಕ್ಟ್‌ನಲ್ಲೇ ಬರೆಯಬೇಕೆಂದು ಏನಿದೆ. ರೂಲ್ಸ್‌ನಲ್ಲಿ ಬರೆದುಕೊಂಡರೆ ಆಗುವುದಿಲ್ಲವೇ ಎಂದು ನಾನು ಕೇಳಿದೆ. ಬರೆಯಬಾರದು ಎಂದೇನಿಲ್ಲ. ಅಧಿಕಾರ ಕೊಡುವುದು ಬಿಡುವುದು ಆಮೇಲೆ ವಿಚಾರ ಮಾಡಬೇಕಾಗುತ್ತದೆ. ಆದರೆ ಆ್ಯಕ್ಟ್‌ನಲ್ಲಿ ಅದೇ ಬಹಳ ಮುಖ್ಯವೋ?

ಶ್ರೀ ಡಿ. ಬಿ. ಚಂದ್ರೇಗೌಡ : ಹಿಂದಿನ ಶಾಸನದಲ್ಲಿ, ಮಸೂದೆಯಲ್ಲಿ 5 ವರ್ಷಗಳ ಕಾಲ ರಿಕ್ರೂಟ್‌ಮೆಂಟ್ ರೂಲ್ಸ್‌ಗಳೇ ಆಗಲಿಲ್ಲ. ರೂಲ್ಸ್‌ಗಳಲ್ಲಿ ಹಾಗೆ ಆಗಬಾರದು. ಕನಿಷ್ಟ ಆಯಾಯ ಅಧ್ಯಕ್ಷರ .....

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಚಂದ್ರೇಗೌಡರೆ, ಒಂದು ಐದು ವರ್ಷದ ಅನುಭವವೂ ಆಯಿತಲ್ಲ. ಈ ಸಭೆಯಲ್ಲಿ ದೊಡ್ಡ ಗೊಂದಲವೂ ಆಯಿತು ಇಲ್ಲಿಯೂ ಆಯಿತು, ಹೊರಗಡೆಯೂ ಆಯಿತು. ಟಿ.ಎ., ಡಿ.ಎ.ಗೆ ಖರ್ಚುಮಾಡಿದ ಹಣವೆಷ್ಟು? ಅದಕ್ಕೆ ಲೆಕ್ಕ ಏನಾದರೂ ಇದೆಯೇ? ಈ ಅನುಭವದ ಆಧಾರದ ಮೇಲೆ ಮಾಡುವಾಗ ಏನು ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡಿರುವುದು ಅವಶ್ಯಕ ಇದೆ. ಈಗ ನಾವು 5 ವರ್ಷಗಳ ಅನುಭವದಲ್ಲಿ ನೋಡಿದ್ದೇವೆ. ತಾಲ್ಲೂಕು ಬೋರ್ಡ್ ಅಧ್ಯಕ್ಷರ, ಉಪಾಧ್ಯಕ್ಷರದು ಏನಾಯಿತು. ನಾವು ಸ್ಟೇಟಸ್ ಕೊಟ್ಟಿದ್ದೆವು, ಈ ಮನೆಯಲ್ಲಿ ಕೊಟ್ಟಿದ್ದೆವು , ರಾಜ್ಯದ ಜನರೂ ಒಪ್ಪಿಕೊಂಡಿದ್ದರು, 5 ವರ್ಷ ಅವಕಾಶವನ್ನು ಕೊಟ್ಟರು. ಟೀಕೆ ಬಂದುದು ಏನು ಜನಾಭಿಪ್ರಾಯ ನಾವು ಹೇಳುವ ರೀತಿಯಲ್ಲಿ ಇತ್ತೆ. ಜನಾಭಿಪ್ರಾಯ ಅದಕ್ಕೆ ವಿರೋಧವಾಗಿರಲಿಲ್ಲವೇ?

ಶ್ರೀ ಎಸ್. ಎಚ್. ಕೌಜಲಗಿ : 42 ಮಂತ್ರಿಗಳಾದಿರಿ, ಅದಕ್ಕೆ ಟೀಕೆ ಬರಲಿಲ್ಲವೇ? ಇವರು ಪ್ರವಾಸ ಮಾಡುತ್ತಿಲ್ಲವೇ 42 ಜನ ಮಂತ್ರಿಗಳೂ ಪ್ರವಾಸ ಮಾಡುತ್ತಿಲ್ಲವೆ ? ಅವರದು ತೆಗೆದುಕೊಳ್ಳಬಾರದೆಂದರೆ ಹೇಗೆ.

ಶ್ರೀ ಕೆ. ಹೆಚ್. ರಂಗನಾಥ್ : ನಾವು ತರಿಸಿಕೊಂಡು ನೋಡೋಣ. ಅದೆಷ್ಟು ಪ್ರವಾಸವಾಯಿತು, ಭತ್ಯ ಎಷ್ಟಾಯಿತು, ಮಂತ್ರಿಗಳು ಅಷ್ಟಾಗಿತ್ತೋ ಇವರುಗಳದ್ದು ಜಾಸ್ತಿಯಾಗಿತ್ತೋ ಎನ್ನುವುದನ್ನು ತರಿಸಿಕೊಂಡು ನೋಡೋಣ. ಅಷ್ಟಾಗಿಲ್ಲವೆಂದರೆ ಎಷ್ಟಕ್ಕಾಗಬೇಕು. ಮಂತ್ರಿಗಳ ವ್ಯಾಪ್ತಿ ಎಷ್ಟಿರುತ್ತದೆ, ಜಿಲ್ಲಾಪರಿಷತ್ತಿನ ವ್ಯಾಪ್ತಿ ಎಷ್ಟಿರುತ್ತದೆ. ಕೊಡಬಾರದು ಅಥವಾ ಕೊಡಬೇಕೆನ್ನತಕ್ಕಂಥದ್ದಲ್ಲ. ಇದಕ್ಕೆ ಕೆಲವು ಅನುಭವ ಆಧಾರಗಳಿವೆ. ಆ್ಯಕ್ಟ್‌ನಲ್ಲೇ ಬರಬೇಕೆನ್ನುವುದು ಏನು? ಆಕ್ಟ್‌ನಲ್ಲಿ ಬರೆದರೆ ಮಾತ್ರ ಆಗುತ್ತದೆಯೋ; ಕೊಡಬೇಕೆನ್ನತಕ್ಕಂಥ ಮನಸ್ಸು ಬಂದಾಗ ರೂಲ್ಸ್‌ನಲ್ಲಿ ಮಾಡಿಕೊಡಬಹುದಲ್ಲ. ನನ್ನ ಒಂದು ಅಭಿಪ್ರಾಯವನ್ನು ತಮ್ಮ ಮುಂದೆ ಇಟ್ಟೆ. ಕೊಡಬಾರದು ಎಂಬ ಪ್ರಶ್ನೆಯಲ್ಲ. ಕೊಡಬೇಕಾಗುತ್ತದೆ. ಸ್ಥಾನಕ್ಕೆ ಗೌರವ ಕೊಡಬೇಕಾಗುತ್ತದೆ. ಅದನ್ನು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ : ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಅಥವಾ ಉಪಾಧ್ಯಕ್ಷರಿಗೆ ಭಿಕ್ಷೆ ಕೇಳಬೇಕಾದಂಥ ಸ್ಥಿತಿ ಇರಬಾರದು. ನೀವು ವಿಕೇಂದ್ರೀಕೃತ ವ್ಯವಸ್ಥೆ ಎಂದು ಹೇಳಿ, ಅವನ ಸ್ಟೇಟಸ್‌ನ್ನು ಗುರುತು ಮಾಡದೆ ಸರ್ಕಾರದ ಮರ್ಜಿಯಲ್ಲಿ ಕೆಲಸ ಮಾಡತಕ್ಕಂಥ ವ್ಯವಸ್ಥೆ ಮಾಡುವುದಾದರೆ ಹೇಗೆ? ಅದಕ್ಕೋಸ್ಕರವಾಗಿ ನಾನು ಪದೆಪದೇ ಇದು ವಿಕೃತವಾದಂಥ ವ್ಯವಸ್ಥೆಯೆಂದು ಹೇಳುತ್ತಿದ್ದೇನೆ. ಇದು ಒಂದು ತರಹ ಯಾರದ್ದೋ ಆಸ್ತಿಯನ್ನು ಹಂಚಿಕೊಟ್ಟ ಹಾಗೆ ಇದೆ. ರಾಜ್ಯಾಂಗದತ್ತವಾಗಿ 73ನೇ ತಿದ್ದುಪಡಿಯನ್ವಯ ಮಾಡಿ ಎಂದು ಹೇಳಿದ್ದಾರೆ. ನೀವು ಮಾಡುವಾಗ ಕೊಡಬೇಕೋ, ಬಿಡಬೇಕೋ ಎನ್ನುವುದನ್ನೆಲ್ಲ ಸ್ಪೆಸಿಫೈ ಮಾಡಬೇಕಾಗುತ್ತದೆ. ಅದನ್ನು ಸ್ಪೆಸಿಫೈ ಮಾಡದೇ ಇದ್ದರೆ ರಾಜ್ಯಾಂಗದ 73ನೇ ತಿದ್ದುಪಡಿಯಲ್ಲಿ ಕೊಟ್ಟಂತಹ ಆದೇಶಕ್ಕೆ ವಿರುದ್ಧ ಆಗುತ್ತದೆ ಎಂಬುದು ನನ್ನ ಅಭಿಪ್ರಾಯ. ಆದ್ದರಿಂದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಟೇಟಸ್ ಏನು ? That should be made clear in the Act itself. ನಾನು ಇನ್ನು ಫೈನಾನ್ಸ್‌ಗೆ ಹೋಗುವುದಕ್ಕೆ ಮುಂಚೆ ಒಂದು ಸೆಕ್ಷನ್ 310..

ಶ್ರೀ ಕೆ. ಶಿವಮೂರ್ತಿ : ಮೊದಲು ಫೈನಾನ್ಸ್ ಬಗ್ಗೆ ಚರ್ಚೆ ಮಾಡಿದರೆ ಒಳ್ಳೆಯದು.

ಶ್ರೀ ಡಿ. ಬಿ. ಚಂದ್ರೇಗೌಡ : ಅದಕ್ಕೆ ಕನಿಷ್ಟ ಒಂದು ಗಂಟೆಯಾದರೂ ಬೇಕಾಗುತ್ತದೆ. ಅವಕಾಶ ಕೊಟ್ಟರೆ ನಾನು ಮಾತನಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಚಂದ್ರೇಗೌಡರೆ, The whole discussion is based on the finance. ಪಾಪ, ಅವರಿಗೆ ಅಧಿಕಾರ ಕೊಡಿಸಲಿಕ್ಕೆ ಎಷ್ಟು ಗಂಭೀರವಾಗಿ ತಾವು ಒತ್ತಾಯ ಮಾಡುತ್ತಿದ್ದೀರೋ ಹಾಗೆ ಹಣವನ್ನೂ ಕೊಡಿಸಬೇಕಾಗುತ್ತದೆ. Power and money should go together, than only it is development. ನಾಮಕಾವಸ್ಥೆಗೆ ಜಿಲ್ಲಾಪರಿಷತ್ತು ಎಂದು ಮಾಡುವುದು ಬೇಡ. ದಯವಿಟ್ಟು ಆ ದಿಸೆಯಲ್ಲಿ ವಾದ ಮಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಪಂಚಾಯತಿ ವಿಸರ್ಜನೆಯ ಅಧಿಕಾರ ವಿಭಾಗೀಯ ಕಮಿಷನರ್‌ಗೆ ಎಂದು ಹಳೆಯ ಆ್ಯಕ್ಟ್ 270ರಲ್ಲಿದೆ. ಆಗ ಜಿಲ್ಲಾಪರಿಷತ್ತಿಗೂ ಅಧಿಕಾರ ಇತ್ತು. ಹಳೆಯ ಆ್ಯಕ್ಟ್ 271ರಲ್ಲಿ ಜಿಲ್ಲಾ ಪರಿಷತ್ತಿಗೂ

ಅಧಿಕಾರ ಇತ್ತು. ಈಗ ಜಿಲ್ಲಾ ಪರಿಷತ್ತಿಗೆ ಏನೂ ಇಲ್ಲವೇ ಇಲ್ಲ. ಪಂಚಾಯತಿ ಮೇಲೆ ಸೂಪರ್‌ವಿಷನ್ ಇಲ್ಲ. ಅಧಿಕಾರಿಗಳ ಮೇಲೆ ಸೂಪರ್‌ವಿಷನ್ ಇಲ್ಲ. ಆದಕ್ಕೇ ನಾನು ಹೇಳಿದೆ. ಇವರು ನಿಖರವಾಗಿ ಏನೂ ಹೇಳಿಲ್ಲ ಎಂದು; ಅದಕ್ಕಾಗಿ ಜಿಲ್ಲಾಪರಿಷತ್ತಿಗೆ ಪಂಚಾಯತಿಗಳ ಮೇಲೆ ಇದ್ದ ಹತೋಟಿಯೂ ಇಲ್ಲ, ಅಧಿಕಾರ ಇಲ್ಲ, ಅಧಿಕಾರಿಗಳೂ ಇಲ್ಲ. ಮತ್ತು ಅವನ ಯೋಗ್ಯತೆ ಏನು, ಘಟನೆ ಏನು ಎಂದು ಗೊತ್ತಿಲ್ಲ. ಹೀಗಾದರೆ ಜಿಲ್ಲಾ ಪರಿಷತ್ತು ಏಕೆ? This is total departure from the original Act, That is my complaint. ಸೆಕ್ಷನ್ 310 ರಲ್ಲಿ ಬಹಳ ಮುಖ್ಯವಾಗಿ, ಒಂದು ಹೊಸ ಸಮಿತಿಯನ್ನು ಮಾಡಿದ್ದಾರೆ. ಇದು ಬಹಳ ಇಂಟರೆಸ್ಟಿಂಗ್ ಆಗಿದೆ. 310ರಲ್ಲಿ ಸರ್ಕಾರದ್ದು ಏನು ಮನಸ್ಸು ಇದೆ ಎಂದು ನಮಗೆ ಗೊತ್ತಿಲ್ಲ. ನಮಗೆ ಮೋಸ ಮಾಡುತ್ತಿದ್ದಾರೆ ಎಂದು ಹೇಳಿದರೆ ಮಂತ್ರಿಗಳು ತಪ್ಪು ತಿಳಿದುಕೊಳ್ಳಬಾರದು. 310ರಲ್ಲಿ ಒಂದು ಹೊಸ ಸಮಿತಿಯನ್ನು ಮಾಡಿದ್ದಾರೆ. That is the Supervisery Committee ಎಂದು ಕರೆಯುವುದೋ ಏನೋ ಗೊತ್ತಿಲ್ಲ. ಸೆಕ್ಷನ್ 310, ಪುಟ 150 - ಇಂಗ್ಲೀಷಿನಲ್ಲಿರುವುದನ್ನು ಓದುತ್ತೇನೆ. ಇಲ್ಲಿ ಏನು ಹೇಳುತ್ತಿದ್ದಾರೆ ಎಂದರೆ, Government shall constitute in every district a District Planning Committee to consolidate the plans prepared by the Zilla Parishats, Taluk Pànchayats, Grama Panchayats, and beyond this Nagarapalikas, Municipal Councils and Municipal Corporations in the District and to prepare a Draft Development Plan for the district as a whole. ಇವರು ಏನು ಮಾಡಿದ್ದಾರೆ ಎಂದರೆ, ಜಿಲ್ಲಾ ಪರಿಷತ್ ಇತ್ತಲ್ಲ. It is not the final authority. ಅದು ತಯಾರು ಮಾಡುವಂಥ ಯೋಜನೆಗಳು ಕೂಡ ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿಗೆ ಹೋಗಬೇಕು. The District Planning Committee shall consist of the Members of house of people, who represent the whole or part thereof, Members of the Council of the State who are registered in the District.

"(c) Adhyaksha of the Zilla Panchayat ;

(d) Mayor or the President of the Municipal Corporation or the Municipal Council respectively having jurisdiction over the head quarters of the District ;

(e) ....

(3) All the Members of the State Legislative Assembly whose constituencies lie within the district....

(4) The Chief Executive Officer shall be the Secretary of the Committee.

(5) The Chairman of the District Planning Committee shall be chosen in the manner as may be prescribed." ಇದರಲ್ಲಿ ಯಾರು ಅಧ್ಯಕ್ಷರು ಆಗಬೇಕು ಎಂಬ ಅಧಿಕಾರವನ್ನು ಮತ್ತೆ ಅವರೇ ಇಟ್ಟುಕೊಂಡಿದ್ದಾರೆ. ನಮಗೆ ಇಲ್ಲ. ಇಲ್ಲಿ ಕನ್ನಡದಲ್ಲಿ ನಿಯಮ 310ರಲ್ಲಿ ಈ ರೀತಿ ಹೇಳಿದ್ದಾರೆ.

(1) ಸರ್ಕಾರವು, ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳು ಮತ್ತು ನಗರ ಪಂಚಾಯತಿಗಳು, ಜಿಲ್ಲೆಯಲ್ಲಿರುವ ಪುರಸಭಾ ಪರಿಷತ್ತುಗಳು ಮತ್ತು ನಗರ ಪೌರಸಭಾ ನಿಗಮಗಳ ಯೋಜನೆಗಳನ್ನು ಕ್ರೋಢೀಕರಿಸಲು ಮತ್ತು ಒಟ್ಟಾರೆ ಜಿಲ್ಲೆಗಾಗಿ ಒಂದು ಅಭಿವೃದ್ಧಿ ಯೋಜನೆಯ ಕರಡನ್ನು ತಯಾರಿಸಲು ಪ್ರತಿಯೊಂದು ಜಿಲ್ಲೆಗೂ ಒಂದೊಂದು ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸತಕ್ಕದ್ದು.

(2) ಜಿಲ್ಲಾ ಯೋಜನಾ ಸಮಿತಿಯು :

(ಎ) ಇಡೀ ಜಿಲ್ಲೆಯನ್ನು ಅಥವಾ ಅದರ ಭಾಗವನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯರು;

(ಬಿ) ಜಿಲ್ಲೆಯಲ್ಲಿನ ಮತದಾರನೆಂಬುದಾಗಿ ನೋಂದಾಯಿಸಿದ ರಾಜ್ಯಸಭೆಯ ಸದಸ್ಯರು;

(ಸಿ) ಜಿಲ್ಲಾ ಪಂಚಾಯತಿಯ ಅಧ್ಯಕ್ಷ ;

(ಡಿ) ಜಿಲ್ಲೆಯ ಕೇಂದ್ರ ಕಾರ್ಯಸ್ಥಳದ ಅಧಿಕಾರ ವ್ಯಾಪ್ತಿ ಹೊಂದಿರುವ ಪುರಸಭಾ ನಿಗಮ ಅಥವಾ ಪುರಸಭಾ ಪರಿಷತ್ತಿನ ಅನುಕ್ರಮವಾಗಿ ಮೇಯರ್ ಅಥವಾ ಅಧ್ಯಕ್ಷ.;

ಇಲ್ಲಿ ಅಧ್ಯಕ್ಷರು ಯಾರು? ಇಲ್ಲೇ ಕೆಳಗೆ,

(3) ...... ಜಿಲ್ಲಾಧಿಕಾರಿಯವರು ಸಮಿತಿಯ ಖಾಯಂ ಆಹ್ವಾನಿತರಾಗಿರತಕ್ಕದ್ದು.

(4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸಮಿತಿಯ ಕಾರ್ಯದರ್ಶಿ ಆಗಿರತಕ್ಕದ್ದು.

(5) ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರನ್ನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಆಯ್ಕೆ ಮಾಡತಕ್ಕದ್ದು.

ಯಾರು ಅವರು? ಇಲ್ಲಿ ಮೊದಲು ತಾವು ಹೇಳಿದಿರಿ. ಜಿಲ್ಲಾಪಂಚಾಯಿತಿಗಳ, ತಾಲ್ಲೂಕು ಪಂಚಾಯಿತಿಗಳ, ಗ್ರಾಮಪಂಚಾಯತಿಗಳ ಅಧ್ಯಕ್ಷರು ಯಾರು? ಚುನಾಯಿತ ಸದಸ್ಯರೇ ಇಲ್ಲಿಅಧ್ಯಕ್ಷರನ್ನು ಮಾಡತಕ್ಕದ್ದು. ಇಲ್ಲಿ ಚುನಾಯಿತ ಸದಸ್ಯರು ಇಲ್ಲ; ಎಲ್ಲಾ ಪದನಿಮಿತ್ತ ಸದಸ್ಯರು. ಅಧ್ಯಕ್ಷರು ಯಾರು? ಇಲ್ಲಿ ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರೇ ಇದರ ಅಧ್ಯಕ್ಷರು ಆಗಿರಬೇಕೆನ್ನತಕ್ಕದ್ದು ಎಂದು ಮೊದಲು ಆಲೋಚನೆ ಮಾಡಿದ್ದು. ಈಗ ಜಿಲ್ಲಾ ಮಂತ್ರಿಗಳು ಅದರ ಅಧ್ಯಕ್ಷರಾಗುತ್ತಾರೆನ್ನುವ ಶಂಕೆ ನನಗಿದೆ. ಅದಕ್ಕಾಗಿ ಹಾಗೇ ಇಟ್ಟುಕೊಂಡಿದ್ದೀರಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಮಂತ್ರಿಯವರು ಲಾಟರಿ ಮೂಲಕ ಆಯ್ಕೆ ಮಾಡುತ್ತಾರೆಂದು ಕಾಣುತ್ತದೆ.

ಶ್ರೀ ಎಂ.ವೈ.ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಅವರು ಪ್ರಶ್ನೆ ಕೇಳುವುದಕ್ಕಿಂತ ಮುಂಚೆಯೇ ನಾನು ಹೇಳಿದೆ. ಸಂವಿಧಾನ ತಿದ್ದುಪಡಿಯಲ್ಲಿ ಯಾವ ಭಾಷೆ ಉಪಯೋಗಿಸುತ್ತಾರೋ ಅದನ್ನು ಇಲ್ಲಿ ಉಪಯೋಗಿಸಿದ್ದಾರೆ. ಆದರೆ ಇದರ ಬಗ್ಗೆ ನಾವು ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬರಬಾರದು ಎಂದಿಲ್ಲ. ಜಿಲ್ಲಾ ಪಂಚಾಯಿತಿ ಅಧ್ಯಕ್ಷರೇ ಈ ಸಮಿತಿಗೆ ಅಧ್ಯಕ್ಷರಾಗಬೇಕು. We will make that clear in the Act. ಅದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ತಾವು ಪ್ರಶ್ನೆ ಕೇಳುವುದಕ್ಕಿಂತ ಮುಂಚೆ ನಾನು ಹೇಳಿದೆ. ವೇಗ್ ಆಗಿ ಇರುವುದು ಬೇಡ, ಆ್ಯಕ್ಟ್‌ನಲ್ಲಿ ಸೇರಿಸೋಣವೆಂದು;

ಶ್ರೀ ಡಿ. ಬಿ. ಚಂದ್ರೇಗೌಡ : ಮೊದಲೇ ಮಸೂದೆಯಲ್ಲಿ ಸೇರಿಸಿದ್ದರೆ ಕೇಳುತ್ತಿರಲಿಲ್ಲ.

Sri M. Y. Ghorpade : I have said on my own that we will make it very clear in the Act itself. I will bring an official amendment to make it clear.

Sri D. B. Chandre Gowda : Now I will raise a question. ಇನ್ನು ಮೇಯರ್. ಶಿವಮೊಗ್ಗ ಜಿಲ್ಲೆಯ ಮೇಯರ್ ಇದರ ಸದಸ್ಯರಾಗುತ್ತಾರೆ. ಮತ್ತೆ ಇಲ್ಲಿ ಪ್ರಶ್ನೆ ಬರುತ್ತದೆ. ಈ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಈ ಅರ್ಬನ್ ಆಕ್ಟ್ ಪುರಸಭೆ ಮತ್ತು ಕಾರ್ಪೊರೇಷನ್ ಆಕ್ಟ್‌ಗಳು ಏನಿವೆ ಅವು ಈ ವ್ಯಾಪ್ತಿಯಲ್ಲಿ ಬರುವುದಕ್ಕೆ ಸಾಧ್ಯವೇ? ರಾಜ್ಯಾಂಗದ ಅಮೆಂಡ್‌ಮೆಂಟ್ ಬಿಲ್‌ನಲ್ಲಿ, 72nd amendment of Municipalities ನಲ್ಲಿ ಇದನ್ನು ತಂದಿದ್ದರು. ಅಲ್ಲಿ ಆ ಆಕ್ಟ್‌ನಲ್ಲಿ ಅದನ್ನು ಸೇರಿಸಿದರು. ಬಹುಶಃ ಆ ಆಕ್ಟ್ ಇಲ್ಲಿ ಜಾರಿಗೆ ಬರದೆ ಇರುವ ಕಾರಣ, ಅದನ್ನು ಕಿತ್ತು ಇಲ್ಲಿಗೆ ಹಾಕತಕ್ಕ ಪ್ರಯತ್ನ ಮಾಡಿದರು. Again it will have to stand the scrutiny of law, stand the scrutiny of the counts, and it will have to stand the scrutiny of the Act itself. ಜಿಲ್ಲಾ ಪರಿಷತ್‌ನ ಶಾಸನದೊಳಗೆ ಇದು ಹೇಗೆ ಜಾರಿಗೆ ಬರುತ್ತದೆ? ಎನ್ನತಕ್ಕದ್ದು ಅಥವಾ how does it fit in the frame work of law is to be examined . That is all my comment. ಮಾನ್ಯ ಅಧ್ಯಕ್ಷರು ಅನುಮತಿಯನ್ನು ಕೊಟ್ಟರೆ ಬಹಳ ಹೊತ್ತು ತೆಗೆದುಕೊಳ್ಳುವುದಿಲ್ಲ ನಾಳೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. I am really exhausted.

ಅಧ್ಯಕ್ಷರು. : ಇನ್ನು ಮಾತನಾಡುವವರು ವಾಟಾಳ್‌ನಾಗರಾಜ್. ದೇಶಪಾಂಡೆಯವರು ಇದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾಡಲಿ, ಹೆಚ್ಚು ಏನು ಇರುವುದಿಲ್ಲ. ಫೈನಾನ್ಸ್ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. I need some time. I am really exhausted. If you permit me ನಾಳೆ ಮುಂದುವರಿಸುತ್ತೇನೆ. ಇಲ್ಲದಿದ್ದರೆ ಇದನ್ನೆ ಮುಕ್ತಾಯವೆಂದು ತಿಳಿದುಕೊಳ್ಳಬಹುದು. ಅವರು ಪರ್ಟಿಕ್ಯುಲರ್ ಆಗಿ ಫೈನಾನ್ಸ್ ಬಗ್ಗೆ ನಾಲ್ಕು ಮಾತು ಹೇಳಿ ಎಂದು ಹೇಳಿದರು. ತಾವು ಅನುಮತಿಯನ್ನು ಕೊಟ್ಟರೆ ನಾಳೆ ಮುಂದುವರಿಸುತ್ತೇನೆ.

ಅಧ್ಯಕ್ಷರು : ನಾಳೆ ಮಾತನಾಡುವುದಕ್ಕೆ ಸಮಯಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದು ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ. ಸುಮ್ಮನೆ 10 ನಿಮಿಷ 20 ನಿಮಿಷ ಮಾತನಾಡುವುದರಿಂದ ಪ್ರಯೋಜನವಾಗುವುದಿಲ್ಲ. ಇದರ ಸಾಧಕಬಾಧಕಗಳ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಎಲ್ಲರೂ ಅವರವರ ಅಭಿಪ್ರಾಯಗಳನ್ನು ಮಂಡಿಸಬೇಕಾಗುತ್ತದೆ. ದಯಮಾಡಿ ತಾವು ಹೆಚ್ಚು ಕಾಲಾವಕಾಶವನ್ನು ಕೊಡಬೇಕಾಗುತ್ತದೆ. ನಾನು ನಾಳೆ ಮಾತನಾಡುತ್ತೇನೆ. ಮಾನ್ಯ ಚಂದ್ರೇಗೌಡರು ಇನ್ನೂ ಮುಗಿಸಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಮಗೆ ಪರ್ಮಿಷನ್ ಹೇಳಿದ್ದಾರೆ. ತಾವು ಟೈಮ್ ಕೊಟ್ಟರೆ ನಾಳೆ ಮಾತನಾಡುತ್ತೇನೆಂದು ಹೇಳಿದ್ದಾರೆ, ಇಲ್ಲದಿದ್ದರೆ ಮುಕ್ತಾಯ ಮಾಡುತ್ತೇನೆಂದಿದ್ದಾರೆ. ಅದು ತಮಗೆ ಬಿಟ್ಟಿದ್ದು. ನಾನು ಹೇಳುತ್ತೇನೆ, ಇದರ ಬಗ್ಗೆ ಬಹಳ ವಿವರವಾಗಿ ಚರ್ಚೆಯಾಗಬೇಕಾಗಿದೆ. ಇದರ ಬಗ್ಗೆ ಸರ್ಕಾರಕ್ಕೆ ಕನ್‌ಫ್ಯೂಶನ್ ಇದೆ. ಹೆಜ್ಜೆ ಹೆಜ್ಜೆಗೆ ಸಚಿವರು ನಿಮ್ಮ ಅಭಿಪ್ರಾಯ ಹೇಳಿ. ನಾನು ಬೇಕಾದರೆ ಬದಲಾವಣೆ ಮಾಡುತ್ತೇನೆಂದು ಹೇಳುತ್ತಿದ್ದಾರೆ. ಅಂದರೆ ಗೌರ್ನಮೆಂಟ್ ಫರ್ಮ್ ಇಲ್ಲ. ಗೌರ್ನಮೆಂಟ್‌ಗೆ ಈ ಬಿಲ್ ಬಗ್ಗೆ ಫರ್ಮ್ ಇರಬೇಕಾಗಿತ್ತು , ನೀವು ಫರ್ಮ್ ಇದ್ದೀರಾ?

Sri M. Y. Ghorpade : I take strong objection to this. I have only said, 'we have open mind'. That doesn't mean that we are not firm. After all it is a democratic debate. We cannot come with closed mind.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸಚಿವರು ಒಂದು ಮಾತು ಹೇಳಿದರು. ಹಿಂದೆ ಏನು ಹೇಳಿದರು, ವಿರೋಧಪಕ್ಷದ ನಾಯಕರನ್ನು ಕರೆಸಿ ನಾನು ಇದರ ಬಗ್ಗೆ ದೀರ್ಘವಾಗಿ ಚರ್ಚೆಮಾಡಿ, ಅವರ ಸಲಹೆ ಅವರ ಅನುಭವ ಪಡೆದುಕೊಂಡು ಅದರಂತೆ ಬಿಲ್ ತರುತ್ತೇವೆಂದು ಹೇಳಿದ್ದರು. ಆ ಕೆಲಸ ಅವರು ಮಾಡಿದ್ದರೆ ಇಷ್ಟು ಕಷ್ಟ ಆಗುತ್ತಿರಲಿಲ್ಲ. ಆ ಕೆಲಸ ಅವರು ಮಾಡಲಿಲ್ಲ. ಅದು ಅವರಿಗೆ ಬಿಟ್ಟದ್ದು. ಇವತ್ತು ಹೆಜ್ಜೆ ಹೆಜ್ಜೆಗೆ ಏನು ಹೇಳುತ್ತಿದ್ದಾರೆ. 'I have open mind'. When you have brought the Bill, it means, Government has brought the Bill after considering the pros and cons. ಇವತ್ತು ಹೆಜ್ಜೆ ಹೆಜ್ಜೆಗೆ ನಾವು ವಿಚಾರ ಮಾಡುತ್ತೇವೆ ನಾವು ಓಪನ್ ಮೈಂಡ್ ಇದ್ದೇವೆಂದರೆ ನಮಗೆ ಎಷ್ಟು ಕಷ್ಟವಾಗುತ್ತಿದೆ? ನಾವೇನು ಮಾತನಾಡಬೇಕು ಎಂದು ನಮಗೆ ಗೊತ್ತಾಗುತ್ತಿಲ್ಲ. ಹಾಗಾಗಿ ಇವತ್ತು ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕಾಗುತ್ತದೆ. ಇದರಲ್ಲಿ 15-20 ನಿಮಿಷಗಳ ಪ್ರಶ್ನೆ ಬರುವುದಿಲ್ಲ. ಯಾರಿಗೆ ಎಷ್ಟು ಸಮಯ ಬೇಕೋ ಅಷ್ಟು ತೆಗೆದುಕೊಂಡು ಬೆಳಕು ಚೆಲ್ಲಲಿ. ಏಕೆಂದರೆ ಅವರಿಗೆ ಅನುಕೂಲವಾಗುತ್ತದೆ. ಇದರಲ್ಲಿ ಏನಿದೆ, ಟೋಟಲಿ ಡೈಲೂಟ್ ಮಾಡಿದ್ದಾರೆ ಏನೂ ಉಳಿದಿಲ್ಲ. ಹಾಗಾಗಿ ತಮಗೆ ನಾನು ವಿನಂತಿ ಮಾಡುತ್ತೇನೆ ಅವರು ಹೇಳಿದ ಹಾಗೆ ಸ್ವಲ್ಪ ಸಮಯಾವಕಾಶ ಮಾಡಿಕೊಡಬೇಕಾಗುತ್ತದೆ.

ಶ್ರೀ ಎಸ್. ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಈಗ ಕೊಟ್ಟಿರುವ ಪುಸ್ತಕಕ್ಕೆ ತಿದ್ದುಪಡಿ ತರುವುದಕ್ಕೆ. ಹತ್ತಿದ್ದಾರೆ. ಈಗ ಹೇಳುತ್ತಿದ್ದಾರೆ, ನೀವು ಇದಕ್ಕೆ ಕೆಲವು ಅಮೆಂಡ್‌ಮೆಂಟ್ಸ್‌ಗಳನ್ನು ಮತ್ತೆ ಕೊಡಿ ಅಂದರೆ ಈ ಸರ್ಕಾರಕ್ಕೆ ಯಾವುದೇ ಸ್ಥಿರತೆ ಇಲ್ಲ ಎಂದಾಯಿತು. ಕಾನೂನು ಪ್ರಕಾರ ಏನು ತರಬೇಕು ಎಂದು ಮೊದಲು ನಿಮ್ಮಲ್ಲಿ ದೃಢ ನಿರ್ಧಾರ ಇರಬೇಕು. ನಿಮ್ಮ ನಿಲುವೇನು? ನೀವು ಏನು ತರುತ್ತೀರಿ? ಅಧ್ಯಕ್ಷರ ಬಗ್ಗೆ ಇಲ್ಲ; ಚುನಾವಣೆಯ ಬಗ್ಗೆ ಇಲ್ಲ, ಯಾವುದಕ್ಕೂ ಇಲ್ಲ. ನಾವು ಕೇಳಿದ್ದಕ್ಕೆಲ್ಲಾ, you say, Government has open mind. You suggest it ಎಂದು; ಆದರೆ ನೀವೇನು ಹಿಂದೆ ಹೇಳಿದಿರಿ ಅದಕ್ಕೆ ಓಪನ್ ಮೈಂಡ್ ಅಲ್ಲ, ನಮ್ಮನ್ನು ಹಿಡಿದು ಹಾಕಿದ್ದೀರಿ. ನೀವು ಓಪನ್ ಆಗಿದ್ದೀರಿ, ನಿಮ್ಮ ಬಗ್ಗೆ ಎರಡು ಮಾತಿಲ್ಲ. ನಮ್ಮನ್ನು ಹಿಡಿದು ಹಾಕಿದ್ದೀರಿ, ಏನೂ ಅಲ್ಲಾಡಿಸದ ಹಾಗೆ ಆಗಿದೆ.

ಶ್ರೀ ಎಂ. ವೈ. ಘೋರ್ಪಡೆ : ಯಾರು ಹಿಡಿದಿಲ್ಲ. ನೀವು ಹೇಳಿದ್ದನ್ನು ನಾನು ಒಪ್ಪಬೇಕಾದರೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಅಂದರೆ, ಈಗ ಅವರಲ್ಲಿ ಇದರ ಬಗ್ಗೆ. ಒಂದು ಸ್ಪಷ್ಟತೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನಿಮಗೆ ಇದೆಯೇ?

ಶ್ರೀ ವಾಟಾಳ್ ನಾಗರಾಜ್ : ತಮಗೆ ಇದ್ದರೆ ನಾವು ಸಂತೋಷಪಡುತ್ತೇವೆ. ಆದರೆ ಏನೂ ಸ್ಪಷ್ಟತೆ ಇಲ್ಲ. ಇವತ್ತು ಪತ್ರಿಕೆಗಳಲ್ಲಿ ನೋಡಿದ ಪ್ರಕಾರ ನೇರವಾಗಿ ಪಂಚಾಯತ್ ಅಧ್ಯಕ್ಷರಿಗೆ, ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಚುನಾವಣೆ ಆಗಬೇಕೇ ಎನ್ನುವುದು ಇನ್ನೂ ಗೊಂದಲದಲ್ಲಿದ್ದು, ಅಂತಿಮವಾಗಿ ಏನು ಮಾಡಿದ್ದಾರೆ ಎಂದರೆ ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ ಇದನ್ನು ಅವರ ತೀರ್ಮಾನಕ್ಕೆ ಅಂತ ಬಿಟ್ಟಿದ್ದಾರೆ. ಆದ್ದರಿಂದ ಇವರು ಮಾಡಿರತಕ್ಕಂಥ ಪ್ರತಿಯೊಂದು ತಿದ್ದುಪಡಿಯಲ್ಲಿ ಬರೇ ಗೊಂದಲವಿದೆ. ಈ ಗೊಂದಲವನ್ನು....

ಶ್ರೀ ಡಿ. ಬಿ. ಚಂದ್ರೇಗೌಡ : ಈ ಗೊಂದಲ ಯಾವುದು ಎಂದು ಹೇಳುತ್ತೇನೆ. ಶ್ರೀ ವಾಟಾಳ್ ನಾಗರಾಜ್ ಅವರು ಯಿಲ್ಡ್ ಆದರೆ ಹೇಳುತ್ತೇನೆ. ಸ್ವಾಮಿ ಇಲ್ಲಿ ಕೇಳಿ....

ಶ್ರೀ ವಾಟಾಳ್ ನಾಗರಾಜ್: ಆಡಳಿತ ಪಕ್ಷದವರೂ ಗೊಂದಲಕ್ಕೆ ಸಿಕ್ಕಿದ್ದಾರೆ. ನಾನು ಹೇಳುವಾಗ ಸ್ಪಷ್ಟವಾಗಿ ಹೇಳುತ್ತೇನೆ. ಇದರಲ್ಲಿ ಮಾನ್ಯ ಮಂತ್ರಿಗಳಿಗೆ ಕಳಕಳಿಯಿದೆ ಎಂದುಕೊಂಡಿದ್ದೇನೆ. ಆದರೆ ಅವರೂ ಕೂಡ ಬಹಳ ಗೊಂದಲಕ್ಕೆ ಸಿಕ್ಕಿದ್ದಾರೆ. ನಿನ್ನೆಯ ತೀರ್ಮಾನದ ಪ್ರಕಾರ ಏನಾಗಿದೆ? ನಾನು ಹೇಳುತ್ತಿದ್ದೇನೆ, ನಿನ್ನೆಯ ತೀರ್ಮಾನದ ಪ್ರಕಾರ ಜಿಲ್ಲಾ ಪಂಚಾಯತ್ ಅಧ್ಯಕ್ಷರನ್ನು ನೇರವಾಗಿ ಚುನಾವಣೆ ಮಾಡಬೇಕೇ ಎನ್ನುವ ಬಗ್ಗೆ ಇನ್ನೂ ಸ್ಪಷ್ಟವಾಗಿಲ್ಲ. ಅದನ್ನು ಯಾರಿಗೆ ಬಿಟ್ಟಿದ್ದಾರೆ ಎಂದರೆ, ಮುಖ್ಯಮಂತ್ರಿಗಳಿಗೆ ಬಿಟ್ಟಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ : ನಿಮ್ಮನ್ನು ಒಂದು ಮಾತು ಕೇಳಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಗೊಂದಲ ಏನೂ ಇಲ್ಲ. ಅಷ್ಟೂ ಸೌಜನ್ಯವನ್ನು ನಾವು ತೋರಿಸಬಾರದೇ? ನಾವೇ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಮಗೆ ಸಾಕಷ್ಟು ಶಕ್ತಿ ಇದೆ. ಗೊಂದಲ ಏನೂ ಇಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಈ ದಿವಸ ಮಾನ್ಯ ಚಂದ್ರೇಗೌಡರ ಭಾಷಣ ಮುಗಿದರೆ ಬಾಕಿ ಎಲ್ಲ ಮುಂದೆ ತೆಗೆದುಕೊಳ್ಳಬಹುದು. ಅವರ ಭಾಷಣ ಮುಗಿದ ನಂತರ ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ. ನಾಳೆ, ನಾಡಿದ್ದರೊಳಗೆ ಇದರ ಚರ್ಚೆ ಮುಕ್ತಾಯವಾಗಬೇಕಾಗಿದೆ. ನಾಳೆ ಅರ್ಧದಿವಸ ವಿರೋಧಪಕ್ಷದ ಸದಸ್ಯರು ಮಾತನಾಡಲಿ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನಾಳೆ ಮುಗಿಸೋಣ ಎಂದು ಸರ್ಕಾರ ಹೇಳಿದರೆ, ಇವತ್ತೇ ಮುಗಿಸಿಬಿಡುವುದು ಉತ್ತಮ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ನಾಳೆ ರಾತ್ರಿ ಹತ್ತು ಗಂಟೆಯಾಗಲಿ. ನಾಳೆ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಈ ತಿದ್ದುಪಡಿ ಮಸೂದೆ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಪ್ರತಿಯೊಬ್ಬರಿಗೂ ತಾವು ಅವಕಾಶ ಕೊಡಬೇಕು; ಅದು ಬಿಟ್ಟು ನಾಳೆ ಮಧ್ಯಾಹ್ನದವರೆಗೆ ಮಾತನಾಡಿ ಮುಗಿಸೋಣ ಎಂದರೆ, ಅದು ಸರಿಯಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಬೇಕಾದಷ್ಟು ಕಾಲ ಇದೆ; ಚರ್ಚೆಯಾಗಲಿ.

ಶ್ರೀ ಆರ್. ವಿ. ದೇಶಪಾಂಡೆ : ಸರ್ಕಾರ ಇದು ಕ್ರಾಂತಿಕಾರಕ ಮಸೂದೆ, ಇಡೀ ದೇಶಕ್ಕೆ ಮಾದರಿಯಾಗಬೇಕು ಎಂದು ಹೇಳುತ್ತಿದೆ. ಇದರ ಬಗ್ಗೆ ನಾವು ಕೇವಲ ಎರಡು ದಿವಸ ಚರ್ಚೆ ಮಾಡಿ ಮುಗಿಸಿದರೆ ಜನ ಏನು ಹೇಳಬಹುದು? ಇದರ ಬಗ್ಗೆ ವಿಸ್ತಾರವಾಗಿ ಚರ್ಚೆಯಾಗಬೇಕು. ನೀವು ಏನು ಮಾದರಿ ಮಸೂದೆ ಮಾಡಿದ್ದೀರಿ, ಜನರಿಗೆ ಏನು ಅಧಿಕಾರ ಕೊಟ್ಟಿದ್ದೀರಿ,ಇದು ಜನರಿಗೆ ಗೊತ್ತಾಗಬೇಕಲ್ಲ? ಜನರಿಗೆ ಗೊತ್ತಾಗಬೇಕಾದರೆ ಸದನದ ಪ್ರತಿಯೊಬ್ಬ ಸದಸ್ಯರೂ ಮಾತನಾಡಬೇಕು. ಈ ಸದನದ ಮೂಲಕ ನಾನು ಕಾಲ್ ಮಾಡುತ್ತೇನೆ. ಆ ಭಾಗದ ಸದಸ್ಯರೂ ಸಕ್ರಿಯವಾಗಿ ಪಾಲ್ಗೊಳ್ಳಲಿ. ಆಗ ನಮಗೆ ಅವರ ಅಭಿಪ್ರಾಯ ಏನು ಎಂದು ಗೊತ್ತಾಗುತ್ತದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಚರ್ಚೆಯ ಕಾಲಾವಕಾಶ ಕಡಿಮೆ ಮಾಡಬೇಕೆಂದು ನಾನು ಹೇಳುವುದಿಲ್ಲ. ಎಷ್ಟು ಬೇಕಾದರೂ ಚರ್ಚೆ ಮಾಡಲಿ. ಆದರೆ ಈ ದಿವಸ ಚರ್ಚೆ ಮುಗಿಸಲಿ.

ಅಧ್ಯಕ್ಷರು : ತಾವು ಸ್ಟೇಟ್‌ಮೆಂಟ್ ಮಾಡಬೇಕಲ್ಲ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಸ್ಟೇಟ್‌ಮೆಂಟ್ ಇದೆ. ಅದನ್ನು ಅವರ ಭಾಷಣ ಮುಗಿದ ಮೇಲೆ ಮಾಡುತ್ತೇನೆ.

ಅಧ್ಯಕ್ಷರು : ಅವರು ನಾಳೆ ಮಾತನಾಡುತ್ತೇನೆ ಎಂದು ಹೇಳುತ್ತಿದ್ದಾರೆ. ಉಳಿದವರು ಯಾರೂ ಇಂದು ಮಾತನಾಡುವುದಕ್ಕೆ ತಯಾರಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅನೇಕ ವಿಚಾರಗಳನ್ನು ನಾವು ನಾಳೆ ಹೇಳುತ್ತೇವೆ.

ಅಧ್ಯಕ್ಷರು : ಸರಿ; ತಾವು ಬೇಕಾದರೆ ಸ್ಟೇಟ್‌ಮೆಂಟ್ ಮಾಡಿ.

6.15 ಪಿ. ಎಂ.

ಮಂತ್ರಿಗಳ ಹೇಳಿಕೆ

ವಿಷಯ : 1. ದಿನಾಂಕ 1-4-93ರಂದು ಭಟ್ಕಳದಲ್ಲಿ ನಡೆದ ಘಟನೆ ಬಗ್ಗೆ.

* ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 1-4-93ರಂದು ಭಟ್ಕಳದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಬಂದ ನಿಲುವಳಿ ಸೂಚನೆಗೆ, ಮುಖ್ಯಮಂತ್ರಿಯವರ ಪರವಾಗಿ ಈ ಉತ್ತರವನ್ನು ಕೊಡಲಿಚ್ಛಿಸುತ್ತೇನೆ ....

ಶ್ರೀ ವಾಟಾಳ್ ನಾಗರಾಜ್ : ನಾವು ನಿಲುವಳಿ ಸೂಚನೆಯನ್ನೇ ತಂದಿಲ್ಲ. ಈ ಭಟ್ಕಳ್ ಘಟನೆ ಜೊತೆಗೆ, ಮೈಸೂರಿನ ಬಾಂಬ್ ವಿಷಯವನ್ನೂ ಹೇಳಿದ್ದೇವೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಕ್ಷಮಿಸಿ. 1-4-93ರಂದು ಭಟ್ಕಳ್‌ನಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ, ಶೂನ್ಯವೇಳೆಯಲ್ಲಿ ಬಂದ ವಿಚಾರವಾಗಿ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಉತ್ತರವನ್ನು ಕೊಡುತ್ತಿದ್ದೇನೆ. ದಿನಾಂಕ: 1-4-93ರಂದು ಭಟ್ಕಳ್‌ನಲ್ಲಿ 5TH

ಮಾರುತಿ ದೇವರ ರಥೋತ್ಸವ ಕಾರ್ಯಕ್ರಮ ಇತ್ತು. ಈ ರಥೋತ್ಸವ ಮೆರವಣಿಗೆಯಲ್ಲಿ ಸುಮಾರು 10 ಸಾವಿರ ಜನ ಪಾಲ್ಗೊಂಡಿದ್ದರು. ಈ ಕಾರ್ಯಕ್ರಮ ಮುಗಿಯುತ್ತಾ ಬರುವಾಗ, ಸುಮಾರು 6-45 ಗಂಟೆ ಸಮಯದಲ್ಲಿ, ಡಾ॥ ಅಶ್ವತ್ ಬ್ರಹ್ಮಾವರ್ ಅವರ ಮನೆಯ ಕಡೆಯಿಂದ, ಮೆರವಣಿಗೆಯ ಮೇಲೆ ಕಲ್ಲು ತೂರಲ್ಪಟ್ಟವು. ಇದರಿಂದ ಸಿಟ್ಟಿಗೆದ್ದ ಮೆರವಣಿಗೆಯಲ್ಲಿದ್ದ ಕೆಲವು ಯುವಕರು, ಡಾ॥ ಅಶ್ವತ್ ಬ್ರಹ್ಮಾವರ್ ಅವರ ಮನೆಗೆ ಕಲ್ಲು ತೂರಿದರು ಮತ್ತು ಗ್ಲಾಸ್‌ಗಳನ್ನು ಹೊಡೆದರು. ಅಲ್ಲದೆ ಮುಂದೆ ಅವರು ಬಸ್ತಿ ಮಸೀದಿಯ ಹತ್ತಿರ ನಿಲ್ಲಿಸಿರತಕ್ಕ ಕಾರುಗಳಿಗೂ ಕಲ್ಲು ತೂರಿ ಜಖಂಗೊಳಿಸಿದರು. ಹಾಗೂ ಮಸೀದಿಗೂ ಕಲ್ಲು ತೂರಿದರು. ನಂತರ ಇರಿಯುವುದು, ಲೂಟಿ, ಬೆಂಕಿ ಹಚ್ಚುವಿಕೆ ಇತ್ಯಾದಿ ಕಾನೂನುಬಾಹಿರ ಚಟುವಟಿಕೆಗಳು ಪ್ರಾರಂಭವಾದವು. ಅದೇ ದಿನ ರಾತ್ರಿ 11 ಗಂಟೆಗೆ ಒಂದು ಕೆ.ಎಸ್.ಆರ್.ಟಿ.ಸಿ. ಬಸ್ಸಿಗೆ ಕಲ್ಲು ತೂರಿ ಜಖಂಗೊಳಿಸಿದರು. ರಾತ್ರಿ 11-45 ಗಂಟೆಗೆ ಸಕ್ರಪ್ಪ ಎಂಬುವರಿಗೆ ಆಟೋದಲ್ಲಿ ಮನೆಗೆ ಹೋಗುವಾಗ, ಅಬ್ಕರಿ ಎಂಬಲ್ಲಿ ಆಟೋ ನಿಲ್ಲಿಸಿ, ಚೂರಿಯಿಂದ ತಿವಿದು ಗಾಯಗೊಳಿಸಿರುತ್ತಾರೆ. ಅದೇ ಸಮಯಕ್ಕೆ ಕೆಲವು ಜನ ಗುಂಪುಗೂಡಿಕೊಂಡು, ಮಾರಕ ಅಸ್ತ್ರಗಳನ್ನು ಹಿಡಿದು, ಒಬ್ಬನ ಮನೆಯ ಮೇಲೆ ಕಲ್ಲು ತೂರಿ, ಭತ್ತದ ಗುಡಾಣಕ್ಕೆ ಬೆಂಕಿ ಹಚ್ಚಿ, ಒಬ್ಬರಿಗೆ ಚಾಕುವಿನಿಂದ ಗಾಯಗೊಳಿಸಿರುತ್ತಾರೆ. ಅದೇ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17ರಲ್ಲಿ ನಾಗಪ್ಪ ಗೋವಿಂದ ಮುಗೇರ್ ಎಂಬುವರಿಗೆ ಕಬ್ಬಿಣದ ಸಲಾಖೆಯಿಂದ ಹೊಡೆದು ಗಾಯಗೊಳಿಸಿರುತ್ತಾರೆ. ಅಲ್ಲದೆ 24 ಗಂಟೆ ಸಮಯದಲ್ಲಿ ಮಹಮದ್ ಸಾದಿಕ್ ಆಲಿ ಸಾಹೇಬ್ ಎಂಬುವರು ತನ್ನ ಆಟೋದಲ್ಲಿ ಪುಷ್ಪಾಂಜಲಿ ಥಿಯೇಟರ್ ಹತ್ತಿರ ಹೋಗುವಾಗ ಕೆಲವು ಗಲಭೆಕೋರರು, ಸದರಿ ಆಟೋವನ್ನು ಎಸ್.ಬಿ.ಐ.ಭಟ್ಕಳದ ಹತ್ತಿರ ನಿಲ್ಲಿಸಿ ಜಖಂಗೊಳಿಸಿದರು. ದಿನಾಂಕಃ 1-4-93ರ ರಾತ್ರಿ 11 ಗಂಟೆ ಸಮಯದಲ್ಲಿ ನಸಾಭಾಗ್ ಕೂಲ್‌ಡ್ರಿಂಕ್ಸ್ ಅಂಗಡಿಯ ಹತ್ತಿರ 10-15 ಜನರ ಗುಂಪು, ಸುನಿಲ್ ಮತ್ತು ಅವರ ಸಹೋದರರ ಮೇಲೆ ಹಲ್ಲೆ ನಡೆಸಿದರು. ಅದೇ ರಾತ್ರಿ 11 ಗಂಟೆ ಸಮಯದಲ್ಲಿ ಗುಂಪೊಂದು ಶ್ರೀ ನಾಗೇಶ್ ಸಂಗಯ್ಯ ನಾಯಕ್ ಚೌತಾನಿ ಎಂಬುವರ ಮನೆಗೆ ಮುತ್ತಿಗೆ ಹಾಕಿ, ಕಿಟಕಿ ಗ್ಲಾಸುಗಳನ್ನು ಹೊಡೆದು, 12 ಸಾವಿರ ರೂಪಾಯಿಗಳಷ್ಟು ನಷ್ಟ ಉಂಟು ಮಾಡಿದರು. ದಿನಾಂಕಃ 2-4-93ರಂದು ರಾತ್ರಿ 12-15ರಲ್ಲಿ ನಾಗರಾಜ ಮಲಗಪ್ಪ ನಾಯಕ ಎಂಬುವರು ಸಿನಿಮಾ ನೋಡಿ ಮನೆಗೆ ಬರುವಾಗ, ಕೆಲವರು ಗುಂಪುಗೂಡಿ, ಕತ್ತಿ ಮತ್ತು ಚಾಕುವಿನಿಂದ ಇರಿದು ಗಾಯಗೊಳಿಸಿರುತ್ತಾರೆ. ಅದೇ ಸಮಯದಲ್ಲಿ ಮುಂಡಳ್ಳಿ ಎಂಬಲ್ಲಿ ಕುಪ್ಪ ಮುಗೇರ ಎಂಬುವನು ತನ್ನ ಸಂಗಡಿಗರೊಂದಿಗೆ ಮೀನು ಹಿಡಿಯಲು ಹೋದಾಗ, ಕೆಲವರು ಗುಂಪುಗೂಡಿಕೊಂಡು ಹಲ್ಲೆ ನಡೆಸಿ ಗಾಯಗೊಳಿಸಿರುತ್ತಾರೆ. ರಾತ್ರಿ ಎರಡೂವರೆ ಗಂಟೆ ಸಮಯದಲ್ಲಿ ಹೆಚ್.ಡಿ. ಕಾಲೋನಿ, ಎ.ಜಿ. ಶಾಸ್ತ್ರಿ ಎಂಬುವರ ಮೋಟಾರು ಸೈಕಲ್ ಸ್ಟ್ಯಾಂಡನ್ನು ಕೆಲವು ದುಷ್ಕರ್ಮಿಗಳು ನಾಶಪಡಿಸಿ, 1 ಸಾವಿರ ರೂಪಾಯಿಗಳಷ್ಟು ನಷ್ಟ ಮಾಡಿರುತ್ತಾರೆ. ರಾತ್ರಿ 12-30 ಗಂಟೆ ಸಮಯದಲ್ಲಿ ಹರೀಶ್‌ರಾಮದಾಸ್‌ಸೇಟ್, ಕಿಡ್ವಾಯ್ ರೋಡ್, ಇವರ ಆಟೋಗೆ ಬೆಂಕಿ ಹಚ್ಚಿ 30 ಸಾವಿರ ರೂಪಾಯಿ ನಷ್ಟ ಮಾಡಿರುತ್ತಾರೆ. ಅದೇ ಸಮಯದಲ್ಲಿ ಶ್ರೀ ಸಂದೀಪ್ ಗಣೇಶ್ ಸೇಟ್, ಕಿಡ್ವಾಯಿ ರೋಡ್, ಇವರ ಮನೆಯ ಹತ್ತಿರ ಇರತಕ್ಕ ಟೆಲಿಫೋನ್ ಬೂತಿಗೆ ಬೆಂಕಿ ಹಚ್ಚಿ 5 ಸಾವಿರ ರೂಪಾಯಿನಷ್ಟು ನಷ್ಟ ಉಂಟುಮಾಡಿರುತ್ತಾರೆ. ಮೇಲ್ಕಂಡ ಘಟನೆಗಳಿಗೆ ಸಂಬಂಧಿಸಿದಂತೆ, ಭಟ್ಕಳ್ ಪೋಲೀಸ್ ಠಾಣೆಯಲ್ಲಿ 13 ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. ದಿನಾಂಕಃ2-4-93ರಂದು ರಾತ್ರಿ 9 ಗಂಟೆ ಸಮಯದಲ್ಲಿ ಕೆಲವು ದುಷ್ಕರ್ಮಿಗಳು ನಸ್ತಾರೆ ಗ್ರಾಮದಲ್ಲಿರತಕ್ಕ ಒಂದು ಮಸೀದಿಗೆ ಹಾನಿ ಉಂಟುಮಾಡಿರುತ್ತಾರೆ. ರಾತ್ರಿ 9-30 ಗಂಟೆ ಸಮಯದಲ್ಲಿ ಎರಡು ಮನೆಗಳಿಗೆ ಬೆಂಕಿ ಹಚ್ಚಿ ನಾಶ ಮಾಡಿರುತ್ತಾರೆ. 12 ಜನ ಸಂಶಯಾಸ್ಪದ ವ್ಯಕ್ತಿಗಳಲ್ಲಿ ಒಬ್ಬನನ್ನು ಗುರುತಿಸಿ, ವಶಪಡಿಸಿಕೊಳ್ಳಲಾಗಿದೆ. ಬೆಳ್ಳಿ ಗ್ರಾಮದಲ್ಲಿ ಕೆಲವು ದುಷ್ಕರ್ಮಿಗಳು ಒಬ್ಬ ದಂಪತಿಗಳ ಮೇಲೆ ಹಲ್ಲೆ ನಡೆಸಿ, 106